MOTION *Re*: SCARCITY CONDITION IN THE STATE

Sri N. HUCHMASTHY GOWDA (Chandrashekarapura).—I beg to move:

"That the scarcity conditions existing in certain areas of the State and the relief measures adopted and to be adopted be taken into consideration."

Mr. SPEAKER.—Motion moved.

"That the scarcity conditions existing in certain areas of the State and the relief measures adopted and to be adopted be taken into consideration."

Before we take up the motion for discussion, we have to adjust our work. There is also a Bill, The Famine Relief Fund Bill which has a link with the motion just moved. Both cannot be taken together owing to technical difficulties. Therefore I suggest that the motion be discussed till 5.30 p.m. and the Bill may be considered in all its stages by 6 p.m. The allotted time is 6 hours.

Sri S. SIVAPPA (Sravanabelgola).—The House can accept the suggestion, Sir.

Sri C. J. MUCKANNAPPA (Sira).—Is there any abjection if we refer to the Bill while discussing the motion?

Mr. SPEAKER.—It may be referred to. In fact both are inter-linked, but for a technical objection. They could have been taken together. The first one is a motion and the other is a Bill and the procedures for both are different.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈಗ ರಾಜ್ಯದ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿರುವಂಥ ವಿಷಯ. ನಮ್ಮ ಅದೃಷ್ಟ ವಶಾತ್ ಈಗ ಎರಡು ಮೂರು ದಿವಸಗಳಿಂದ ಮಳೆ ಪ್ರಾರಂಭವಾಗಿ, ಕೆಲವು ಭಾಗಗಳಲ್ಲಿ ಖುಷ್ಕಿ ಫಸಲು, ರಾಗಿ, ಜೋಳ ವಗೈರೆ ಫಸಲಿಗೆ ಸ್ವಲ್ಪ ಸಹಾಯಕವಾಗಬಹುದು ಎಂಬ ಸೂಚನೆ ಕಂಡು ಬರುತ್ತಿದೆ. ರಾಜ್ಯದ ಬಹುಭಾಗದ ಜನ ವ್ಯವಸಾಯ ಕಸಬಿನಲ್ಲಿದ್ದರೂ ರಾಜ್ಯದ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರುತ್ತಾ ಇದೆ. ವ್ಯವಸಾಯ ದೇಶವೇ ಆಗಲಿ, ಕೈಗಾರಿಕೆ ದೇಶವೇ ಆಗಲಿ, ಎಲ್ಲ ಜನಗಳಿಗೂ ಆಹಾರ ಪದಾರ್ಥಬೇಕು. ಆದರೆ ವ್ಯವಸಾಯ ದೇಶವಾದ ನಮ್ಮ ರಾಜ್ಯದಲ್ಲ ಆಹಾರ ಅಭಾವ ಉಂಟಾಗುತ್ತಾ ಇರತಕ್ಕಂಥಾದ್ದನ್ನು ನಾವು ಗಮನದಲ್ಲಿಡಬೇಕು. ಇದು ಈ ಸಭೆಯ ಮಾನ್ಯ ಸದಸ್ಯರಿಗೆ ಮಾತ್ರವಲ್ಲ, ಇದು ಇಡೀ ದೇಶದ ಎಲ್ಲ ಜನತೆಗೆ ಸಂಬಂಧಪಟ್ಟ ಮುಖ್ಯ ವಿಷಯ.

ಈ ಅಭಾವ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವೇನು, ಅದನ್ನು ಪರಿಹಾರ ಮಾಡುವುದಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೇವೆ, ಇನ್ನೂ ಏನು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ವಿಶದವಾಗಿ ಚರ್ಚೆಮಾಡಿ, ಅದಕ್ಕೆ ಪರಿಹಾರ ಕಂಡು ಹಿಡಿಯುವುದು ಬಹಳ ಅವಶ್ಯಕ. ನಮ್ಮ ದೇಶದಲ್ಲಿ 100ಕ್ಕೆ 80 ಜನ ವ್ಯವಸಾಯಗಾರರು ಆಗಿದ್ದು, ವ್ಯವಸಾಯ ವೃತ್ತಿಯಲ್ಲಿದ್ದು ಕೂಡ, ಈ ಅಭಾವ ಪರಿಸ್ಥಿತಿ ಏತಕ್ಕೆ ಉಂಟಾಗಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು.

ಹೊಸ ಮೈಸೂರಿನಲ್ಲಿ 38 ಸಾವಿರ ಕೆರೆಗಳಿವೆ. ಅವುಗಳಲ್ಲಿ ಹತ್ತು ಎಕರೆಗಿಂತ ಕಡಮೆ ಅಚ್ಚುಕಟ್ಟು ಇರತಕ್ಕ 16,622 ಕೆರೆಗಳ ಮೇಲ್ವಿಚಾರಣೆಯನ್ನು ಪ್ರತಿವರ್ಷವೂ ಅವುಗಳಿಗೆ ಆಗಬೇಕಾದ ಕಾಮಗಾರಿಗಳನ್ನು ಮಾಡತಕ್ಕ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ವಹಿಸಿದ್ದಾರೆ. ಉಳಿದ ಕೆರೆಗಳಲ್ಲಿ ಹಳೆ ಮೈಸೂರು ಭಾಗದಲ್ಲಿ 112 ಕೆರೆಗಳನ್ನು ಬಿಟ್ಟರೆ ಉಳಿದ ಎಲ್ಲ ಕೆರೆಗಳೂ ರೆವೆನ್ಯೂ ಇಲಾಖೆಯ ಆಡಳಿತದಲ್ಲಿದ್ದು ಜೀರ್ಣೋದ್ಧಾರ ಕಾರ್ಯ ನಡೆಯುವ ಏರ್ಪಾಡಿದೆ. ಬೊಂಬಾಯಿ ಪ್ರಾಂತದ ಕೆರೆಗಳಲ್ಲಿ ಕ್ಲಾಸ್ ಒಂದು ಮತ್ತು ಎರಡು ಎಂದು ವಿಂಗಡಣೆಯಾಗಿ ಮೊದಲನೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ತರಗತಿಯ ಕೆರೆಗಳೆಲ್ಲ ಲೋಕೋಪಯೋಗಿ ಇಲಾಖೆಯ ಆಡಳಿತದಲ್ಲಿಯೂ, ಎರಡನೆಯ ತರಗತಿಯ ಕೆರೆಗಳು ರೆವೆನ್ಯೂ ಇಲಾಖೆಯ ಆಡಳಿತದಲ್ಲಿಯೂ ನಡೆಯುತ್ತಿವೆ. ಹೈದರಾಬಾದು ಭಾಗದಲ್ಲಿ ಕೆರೆಗಳೆಲ್ಲ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಮೊದಲನೆ ವರ್ಷ ಯಾವ ಯಾವ ಕೆರೆಗಳನ್ನು ದುರಸ್ತಿ ಮಾಡಬೇಕು, ಎರಡನೆ ವರ್ಷ ಯಾವುದನ್ನು ಮಾಡಬೇಕು, ಮೂರನೆ ವರ್ಷ ಯಾವುದನ್ನು ಮಾಡಬೇಕು ಎಂದು ನಿರ್ಧರಿಸಿ ಆ ಭಾಗದಲ್ಲಿ ಕೆಲಸ ನಡೆಯುತ್ತಿದೆ. ಹಳೆ ಮೈಸೂರು ಭಾಗದಲ್ಲಿ ಇದ್ದಂಥ 29 ಸಾವಿರ ಕೆರೆಗಳ ಪೈಕಿ ಅನೇಕ ಕೆರೆಗಳು ಒಡೆದು ಹೋಗಿ ಅನೇಕ ಕೆರೆಗಳಿಗೆ ಪ್ರತಿ ವರ್ಷ ಸಾಲಾಬಾದು ಕಾಮಗಾರಿಗಳನ್ನು ನಡೆಸದೆ ದುಷ್ಪರಿಣಾಮಗಳಾಗಿವೆ. ಈ ಕೆರೆಗಳನ್ನೇ ನಂಬಿಕೊಂಡಿರತಕ್ಕ ಅನೇಕ ಗ್ರಾಮಗಳವರು ಕ್ಷಾಮಕ್ಕೆ ತುತ್ತಾಗಿ ಪ್ರತಿವರ್ಷ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ರಮವಾಗಿ, ಕಾಲಕ್ಕೆ ಸರಿಯಾಗಿ ಆಗದೆ ಇದ್ದುದರಿಂದ ಅಭಾವ ಪರಿಸ್ಥಿತಿಗೆ ಮುಖ್ಯ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಸರಿಯಾಗಿರತಕ್ಕ ಕೆರೆಗಳಲ್ಲಿಯೂ ಎಷ್ಟೆಷ್ಟು ಅಚ್ಚುಕಟ್ಟು ಇರಬೇಕೋ ಅದಕ್ಕೆ ಎರಡರಷ್ಟು ಅಚ್ಚುಕಟ್ಟು ಆಗಿರತಕ್ಕ ಸಂದರ್ಭಗಳೂ ಇವೆ. ಇದರಿಂದ ಅಲ್ಲಿ ಬೆಳೆ ಸರಿಯಾಗಿ ಆಗದೆ ಅಭಾವಕ್ಕೆ ಅದೂ ಒಂದು ಮುಖ್ಯ ಕಾರಣವಾಗಿದೆ.

ಶಾಸ್ತ್ರೀಯವಾಗಿ ನೂರು ಎಕರೆ ಭೂಮಿಗೆ ಎಷ್ಟು ಕಾಡಿನ ಪ್ರದೇಶ ಇರಬೇಕು ಎನ್ನುವುದನ್ನು ಲೆಕ್ಕಹಾಕಿದರೆ ನಮ್ಮ ಭಾಗದಲ್ಲಿ ಬಹಳ ಕಡಮೆ ಕಾಡು ಇದೆ. ಕಾಡು ನಷ್ಟವಾಗುವುದಕ್ಕೆ ಕಾರಣಗಳೇನು, ಎಷ್ಟು ವರ್ಷದಿಂದ ಈ ರೀತಿಯಾಗಿದೆ, ಎಂಬುದನ್ನೆಲ್ಲ ಪ್ರಸ್ತಾಪ ಮಾಡುತ್ತ ಹೋದರೆ ಬಹಳ ಹೊತ್ತಾಗುತ್ತದೆ. ಕಾಡು ನಷ್ಟವಾಗಿರುವುದೂ ಆಹಾರಾಭಾವಕ್ಕೆ ಒಂದು ಕಾರಣ.

ಇನ್ನು ಭೂಮಿಯ ಮೇಲೆ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ. ವ್ಯವಸಾಯದ ಭೂಮಿ ತುಂಡುತುಂಡಾಗಿ ಹರಿದು ಹಂಚಿ ಹೋಗಿ Sub-division and fragmentation ಒಂದು ಎಕರೆಯಲ್ಲಿ ಎಷ್ಟು ಬೆಳೆ ಬೆಳೆಯಬೇಕೋ ಅಷ್ಟನ್ನು ಬೆಳೆಯುವುದಕ್ಕೆ ಕಷ್ಟವಾಗಿದೆ. ಇದೂ ಒಂದು ಕಾರಣವೆಂಬುದನ್ನು ನಾವು ಗಮನಿಸಬೇಕು.

ರಾಜ್ಯ ಸರ್ಕಾರಗಳಾಗಲಿ, ಕೇಂದ್ರ ಸರ್ಕಾರವಾಗಲಿ ಹಾಕಿರತಕ್ಕ ಯೋಜನೆಗಳು ಯಶಸ್ವಿಯಾಗದೆ ಇರುವುದಕ್ಕೆ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಯೂ ಬಹುಮಟ್ಟಿಗೆ ಕಾರಣವೆಂಬುದನ್ನು ನಾವು ಗಮನಿಸಬೇಕು.

ಸ್ವಾತಂತ್ರ್ಯ ಬಂದ ಮೇಲೆ 15-16 ವರ್ಷಗಳಾದರೂ ಅನೇಕ ಉಪಯುಕ್ತವಾದ ಕ್ರಮಗಳನ್ನು ಸರ್ಕಾರದವರು ಕೈಗೊಂಡಿದ್ದರೂ ಸಹ ವ್ಯಾವಸಾಯಗಾರರಲ್ಲಿ ಶ್ರದ್ಧೆ ಹುಟ್ಟದೆ ಇರುವುದೂ ಒಂದು ಕಾರಣ. ವ್ಯವಸಾಯದಿಂದ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕು, ಅದರಿಂದ ಜೀವನ ಮಾಡುವುದಷ್ಟೇ ಅಲ್ಲ ಈ ದೇಶದ ಅನೇಕ ಜನರಿಗೆ ನನ್ನ ಕೈಲಾದಷ್ಟು ಸೇವೆ ಇದರಲ್ಲಿ ಮಾಡುತ್ತೇನೆನ್ನುವ ಮನೋಭಾವ ರೈತರಲ್ಲಿ ಹುಟ್ಟದೆ ಇರುವುದಕ್ಕೆ ಕಾರಣವೇನು ಎನ್ನುವುದನ್ನೂ ನಾವು ಯೋಚಿಸಬೇಕಾದ್ದು ಮುಖ್ಯವಾದ ವಿಷಯ. ಇನ್ನೂ ಅನೇಕ ಕಾರಣಗಳನ್ನು ನಾವು ಹೇಳಬಹುದು. ಆದರೆ ಇಲ್ಲಿಯವರೆಗೆ ಈ 15-16 ವರ್ಷಗಳಲ್ಲಿ ಯಾವ ಕಾರ್ಯಕ್ರಮಗಳನ್ನು ಸರ್ಕಾರದವರು ಯೋಜನೆಗಳಲ್ಲಿ ಸೇರಿಸಿ ಕಾರ್ಯಗತ ಮಾಡುತ್ತ ಬಂದಿದ್ದಾರೋ ಅದರಿಂದ ಎಷ್ಟರಮಟ್ಟಿಗೆ ಪರಿಣಾಮವುಂಟಾಗಿದೆ ಎನ್ನುವುದನ್ನು ಕೂಡ ನಾವು ಆಲೋಚನೆ ಮಾಡಬೇಕಾಗುತ್ತದೆ.

ಸ್ವಾಮಿ ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಅದರಲ್ಲಿಯೂ ಮುಖ್ಯವಾಗಿ ಎರಡನೆ ಮತ್ತು ಮೂರನೆ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಹೆಚ್ಚಾಗಿ ಬೆಳೆಸುವ ಪ್ರಯತ್ನ ನಡೆಯಿತು. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಗೊತ್ತಿರತಕ್ಕ ಅಂಕಿಅಂಶಗಳ ಪ್ರಕಾರ 72,600 ಎಕರೆಯಲ್ಲಿ ಗಿಡ ನೆಟ್ಟಿದ್ದಾರೆ. ಅದರ ಜೊತೆಗೆ ಮೃದುವಾದ ಮರಗಳನ್ನು ನೆಡಿಸಿರುವುದು, 2623 ಎಕರೆಯೊಳಗೆ ಎಂದು ಅಂಕಿ-ಅಂಶಗಳಿಂದ ಗೊತ್ತಾಗುತ್ತದೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ನೀಲಗಿರಿ ಎಣ್ಣೆಯ ಮರಗಳನ್ನು 40 ಸಾವಿರ ಎಕರೆಗಳಲ್ಲಿಯೂ, ತೇಗದ ಮರಗಳನ್ನು 52 ಸಾವಿರ ಎಕರೆಗಳಲ್ಲಿಯೂ ಮೃದು ಮರಗಳನ್ನು 12,000 ಎಕರೆಗಳಲ್ಲಿಯೂ, ಬಿದಿರು ಮರಗಳನ್ನು 5,000 ಎಕರೆಗಳಲ್ಲಿಯೂ ಬೆಳೆಸಬೇಕೆಂದು ಅದಕ್ಕೆ ಹಣವನ್ನು ಒದಗಿಸಿ ಕೆಲಸ ಮಾಡುತ್ತಿದ್ದಾರೆ. ಇದು ಈಗ ನಡೆದಿರತಕ್ಕ ಮುಖ್ಯವಾದ ಕೆಲಸ.

ಎರಡನೆಯದು ಬಾವಿಗಳನ್ನು ತೋಡಿಸತಕ್ಕ ಯೋಜನೆಯಲ್ಲಿ ಕಳೆದ ವರ್ಷ ಸುಮಾರು 10,000 ಬಾವಿಗಳನ್ನು ತೋಡಿಸಬೇಕೆಂದು ಒಂದು ವಿಶೇಷ ಯೋಜನೆಯನ್ನು ಹಾಕಿಕೊಂಡು ಒಂದು ಬಾವಿಗೆ ಮೂರು ಸಾವಿರ ರೂಪಾಯಿ ಪ್ರಕಾರ ಸಾಲಕೊಟ್ಟು ಬಾವಿಗಳನ್ನು ತೆಗೆಸುವುದಕ್ಕೆ

ಮತ್ತು ಬಾವಿಗೆ ಪಂಪುಗಳನ್ನು ಹಾಕಿಸುವುದಕ್ಕೆ ಒಂದು ಏರ್ಪಾಡು ನಡೆದಿದೆ. ಇದರಿಂದ ಸಾವಿರಾರು ಎಕರೆ ಭೂಮಿ ನೀರಾವರಿಗೆ ಬಂದು ಆಹಾರ ಧಾನ್ಯಗಳನ್ನು ಬೆಳೆಸುವುದಕ್ಕೆ ಸಹಾಯಕವಾಗಿದೆ.

ದೊಡ್ಡ ದೊಡ್ಡ ಜಲಾಶಯಗಳ ನಿರ್ಮಾಣ ತಮಗೆಲ್ಲರಿಗೂ ಗೊತ್ತಿರತಕ್ಕ ವಿಷಯ. ಇದರ ಜೊತೆಗೆ ಸಣ್ಣ ನೀರಾವರಿ ಕಾಮಗಾರಿಗಳ ಕೆಲಸ ನಡೆಯುವುದಕ್ಕೆ ಪ್ರಾರಂಭವಾಗಿದೆ. ಎಲ್ಲೆಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಬೇಕು, ಅಣೆಗಳನ್ನು ಕಟ್ಟಬೇಕು, ಬಂಡಾರಗಳನ್ನು ಕಟ್ಟಬೇಕು, ಎಂದು ಅದಕ್ಕೆಲ್ಲ ಅಂದಾಜುಗಳನ್ನು ತಯಾರು ಮಾಡಿಸಿ ಈ ಕೆಲಸ ಆದಷ್ಟು ಬೇಗ ನಡೆಯಬೇಕು ಎನ್ನುವ ಉದ್ದೇಶದಿಂದ ಕೆಲಸ ಪ್ರಾರಂಭ ಮಾಡಿದ್ದಾರೆ.

ಇದೂ ಅಲ್ಲದೆ ರೈತ ತನ್ನದೇ ಆದ ಭೂಮಿ ಇದ್ದರೆ ಭೂಮಿ ನನ್ನದು, ಅದರಿಂದ ಬರತಕ್ಕ ಲಾಭವೆಲ್ಲ ನನಗೇ ಬರುತ್ತದೆ ಎನ್ನುವ ಭಾವನೆಯಿಂದ ಆತನು ಹೆಚ್ಚು ಶ್ರದ್ಧೆ ವಹಿಸಲಿ ಎನ್ನುವ ಕಾರಣದಿಂದ ಜೋಡಿ ಮತ್ತು ಇನಾಂ ಗ್ರಾಮಗಳನ್ನು ರದ್ದುಮಾಡಿ ವಾರ ಸಾಗುವಳಿಯಲ್ಲಿ ಇದ್ದಂಥ ಅನೇಕ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಕಾನೂನನ್ನು ಸಹ ಮಾಡಿದ್ದಾರೆ. ಇಷ್ಟೇ ಅಲ್ಲದೆ ವ್ಯವಸಾಯಗಾರನು ತನ್ನ ಭೂಮಿಯಲ್ಲಿ ವ್ಯವಸಾಯ ಮಾಡುವುದಕ್ಕೆ ಸಹಾಯವಾಗುವ ಹಾಗೆ ಅನೇಕ ರಸ್ತೆ ಕಾಮಗಾರಿಗಳನ್ನು ಮಾಡಿ ಅವನು ಬೆಳೆಯುವಂಥ ಪದಾರ್ಥಗಳನ್ನು ಸಾಗಿಸುವುದಕ್ಕಾಗಲಿ, ತಾನು ಜಮೀನಿಗೆ ಬೇಕಾದ ಗೊಬ್ಬರ ವಗೈರೆ ಸಾಗಿಸುವುದಕ್ಕಾಗಲಿ ಅನುಕೂಲ ಮಾಡಿಕೊಟ್ಟಿದ್ದಾರೆ.

ಇಷ್ಟಲ್ಲದೆ ಅನೇಕ ಪರಿಶೋಧನಾಲಯಗಳನ್ನು ದೇಶದ ಎಲ್ಲ ಕಡೆಯೂ ಮಾಡಿ ಉತ್ತಮವಾದ ತಳಿಯ ಬೀಜಗಳನ್ನು ಕಂಡು ಹಿಡಿಯುವುದರಿಂದ ರೈತರಿಗೆ ಅದರಿಂದಲೂ ತಕ್ಕಮಟ್ಟಿಗೆ ಸಹಾಯ ಆಗಿದೆ. ಬಹು ಮುಖ್ಯವಾದ ಕೃತಕ ಗೊಬ್ಬರಗಳ ಉಪಯೋಗ ರೈತನಿಗೆ ತಿಳಿಯುವ ಹಾಗೆ ಪ್ರಚಾರಗಳನ್ನು ನಡೆಸಿ ಅದರಿಂದ ಉಪಯೋಗವನ್ನು ಪಡೆಯುವುದಕ್ಕೆ ಏರ್ಪಾಡಾಗಿದೆ. ಇಷ್ಟೇ ಅಲ್ಲ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿಯೂ ಒಂದೊಂದು ಸೇವಾಸಹಕಾರ ಸಂಘವನ್ನು ಮಾಡಿ ಅವುಗಳ ಮೂಲಕ ಅಲ್ಪಾವಧಿ, ಮಾಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಕೊಡುವುದಕ್ಕೆ ಏರ್ಪಾಡು ನಡೆದಿದೆ. ಕಾಂಟೂರ್ ಬಂಡಿಂಗ್ ಆಗಿದೆ. ಬಿಜಾಪುರ ಜಿಲ್ಲೆಯಲ್ಲಿ ಈ ಕೆಲಸ ಬಹಳ ಹೆಚ್ಚಾಗಿ ನಡೆದಿದೆ. ಪೈಲಟ್ ಸ್ಕೀಮುಗಳಿರುವ ಕಡೆ, ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಂಟೂರ್ ಬಂಡಿಂಗ್ ಕೆಲಸ ಬಹಳ ಯಶಸ್ವಿಯಾದ ಮಟ್ಟದಲ್ಲಿ ಆಯಿತು. ಹೀಗಿದ್ದರೂ ಕೂಡ ದೇಶದಲ್ಲಿ ಅಭಾವ ಪರಿಸ್ಥಿತಿ ಇರುವುದಕ್ಕೆ ಕಾರಣವೇನು ? ಇದರ ಕಡೆ ನಾವು ಹೆಚ್ಚು ಗಮನ ಕೊಡಬೇಕು. ಎಷ್ಟೋ ಕಾರ್ಯಕ್ರಮಗಳು ನಮ್ಮ ಮುಂದೆ ಇದ್ದು ಅವುಗಳನ್ನು ಕಾರ್ಯಗತ ಮಾಡಿದ್ದರೂ ಕೂಡ ಇವತ್ತು ನಮ್ಮ ಹಳ್ಳಿಗಾಡುಗಳ ಸ್ಥಿತಿ ಯಾವ ರೀತಿ ಇದೆ ಎಂದರೆ ರೈತನಿಗೆ ವ್ಯವಸಾಯದ ಉಪಕರಣಗಳಿಗೆ ಕಬ್ಬಿಣ ಬೇಕು ಎಂದರೆ ಕಾಲಕ್ಕೆ ಸರಿಯಾಗಿ ಕಬ್ಬಿಣ ಸಿಕ್ಕುವುದಿಲ್ಲ, ಅವನಿಗೆ ಅಲ್ಪಸ್ವಲ್ಪ ಕೆಲಸಗಳಿಗೆ ಸಿಮೆಂಟ್ ಬೇಕಾದರೆ ಅದು ಸಿಕ್ಕುವುದಿಲ್ಲ, ನೀರಾವರಿ ಕಾಮಗಾರಿಗಳಿಗೆ ಸಿಮೆಂಟು ಬೇಕು ಎಂದರೆ ಕಾಲಕ್ಕೆ ಸರಿಯಾಗಿ ಸಿಮೆಂಟು ಸಿಕ್ಕುವುದಿಲ್ಲ. ಪಟ್ಟಣಗಳಲ್ಲಿ ನೂರಾರು ಕಟ್ಟಡಗಳಿಗೆ ಸಾವಿರಾರು ಮೂಟೆಗಳ ಸಿಮೆಂಟು ಉಪಯೋಗವಾಗುತ್ತ ಇರುವಾಗ—ನಾವು ಪ್ರತಿನಿತ್ಯ ಕಣ್ಣಾರೆ ನೋಡುತ್ತಿರುತ್ತೇವೆ—ಅತ್ಯಂತ ಅವಶ್ಯಕತೆ ಇರತಕ್ಕ ನೀರಾವರಿ ಕಾಮಗಾರಿಗಳಿಗೆ ಸಿಮೆಂಟು ಬೇಕು ಎಂದರೆ ಸಿಕ್ಕುವುದಿಲ್ಲ.

ಸುರ್ಕಿ ಮಾರ್ಟರ್‌ನಿಂದ ಮಾಡಿ ಎಂದು ತಿಳಿವಳಿಕೆ ಕೊಡಲಾಗುತ್ತಿದೆ. ಇಂದು ಇಂಥ ಪರಿಸ್ಥಿತಿ ದೇಶದಲ್ಲಿದೆ. ಎಷ್ಟು ಬೇಕೋ ಅಷ್ಟು ಕೃತಕ ಗೊಬ್ಬರ ರೈತನಿಗೆ ಸಕಾಲದಲ್ಲಿ ಸಿಕ್ಕುವುದಿಲ್ಲ. ಇದನ್ನು ಸ್ವಲ್ಪ ಯೋಚನೆ ಮಾಡತಕ್ಕದ್ದು ಅಗತ್ಯ.

ಇನ್ನು ಮುಂದೆ ಅಗತ್ಯವಾಗಿ ಮಾಡಬೇಕಾದ ಕೆಲಸಗಳ ಕಡೆಗೆ ಗಮನ ಕೊಡಬೇಕು. ಅತಿ ಮುಖ್ಯವಾದ ವಿಷಯ ಎಂದರೆ ಪ್ರತಿಯೊಂದು ನದಿ ಕಣಿವೆಯಲ್ಲಿ ನೀರಿನ ಪ್ರಮಾಣ ಎಷ್ಟು, ಎಷ್ಟು ನೀರು ಉಪಯೋಗವಾಗಿದೆ, ಎಷ್ಟು ಉಪಯೋಗ ಮಾಡಿಕೊಳ್ಳಲು ಸಾಧ್ಯವಿದೆ ಎಂಬುದಕ್ಕೆ ಪ್ರತಿಯೊಂದು ನದಿ ಕಣಿವೆ ಸರ್ವೆ ಮಾಡಿಸಬೇಕಾದುದು ಅಗತ್ಯವಾಗಿದೆ. ಎಷ್ಟು ನೀರಾವರಿಯಾಗಬೇಕು ಎನ್ನುವುದನ್ನು ಸರ್ವೆ ಮಾಡಿಸಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿ ನೂರಾರು ನೀರಾವರಿ ಕೆಲಸ ಮಾಡಲು ಅವಕಾಶವಿದೆ. ಈಗ ಇರುವ ಸಿಬ್ಬಂದಿ ಮೂಲಕ 30-40 ವರ್ಷವಾದರೂ ಸರ್ವೆ ಕೆಲಸ ಆಗುವುದಿಲ್ಲ. ಆದ್ದರಿಂದ ಒಂದು ವಿಶೇಷ ಸಿಬ್ಬಂದಿ ನೇಮಕ ಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿ ಮೈನರ್ ಇರಿಗೇಷನ್ ಎಷ್ಟು ಸಾಧ್ಯವಿದೆ ಎಂಬುದನ್ನು ಸರ್ವೆ ಮಾಡಿಸಿ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡತಕ್ಕ ಯೋಜನೆ ಸರಕಾರ ತೀವ್ರ ಕೈಕೊಳ್ಳುವುದು ಅವಶ್ಯಕ. ಎಲ್ಲ ಕೆರೆಗಳ ಸಾಲಾಬಾದು ಕಾಂಗಾರಿ ಮತ್ತು ಮೇಲ್ವಿಚಾರಣೆಯನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಬೇಕು. ಇದಕ್ಕೆ ಬೇಕಾದ ಹಣ, ಸಿಬ್ಬಂದಿ ಮತ್ತು ಇತರೇ ಸೌಕರ್ಯಗಳನ್ನು ಕಲ್ಪಿಸಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಕೊಡಬೇಕು. ಇನ್ನು ಯಾವ ಯಾವ ಪ್ರದೇಶದಲ್ಲಿ ಮಳೆಯಾಗುತ್ತದೆ, ಯಾವ ಕಾಲದಲ್ಲಿ ಮಳೆಯಾಗುತ್ತದೆ, ಯಾವ ವರ್ಷಗಳಲ್ಲಿ ಮಳೆ ಆಗುವುದು ತಪ್ಪಿ ಹೋಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಮಳೆ ಎಷ್ಟಾಗುತ್ತದೆ ಎಂಬುದನ್ನು ಶಾಸ್ತ್ರೀಯವಾಗಿ ತಿಳಿದುಕೊಳ್ಳಬೇಕು. ಅಭಾವ ಪ್ರದೇಶದಲ್ಲಿ ರೇನ್ ಗೇಜ್ ಇಟ್ಟು ಎಷ್ಟು ಮಳೆಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳದ ಹೊರತು ಒಂದು ಯೋಜನೆ ಹಾಕುವುದು ಕಷ್ಟ. ಇನ್ನು ಕಡಿಮೆ ಮಳೆ ಇರತಕ್ಕ ಪ್ರದೇಶದಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬ ಒಂದು ಯೋಜನೆ ಹಾಕಿಕೊಳ್ಳುವುದು ಅವಶ್ಯಕ. ಯೂರೋಪ್ ಮುಂತಾದ ದೇಶದಲ್ಲಿ ಐದು ಹತ್ತು ಅಂಗುಲ ಮಳೆಯಾಗುವ ಪ್ರದೇಶದಲ್ಲಿ ಅಲ್ಲಿಯ ರೈತರು ಬೇರೆ ಕಸಬು ಇಟ್ಟುಕೊಂಡಿರುತ್ತಾರೆಂದು ಅಲ್ಲಿ ಪ್ರವಾಸ ಮಾಡಿ ಬಂದಿರತಕ್ಕ ನಮ್ಮ ಮಂತ್ರಿಗಳಿಗೆ ಗೊತ್ತಿದೆ. ಕೋಳಿ ಸಾಕುವುದು ಡೈರಿ ಇಟ್ಟು ಹಾಲು ಮಾರಿ ಉತ್ಪತ್ತಿ ಹೆಚ್ಚು ಮಾಡಿಕೊಳ್ಳುವುದು ಮುಂತಾದ ಕಸಬು ಇಟ್ಟುಕೊಂಡಿರುತ್ತಾರೆ. ಇದನ್ನು ಸಹ ಯೋಚನೆ ಮಾಡಬೇಕಾದುದು ಅಗತ್ಯ. ಇದಲ್ಲದೆ, ಮಳೆ ಕಡಿಮೆಯಾಗತಕ್ಕ ಪ್ರದೇಶದಲ್ಲಿ ಯಾವ ತಳಿ ಬೀಜ ಬಿತ್ತನೆ ಮಾಡಬೇಕೋ ಅಂಥಾದ್ದನ್ನು ಒದಗಿಸಬೇಕು. ಪರಿಶೋಧನಾಲಯಗಳಲ್ಲಿ ಇಂಥ ತಳಿಬೀಜಗಳನ್ನು ಕಂಡುಹಿಡಿಯಲು ಗಮನ ಕೊಡಬೇಕು. ವ್ಯಾವಸಾಯದ ಕಸುಬು ಲಾಭದಾಯಕವಾಗಿರಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಒಂದು ಎಕರೆ ಭೂಮಿಯಲ್ಲಿ ರಾಗಿ ಬಿತ್ತನೆಯಿಂದ ಎಷ್ಟು ಉತ್ಪತ್ತಿ ಬರುತ್ತದೆಯೋ ಅದಕ್ಕಿಂತ ಎರಡು ಮೂರರಷ್ಟು ಲಾಭ ಸರ್ವೆ ತೋಪಿನಿಂದ ಬರುತ್ತದೆ. ಸರ್ವೆ ತೋಪು ಹಾಕಬೇಕೆಂದು ರೈತನ ಮನಸ್ಸು ಹೋಗುತ್ತದೆ. ಒಂದು ಎಕರೆ ಭೂಮಿಯಲ್ಲಿ ರಾಗಿ ಬಿತ್ತುವುದರಿಂದ ಖರ್ಚು ಹೋಗಿ ಒಂದು ನೂರು ರೂಪಾಯಿ ಸಹ ಸಿಕ್ಕುವುದಿಲ್ಲ. ಸರ್ವೆ ತೋಪಿನಿಂದ 300 ರಿಂದ 500 ರೂಪಾಯಿವರೆಗೆ ಸಿಕ್ಕುತ್ತದೆ. ಆದುದರಿಂದ ರೈತರು ಬಿತ್ತ ರಾಗಿ ಬೆಳೆಯುವುದನ್ನು ಬಿಟ್ಟು ಇಂದು ಸರ್ವೆ ತೋಪು ಹಾಕುವ ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ. ಯಾವ ಯಾವ ಆಹಾರ ಧಾನ್ಯಕ್ಕೆ ಉತ್ಪತ್ತಿ ಖರ್ಚು ಎಷ್ಟು ಆಗುತ್ತದೆ, ಲಾಭ ಎಷ್ಟು ಬರುತ್ತದೆ ಎಂಬುದನ್ನು ಲೆಕ್ಕ ಹಾಕಿ ಬೆಲೆ ನಿಗದಿ ಮಾಡುವುದನ್ನು ಯೋಚನೆ ಮಾಡಬೇಕು. ಕನಿಷ್ಟ ಇಷ್ಟು ಲಾಭ ಒಂದು ಎಕರೆಗೆ ದೊರೆಯುತ್ತದೆ ಎಂಬ ನಂಬಿಕೆ ರೈತನಿಗೆ ಬರಬೇಕು. ಇಲ್ಲದಿದ್ದರೆ ರೈತ ಕಷ್ಟಪಡಲು ಇಷ್ಟ ಪಡುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ರೈತ ಜೀವನ ಮಾಡುವುದು ಕಷ್ಟವಾಗಿದೆ. ಈ ಪರಿಸ್ಥಿತಿ ನಾವು ಮರೆಯಬಾರದು. ಪಟ್ಟಣಗಳಲ್ಲಿ ಕಮರ್ಷಿಯಲ್ ಕ್ರಾಪ್ ಬೆಳೆಯುತಕ್ಕಂಥವರಿಗೆ, ಅಡಿಕೆ ತೋಟ ಇಟ್ಟಿರತಕ್ಕಂಥವರಿಗೆ ಕಾಫಿ ತೋಟದವರಿಗೆ ವ್ಯಾವಸಾಯ ಲಾಭದಾಯಕವಾಗಿ ಕಾಣಬಹುದು. ಆದರೆ ಆಹಾರ ಧಾನ್ಯ ಬೆಳೆಯುತಕ್ಕಂಥ ಹಳ್ಳಿಗಾಡಿನ ಪರಿಸ್ಥಿತಿ ಸುಧಾರಿಸುವುದು ಬಹಳ ಕಷ್ಟವಾಗಿದೆ. ಹಳ್ಳಿಯಲ್ಲಿ ರೈತನ ಸ್ಥಿತಿ ಉತ್ತಮವಾಗೊಳ್ಳಬೇಕಾದರೆ ಒಂದು ನಿರ್ದಿಷ್ಟ ಕನಿಷ್ಟ ಬೆಲೆಯನ್ನು ಪ್ರತಿಯೊಂದು ಆಹಾರ ಧಾನ್ಯಕ್ಕೂ ಕೊಡಬೇಕು. ಒಂದು ನಿರ್ದಿಷ್ಟ ಬೆಲೆ ಕೊಡುತ್ತೇವೆಂದು ಸರಕಾರ ರೈತನಿಗೆ ಗ್ಯಾರಂಟಿ ಕೊಡಬೇಕೆಂದು ಹೇಳಲು ಇಷ್ಟ ಪಡುತ್ತೇನೆ.

ಇನ್ನು ರೈತನಿಗೆ ವರ್ಷದ ಎಲ್ಲಾ ಕಾಲದಲ್ಲಿಯೂ ಸಮನಾಗಿ ಕೆಲಸವಿರುವುದಿಲ್ಲ. ಕೆಲವು ಕಾಲದಲ್ಲಿ ಹೆಚ್ಚು ಕೆಲಸವಿರುತ್ತದೆ. ಕೆಲವು ಕಾಲದಲ್ಲಿ ಕೆಲಸವೇ ಇರುವುದಿಲ್ಲ. ಕೆಲಸವಿಲ್ಲದ ಕಾಲದಲ್ಲಿ ಒಂದು ಸರಿಯಾದ ಕಸಬು, ಉದ್ಯೋಗ ಇರುವ ಹಾಗೆ ವ್ಯವಸ್ಥೆ ಮಾಡಬೇಕು. ಒಂದು ಉಪ ಕಸಬು ಕಲ್ಪಿಸಿಕೊಟ್ಟು ದಿವಸಕ್ಕೆ ಎಂಟು ಗಂಟೆ ಕೆಲಸ ಮಾಡುವ ಹಾಗೆ ಅವಕಾಶ ಕಲ್ಪಿಸಿಕೊಡಬೇಕು. ಪಟ್ಟಣಗಳಲ್ಲಿ ಬೇಕಾದಷ್ಟು ಕೈಗಾರಿಕೆಗಳು ಇವೆ. ಹಳ್ಳಿಗಾಡಿನಲ್ಲಿ ಬಡವನಿಗೆ ಯಾವ ಕಸಬು ಇಲ್ಲ. ಆದರಿಂದ ಅವನ ಜೀವನ ಕಷ್ಟವಾಗಿದೆ. ಅವನ ಸ್ಥಿತಿ ಉತ್ತಮಪಡಿಸಲು ಸಾಧ್ಯವಾಗಿಲ್ಲ. ಆದುದರಿಂದಲೇ ರೈತನಿಗೆ ಆಹಾರ ಧಾನ್ಯ ಬೆಳೆಯಲು ಮನಸ್ಸು ಇಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು.

ಇನ್ನು ವ್ಯವಸಾಯದ ಉಪಕರಣಗಳ ವಿಷಯ. ವ್ಯವಸಾಯದ ಉಪಕರಣಕ್ಕೆ ಕಬ್ಬಿಣ ಬೇಕು ಎಂದರೆ ಕಬ್ಬಿಣ ಸಿಕ್ಕುವುದಿಲ್ಲ. ಕಬ್ಬಿಣದ ನೇಗಿಲ ಗುಳಗಳಿಗೆ ಬೇಕಾಗುವ ಉಕ್ಕು ಒದಗಿಸುವ ವ್ಯವಸ್ಥೆ ಇಲ್ಲ. ಇದನ್ನು ಪ್ಲಾನಿಂಗ್ ಕಮಿಷನ್ ಆಗಲಿ ರಾಜ್ಯ ಸರಕಾರವಾಗಲಿ ಯೋಚನೆ ಮಾಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಕಬ್ಬಿಣದ ನೇಗಿಲಿನ ಒಂದು ಗುಳಕ್ಕೆ ಮೂರು ಮೂರೂವರೆ ರೂಪಾಯಿ ಬೆಲೆಯಾಗುತ್ತದೆ. ಮೂರು ದಿವಸದಲ್ಲಿ ಅದು ಸವೆದು ಹೋಗುತ್ತದೆ. ಅದನ್ನು ಸ್ಟೀಲ್ ಅಥವಾ ಅಲಾಯ್ ದಿಂದ ತಯಾರಿಸಿ ಒದಗಿಸಲು ವ್ಯವಸ್ಥೆ ಮಾಡುವುದಕ್ಕೆ ಸರಕಾರ ಗಮನ ಕೊಡಬೇಕು. ಈ ಬಗ್ಗೆ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ತೊಂದರೆ, ನಿವಾರಣೆಯಾಗುವುದೆಂಬ ಭರವಸೆ ದೊರಕಬೇಕು ರೈತರಿಗೆ.

ಇನ್ನು ಭೂಮಿ ಪರೀಕ್ಷೆ ನಡೆಸಿ ಮಣ್ಣಿನಲ್ಲಿ ಎಷ್ಟೆಷ್ಟು ಸಾರ ಅಂಶ ಇದೆ, ಎಂಥ ಗೊಬ್ಬರ ಉಪಯೋಗಿಸ ಬೇಕು, ಭೂಮಿಯ ಸಾರ ಹೇಗೆ ಹೆಚ್ಚೆಚ್ಚು ಮಾಡಬೇಕು ಎಂಬುದಕ್ಕೆ ಸಾಯಿಲ್ ಅನಾಲಸಿಸ್ ಮಾಡಬೇಕಾದುದು ಅವಶ್ಯಕ. ಅದಕ್ಕೆ ತಕ್ಕಂತೆ ಮಿಶ್ರ ಗೊಬ್ಬರ ತಯಾರಿಸಿ ಇಂಥ ಭೂಮಿಯಲ್ಲಿ ಇಂಥ ಗೊಬ್ಬರ ಉಪಯೋಗಿಸ ಬೇಕು ಎಂಬ ತಿಳುವಳಿಕೆ ರೈತನಿಗೆ ಕೊಡಬೇಕು. ವ್ಯವಸಾಯ ಇಲಾಖೆ ಈ ಕೆಲಸ ಮಾಡಿ ರೈತನ ತಿಳುವಳಿಕೆ ಹೆಚ್ಚಿಸಬೇಕು. ಈಗ ಇರತಕ್ಕ ರೈತನ ಪರಿಸ್ಥಿತಿ ಬದಲಾವಣೆ ಯಾಗಬೇಕಾದುದು ಅಗತ್ಯ. ಇವತ್ತು ರೈತ ತನ್ನ ತಾತ ಮುತ್ತಾತರ ಕಾಲದಿಂದ ನಡೆದುಕೊಂಡು ಬಂದಿರತಕ್ಕಂಥ ಹಳೇ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾನೆ.

2-00 P.M.

ಭೂಮಿಯನ್ನು ಅನಲೈಸ್ ಮಾಡಿಸುವುದಾಗಲಿ, ತಕ್ಕಂಥ ಗೊಬ್ಬರ ಉಪಯೋಗಿಸುವುದಾಗಲಿ, ಉತ್ತಮವಾದ ಉಪಕರಣಗಳನ್ನು ಉಪಯೋಗಿಸುವುದಾಗಲಿ, ಇತರ ಸೌಕರ್ಯಗಳಿಂದ ಒಂದೇ ತರಹ ವ್ಯವಸಾಯ ಮಾಡುವುಕ್ಕೆ ಬದಲಾಗಿ ಭೂಮಿಯಲ್ಲಿ ಆಹಾರ ಧಾನ್ಯ ಬೆಳೆಯುವುದರ ಜೊತೆಗೆ ಕೋಳಿ ಸಾಕಾಣಿಕೆಯಂತಹ ಯೋಜನೆಗಳೂ ಸರ್ಕಾರದ ಮುಂದೆ ನಿರ್ದಿಷ್ಟವಾಗಿ ಇರಬೇಕು. ಅಂತೂ ಎಷ್ಟೇ ಈ ಯೋಜನೆಗಳನ್ನು ಹಾಕಿಕೊಂಡರೂ ಕೂಡ ಜನಸಂಖ್ಯೆಯ ಮೇಲೆ ಹತೋಟಿ ಇಲ್ಲದೇ ಹೋದರೆ ನಮ್ಮ ಯೋಜನೆಯೆಲ್ಲಾ ಯಶಸ್ವಿಯಾಗದೇ ಇರುವುದು ಅಷ್ಟು ಮಾತ್ರವಲ್ಲ ನಾವೆಲ್ಲಾ ಕಣ್ಣು ಬಾಯಿ ಬಿಡಬೇಕಾದ ಸಮಸ್ಯೆ ಬರುತ್ತದೆ. ಯಾವ ಸಮಸ್ಯೆಯನ್ನಾದರೂ ಬಗೆಹರಿಸಬಹುದು ಆಹಾರ ಸಮಸ್ಯೆಯನ್ನು ಬಗೆಹರಿಸುವುದು ಅಸಾಧ್ಯ ಎಂದು ಅನ್ನಿಸುತ್ತದೆ. ಈ ಜನಸಂಖ್ಯೆಯ ಬೆಳವಣಿಗೆಯ ಮೇಲೆ ಪೂರ್ಣ ಹತೋಟಿ ಇಟ್ಟುಕೊಳ್ಳುವುದು ಅವಶ್ಯಕ ಇದನ್ನು ಸರ್ಕಾರದವರು ಕಡ್ಡಾಯವಾಗಿ ಸಾಧಿಸಬೇಕು. ಇನ್ನೂ ಆಹಾರದ ಅಭಾವ ಉಂಟಾಗದೇ ಇರಬೇಕಾದರೆ ಚೈನಾ ದೇಶದ ಮೇಲೆ ಆಗಲಿ ಅಥವಾ ಇತರ ಪರರಾಷ್ಟ್ರದವರು ನಮ್ಮ ಮೇಲೆ ಕಾಲು ಕೆರೆದು ಕೊಂಡು ಬರ ತಕ್ಕ ರಾಷ್ಟ್ರಗಳ ಮೇಲೆ ಯುದ್ಧ ಮಾಡುವುದಕ್ಕೆ ಏನು ಸಿದ್ಧತೆ ಮಾಡಿಕೊಳ್ಳುತ್ತೇವೆಯೋ ಈ ಆಹಾರ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಯುದ್ಧಕ್ಕಿಂತ ಹೆಚ್ಚಿನ ಒಂದು ಸಿದ್ಧತೆಯನ್ನು ಮಾಡಿ ಕೊಂಡು ಹೋರಾಟ ನಡೆಸಬೇಕು. ಈ ಒಂದು ರೀತಿ ಆಗದಿದ್ದರೆ ನಮ್ಮ ದೇಶದಲ್ಲಿ ಆಹಾರ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಅಸಾಧ್ಯ ಎಂದು ನಾನು ಭಾವಿಸುತ್ತೇನೆ. ಸಣ್ಣ ಕಾಂಗಾರಿಗಳ ವಿಷಯದಲ್ಲಿ ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮಾಸ್ಟರ್ ಪ್ಲ್ಯಾನ್ ತಯಾರು ಮಾಡಿ ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಯಶಸ್ವಿಯಾಗಿ ಸಂಪೂರ್ಣಗೊಳಿಸತಕ್ಕ ಕೆಲಸ ಬಹಳ ಮುಖ್ಯ ಎಂದು ಭಾವಿಸುತ್ತೇನೆ. ಮಾನ್ಯ ಸದಸ್ಯರೆಲ್ಲರ ತಲೆಯಲ್ಲಿ ಪ್ರತಿ ವರ್ಷ ಈ ಸಮಸ್ಯೆ ಬಂದು ಅವರು ಯೋಚನೆ ಮಾಡಬೇಕಾಗಿ ಬಂದಿದೆ. ಇದನ್ನು ಹೇಗೆ ಪರಿಹರಿಸಬೇಕು ಯಾವ ರೀತಿ ಹಣ ಒದಗಿಸಿಕೊಡ ಬೇಕೆನ್ನುವ ವಿಷಯದಲ್ಲಿ ನನಗೆ ಎಷ್ಟು ಆಸಕ್ತಿ ಇದೆಯೋ ಅದೇ ರೀತಿ ಎಲ್ಲ ಭಾಗದ ಸದಸ್ಯರಿಗೂ ಆಸಕ್ತಿ ಇದೆ. ಅವರು ಹೇಳತಕ್ಕ ಸಲಹೆಗಳನ್ನೆಲ್ಲಾ ಸರ್ಕಾರದವರು ಗಮನವಿಟ್ಟು ಕೇಳಿ ಅವರ ಬಗ್ಗೆ ಆದಷ್ಟು ಬೇಗ ಪರಿಹಾರ ಕಂಡು ಹಿಡಿಯಬೇಕು ಮತ್ತು ಈ ಸಮಸ್ಯೆಯನ್ನು ಯಶಸ್ವಿಯಾಗಿ ಖಾಯಂ ಆಗಿ ಬಗೆಹರಿಸತಕ್ಕ ಯೋಜನೆ ಮಾಡಬೇಕೆಂದು ಹೇಳಿ ಮನವಿ ಮಾಡಿಕೊಂಡು ಈ ಒಂದು ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

Mr. SPEAKER.—Before I call upon others, I wish to inform the House that there was one short notice question from Smt. Nagarathnamma; then there were two motions from Sriyuts T. N. Madappa Gowda and G. V. Gowda. To call the attention of the Government to the same matter I propose to give chance to those member and then call upon others, one after another.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಮಾತಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತಾ ಇಷ್ಟು ಹೊತ್ತಿನವರೆಗೂ ಶ್ರೀಮಾನ್ ಹುಚ್ಚಮಾಸ್ತಿಗೌಡರು ಏನು ಆಗಬೇಕೆನ್ನುವುದನ್ನೆಲ್ಲಾ ಹೇಳಿದ್ದಾರೆ. ನಾನಾದರೂ ಇಷ್ಟು ಮಾತ್ರ ಹೇಳುವುದಕ್ಕೆ ನಿಂತಿದ್ದೇನೆ. ಅದೇನೆಂದರೆ ಇದನ್ನು ಹೇಳಬಹುದೋ ಇಲ್ಲವೋ ಗೊತ್ತಿಲ್ಲ ನಮ್ಮ ತಾಲ್ಲೂಕಿನಲ್ಲಿ ಆಗಿರ ತಕ್ಕ ಕಷ್ಟ ಊರಿಗೆ ಊರೆ ದುಃಖವಾದರೆ ಯಾರಿಗೋ ಮದುವೆ ದುಃಖ ಎಂದು ಹೇಳುತ್ತಾರೆ ಹಾಗೆ ಆಗಿದೆ. ಅಲ್ಲಿ ನಾವೆಷ್ಟು ಬಗೆಯಲ್ಲಿ ಕಷ್ಟಪಡುತ್ತಿದ್ದೇವೆ ಎನ್ನುವುದು ನಿಮಗೆ ಹೇಗೆ ಗೊತ್ತಾಗ ಬೇಕು ! ಶ್ರೀಮಾನ್ ಹುಚ್ಚಮಾಸ್ತಿಗೌಡರು ಏನು ಹೇಳಿದರೋ ಅದೆಲ್ಲಾ ಅಂದರೆ ಸಾಯಿಲ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಟೆಸ್ಟಿಂಗ್ ಆಗಬೇಕು, ಫರ್ಟಿಲೈಸರ್ಸ್ ಕೊಡಬೇಕು ಅವುಗಳೆಲ್ಲಾ ಮುಂದೆ ಆಗತಕ್ಕದ್ದು, ಆಗಬೇಕಾದದ್ದು. ಆದರೆ ಈಗ ನಮ್ಮ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ನೆನ್ನೆ ಮೊನ್ನೆ ಮಳೆಯಾಗಿದೆ ಇನ್ನು ಕೆಲವು ಕಡೆ ಡ್ರೈಬೆಲ್ಟ್ ಎಂದು ಯಾವುದನ್ನು ಹೇಳುತ್ತಾರೋ ಅಂತಹ 18 ಹಳ್ಳಿಗಳಲ್ಲಿ ಇಷ್ಟರವರೆಗೂ ಮಳೆಯಾಗಿಲ್ಲ. ಆ 18 ಹಳ್ಳಿ ಯಾವುವು ಎಂಬುದನ್ನು ರೆವಿನ್ಯೂ ಮಿನಿಸ್ಟರಿಗೆ ಮತ್ತು ಚೀಫ್ ಮಿನಿಸ್ಟರಿಗೆ ಕಾಗದ ಬರೆದು ತಿಳಿಸಿದ್ದೇನೆ. 25 ಕಾಗದ ಬರೆದಿದ್ದೇನೆ. ಅವರೂ ಕೂಡ ತಕ್ಕಮಟ್ಟಿಗೆ ಪರಿಹಾರ ಕೆಲಸ ಮಾಡುತ್ತಾ ಇದ್ದಾರೆ ಅದಕ್ಕಾಗಿ ಅವರುಗಳಿಗೆ ನಿಜವಾಗಿಯೂ ನಮ್ಮ ತಾಲ್ಲೂಕಿನ ಪರವಾಗಿ ಆಭಾರಿಯಾಗಿದ್ದೇನೆ. ಆದರೆ ಆ ಕೆಲಸ ಎಷ್ಟುಮಟ್ಟಿಗೂ ಅವರಿಗೆ ಸಾಲಾಗುತ್ತಿಲ್ಲ ಎಂದು ಹೇಳಬೇಕಾಗಿದೆ. ಸರ್ಕಾರದವರಾಗಲಿ ಮಂತ್ರಿಗಳಾಗಲಿ ನಾವಾಗಲಿ ಏನೂ ಮಾಡುವುದಕ್ಕಾಗುವುದಿಲ್ಲ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ದೇವರು ಮಳೆ ಕೊಡಬೇಕು ರೈತರು ಉದ್ಧಾರವಾಗಬೇಕು ಜನಕ್ಕೆ ಬೆಳೆ ಬೆಳೆಯಬೇಕು. ಆದರೆ ನಮ್ಮ ತಾಲ್ಲೂಕಿನಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಇದೆ 15–20 ವರ್ಷದಿಂದ. ಎಷ್ಟೋ ಕೆಲಸ ಆಗಬಹುದಾಗಿತ್ತು ಆಗಲಿಲ್ಲ. ಇಷ್ಟು ದೊಡ್ಡ ಮೈನಲ್ಲಿ ಉಗುರು ಸುತ್ತು ಆದರೆ ಬೆಟ್ಟನ್ನೇ ಕತ್ತರಿಸುವುದಕ್ಕೆ ಸಾಧ್ಯವಿಲ್ಲ ಅದನ್ನು ವಾಸಿ ಮಾಡಲೇಬೇಕು. ಅದೇ ರೀತಿ ನಮ್ಮ ತಾಲ್ಲೂಕಿನಲ್ಲಿ ಈ ಕ್ಷಾಮ ಉಗುರು ಸುತ್ತಿನ ಹಾಗೆ ಒಂದು ದೊಡ್ಡ ರಾಜಕೀಯ ಉಗುರು ಸುತ್ತು ಬಂದಿದೆ. ಇದರಲ್ಲಿ ಬರೀ ರಾಜಕೀಯವಾಗಿ ಎಷ್ಟೋ ಪ್ರಾಜೆಕ್ಟುಗಳನ್ನು ಮಾಡಬಹುದಾಗಿತ್ತು ಮಾಡಿಲ್ಲ. ಬೇಕಾದಷ್ಟು ಬಾವಿಗಳನ್ನು ತೆಗೆಯಬಹುದಾಗಿತ್ತು ತೆಗೆದಿಲ್ಲ. ಅದೇನು ! ಭಂಡಿಪುರದ ರೇಂಜನಲ್ಲಿ 25 ಇಂಚು ಮಳೆ ಬರುತ್ತದೆ ಎಂದು ಲೆಕ್ಕ ಹಾಕಿ 8–10 ಇಂಚು ಮಳೆ ಬೀಳುವ ಗುಂಡ್ಲುಪೇಟೆ ತಾಲ್ಲೂಕಿಗೆ ಯಾವ ತರಹದ ಅನುಕೂಲವನ್ನೂ ಮಾಡಿಕೊಟ್ಟಿಲ್ಲ ಈಗೇನೋ 2–3 ವರ್ಷದಿಂದ ಕೆಲವು ಪ್ರಾಜೆಕ್ಟುಗಳನ್ನು ಮಾಡಿದ್ದಾರೆ ಮಾಡುತ್ತಾ ಇದ್ದಾರೆ ಆದರೆ ಅದರಲ್ಲಿ ಕೂಲಿಗಾರರಿಗೆ ಹೆಚ್ಚು ಅವಕಾಶವಿಲ್ಲ ಏಕೆಂದರೆ ಅದು ವಿಪರೀತ ದೂರ ಸುತ್ತುಮುತ್ತಲೂ ಇರತಕ್ಕ ಹಳ್ಳಿಯವರು ಅಲ್ಲಿಗೆ ಹೋಗುವುದಕ್ಕೆ ಅವಕಾಶವಾಗುತ್ತಿಲ್ಲ. ಹೀಗಿರುವುದರಿಂದ ಈಗೇನೋ ಕೆಲವು ಗೋಕಟ್ಟೆ ತೆಗೆದುಕೊಂಡಿದ್ದಾರೆ ಈಚೆಗೆ 10-15 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ಮಳೆಯಾಗದೆ ಹೋದರೆ ಇನ್ನೂ ಹೆಚ್ಚಿನ ರಿಲೀಫ್ ವರ್ಕ್ಸ್‌ಗಳನ್ನು ಮಾಡಬೇಕಾಗುತ್ತದೆ, ಮಾನ್ಯ ಮಂತ್ರಿಗಳು ಅದಕ್ಕೆ ಒಪ್ಪಿಕೊಂಡಿದ್ದಾರೆ. ಎಷ್ಟು ಬೇಕಾದರೂ ನಾವಲ್ಲಿ ಕೆಲಸ ಮಾಡಿಕೊಡುತ್ತೇವೆ ಅದಕ್ಕೆ ಗಾಬರಿಯಾಗಬಾರದು ಎಂದು ಬಹಳ ಧೈರ್ಯ ಹೇಳಿದ್ದಾರೆ ಅವರನ್ನು ನಂಬಿಕೊಂಡು ಧೈರ್ಯವಾಗಿಯೇ ಇದ್ದೇನೆ. ಇನ್ನು ಅವರು ಹೇಳುತ್ತಾ ಇರುವ ಹಾಗೆ ನಮಗೆ ಯಾವ ಆಧಾರವೂ ಇಲ್ಲ ಬಾವಿ ಒಂದೇ. ಅದೂ ಕೂಡ ಅವರು ಕೊಡುವ ಹಾಗೆ 3 ಸಾವಿರ ರೂಪಾಯಿ ಕೊಟ್ಟರೆ ಒಂದು ಬಾವಿ ಆಗುವುದಿಲ್ಲ. ಅದಕ್ಕೂ ಕೂಡ ಎಷ್ಟೋ ದಿವಸ ಬೇಕಾಗುತ್ತದೆ, ಅಲ್ಲಿರತಕ್ಕವರು ಬಡವರು ನಿರ್ಗತಿಕರಾಗಿದ್ದಾರೆ. ಆದ್ದರಿಂದ ಅವರು ಕೊಡುವ 3 ಸಾವಿರ ರೂಪಾಯಿಗಳಿಗೆ ಬದಲಾಗಿ ಅವರೇ ಜವಾಬ್ದಾರಿ ತೆಗೆದುಕೊಂಡು ಬಾವಿ ತೆಗಸಲಿ ವಾಟರ್ ರೇಟು, ಕಾಂಟ್ರಿಬ್ಯೂಷನ್ ಏನು ಬೇಕೋ ಅದನ್ನು ತೆಗೆದುಕೊಳ್ಳಲಿ ಎಂದು ನಾನು ಹೇಳುತ್ತೇನೆ. ಹೀಗೆ ಮಾಡಿದರೆ ಅನುಕೂಲವಾಗುತ್ತದೆಯೇ ಹೊರತು ಮೂರು ಸಾವಿರ ರೂಪಾಯಿ ಕೊಟ್ಟರೆ ಕೆಲಸ ಅರ್ಧಂಬರ್ಧ ಆಗುತ್ತದೆ ನೀರೂ ಕೂಡ ಸಿಕ್ಕುವುದಿಲ್ಲ ಹೀಗಾಗಿ ಬಹಳ ಅನಾನುಕೂಲವಾಗುತ್ತದೆ. ದಯಮಾಡಿ ಸರ್ಕಾರದವರು ಇದನ್ನು ಯೋಚನೆ ಮಾಡಬೇಕು. ಒಂದು ದಿವಸ ನಾನು ಫೈನಾನ್ಸ್ ಮಿನಿಸ್ಟರ ಹತ್ತಿರ ಹೋಗಿದ್ದೆ ನಿಮ್ಮ ಕಡೆ ಮಳೆ ಆಗಿದೆಯೇ ಎಂದರು ಆಗಿಲ್ಲ ಎಂದಿದ್ದಕ್ಕೆ ಮಳೆ ಇಲ್ಲದ್ದು ಅದೆಂಥ ಊರ್ರಿ ನಿಮ್ಮದು ಎಂದರು. ಅಂಥ ಕೆಟ್ಟ ಊರಿನಲ್ಲಿ ಇದ್ದುಕೊಂಡು ಬಾಳುವೆ ಮಾಡಬೇಕಾಗಿದೆ, ಫೈನಾನ್ಸ್ ಮಿನಿಸ್ಟರು ಇದಕ್ಕೆ ಗಮನಕೊಟ್ಟು ಅಗತ್ಯವಾದ ಹಣ ಕೊಟ್ಟರೆ ಅದರಿಂದ ಬಾವಿ ತೆಗೆಸಿಕೊಡಬಹುದು ಆ ರೀತಿ ಮಾಡಬೇಕೆಂದು ಹೇಳುತ್ತೇನೆ. ಈಗತಾನೆ ಹುಚ್ಚಮಾಸ್ತಿಗೌಡರು ಹೇಳಿದಂತೆ, ರೈತ ನಾಲ್ಕು ಕಾಳನ್ನು ಬೆಳೆದಾಗ ಅವನಿಗೆ ಸರಿಯಾದ ಒಂದು ಬೆಲೆ ದೊರೆಯುವುದಿಲ್ಲ. ನಮ್ಮ ನಂಜನಗೂಡಿನ ಕಡೆ ರೈತರು ಬತ್ತ ಬೆಳೆದಿದ್ದರು. ಅದನ್ನೆಲ್ಲ ಅಗಲೆ 18-20 ರೂಪಾಯಿಗಳಂತೆ ವ್ಯಾಪಾರ ಮಾಡಿಕೊಂಡು ಬಿಟ್ಟರು. ಈಗ ಅವರ ಕೈಲಿ ಬೇಕೆಂದರೆ ಮೂರು ಕಾಸಿಲ್ಲದಂತೆ ಆಗಿದೆ. ಅವರಿಗೆ ಒಂದು ಸ್ಟೆಬಿಲೈಜ್‌ಡು ಪ್ರೈಸ್ ದೊರೆಯದೆ ಬಹಳ ತೊಂದರೆಗೊಳಗಾಗಿದ್ದಾರೆ. ಸರ್ಕಾರದವರು ರೈತರಿಗೆ ಒಂದು ಸ್ಟೆಬಿಲೈಜಾದ ಬೆಲೆ ಸಿಕ್ಕುವಂತೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ, ಇಲ್ಲವಾದರೆ ಅವರಿಗೆ ಬಹಳ ತೊಂದರೆಯಾಗುತ್ತದೆ.

ಇನ್ನು ರಿಸರ್ಚ್ ಸ್ಟೇಷನ್ ಬಗ್ಗೆ ನಮ್ಮಲ್ಲಿ ಏನು ಕೆಲಸ ಮಾಡಿದ್ದಾರೆಂದು ಕೇಳಬೇಕಾಗಿದೆ. ಆ ಸಿರಗುಪ್ಪೆಯ ಕಡೆ 70 ದಿವಸಗಳಲ್ಲಿ ಬೆಳೆಯಾಗತಕ್ಕಂಥ ಜೋಳ, ಹೆಸರು, ಎಳ್ಳು ಇವೆ ಎಂದು

ಕೇಳಿದೆನು. ಆ ಧಾನ್ಯಗಳು ಬೇಕೆಂದು ಕೇಳಿದ್ದಕ್ಕೆ ನಮ್ಮಲ್ಲಿ ನಾಗರತ್ನಮ್ಮನವರು ಕೇಳುತ್ತಿದ್ದಾರೆ, ಅವುಗಳನ್ನು ಕಳುಹಿಸಿ ಕೊಡಬೇಕೆಂದು ನಮ್ಮ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರು ಬರೆದಿದ್ದಾರಂತೆ. ಅವರಿಗೆ ಇಂಥ ಧಾನ್ಯಗಳಿವೆಯೆಂಬುದೇ ಗೊತ್ತಿಲ್ಲ ಎಂದರೆ ಇದು ತೀರಾ ನಾಚಿಕೆಗೇಡಾದ ಸಂಗತಿ. ಇಂಥ ಧಾನ್ಯಗಳನ್ನು ತರಿಸಿ, ಅವುಗಳನ್ನು ಇಲ್ಲಿಯೂ ಟ್ರೈಮಾಡಿ, ಜನಗಳಿಗೆ ಅವುಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡದೆ ಹೋದರೆ, ಇಲ್ಲಿ ನಮ್ಮ ಗತಿಯೇನಾಗಬೇಕು ? ಇಂಥ ಒಂದು ಸಾಮಾನ್ಯ ಕೆಲಸ ಮಾಡಲು ಆಗದೆ ಇದ್ದಾಗ ಇವರು ಹೇಗೆ ಒಂದು ದೊಡ್ಡ ದೇಶವನ್ನು ಕಟ್ಟಿ, ಜನಗಳನ್ನು ಮುಂದುವರಿಯುವಂತೆ ಮಾಡುತ್ತಾರೋ ನನಗೆ ಅದು ಅರ್ಥವಾಗುತ್ತಿಲ್ಲ. ಇಂಥ ಅನುಕೂಲವಾದ ಧಾನ್ಯಗಳನ್ನು ದೇಶಕ್ಕೆಲ್ಲ ಹಂಚಬೇಕು. ಅವು ಒಂದು ಭಾಗಕ್ಕೇನೂ ಮನಾಪಲಿ ಅಲ್ಲ. ಈ ವಿಚಾರದಲ್ಲಿ ವ್ಯವಸಾಯದ ಮಂತ್ರಿಗಳು ನಿಗಾ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸಾಯಿಲ್ ಟೆಸ್ಟಿಂಗ್ ಮತ್ತು ಕಾಂಟೂರ್ ಬಂಡಿಂಗ್ ಇದೆಲ್ಲೆಲ್ಲಿ ಆಗಿದೆಯೋ ನನಗಂತೂ ತಿಳಿಯದು. ನಮ್ಮ ಕಡೆಯಂತೂ ಈ ಕಾಂಟೂರ್ ಬಂಡಿಂಗ್ ಕೆಲಸ ಎಲ್ಲೆಲ್ಲೂ ನಡೆದಿಲ್ಲ. ಎಲ್ಲಿಯೋ ಲೆಕ್ಕ ಸಿಕ್ಕುವ ಕೆಲವು ಕಡೆಗಳಲ್ಲಿ ಆಗಿರಬಹುದು. ಇನ್ನು ಈ ಸಾಯಿಲ್ ಟೆಸ್ಟಿಂಗ್ ವಿಚಾರ ಕೂಡ ಹಾಗೇ ಆಗಿದೆ. ಈ ಸೌಲಭ್ಯ ಜನರಿಗೆ ಸರಿಯಾಗಿ ದೊರೆಯುತ್ತಿಲ್ಲ. ಜನಗಳು ಯಾರಾದರೂ ಕೇಳಿದರೆ ಅವರಿಗೆ ಈ ಸೌಲಭ್ಯ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕ್ರಾಪ್ ಇನ್‌ಷೂರೆನ್ಸ್ ವಿಚಾರ ತೆಗೆದುಕೊಳ್ಳಬೇಕಾದ್ದು ಅತ್ಯಗತ್ಯ. ಈ ಸ್ಕೀಮನ್ನು ಜಾರಿಗೆ ತಂದರೆ ಅನೇಕ ಸೊಸೈಟಿಗಳು ರೈತನ ಸಹಾಯಕ್ಕೆ ಬರುತ್ತವೆ. ಇಲ್ಲವಾದರೆ ರೈತರಿಗೆ ಸರಿಯಾಗಿ ಫರ್ಟಿಲೈಸರ್ಸ್ ಮತ್ತು ಇತರ ಅಡ್ವಾನ್ಸ್ ಲೋನು ಇತ್ಯಾದಿಗಳು ಸಿಕ್ಕುವುದಿಲ್ಲ. ಆದರೆ ನಮ್ಮ ತಾಲ್ಲೂಕಿಗೆ ಶ್ರೀ ನಾರಾಯಣ ಗೌಡರೊಬ್ಬರವಿನಾ ಬೇರೆ ಯಾವ ಮಂತ್ರಿಗಳೂ ನಮ್ಮ ತಾಲ್ಲೂಕಿಗೆ ಬಂದಿಲ್ಲ. ಆ ನಾರಾಯಣ ಗೌಡರಾದರೂ ಬಂದುದರಿಂದ—ನಾರಾಯಣ, ನಾರಾಯಣ, ಎಂತ ದೇವರ ಹೆಸರನ್ನು ಹೇಳಿಕೊಂಡು ಅಲ್ಲಿ ಮಳೆ ಬಂದರೆ ನಾವು ಈ ವಿಧಾನಸೌಧದ ಕಡೆಗೆ ತಿರುಗಿ ನೋಡುವುದಿಲ್ಲ; ತಿರುಗಿ ನೋಡುವುದಿಲ್ಲ ಎಂದರೆ ಇಲ್ಲಿ ಬಂದು ಮಂತ್ರಿಗಳಿಗೆ ತೊಂದರೆ ಕೊಡುವುದಿಲ್ಲ ಎಂಬ ಅರ್ಥದಲ್ಲಿ ಹಾಗೆ ಹೇಳಿದೆನು. ಈ ನಾಲ್ಕು ಮಾತುಗಳನ್ನಾಡಲು ನನಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ.—ಸಭಾಪತಿಗಳೆ ಈ ದಿವಸ ಮನುಷ್ಯನಿಗೆ ಅತ್ಯಾವಶ್ಯಕವಾದ ಆಹಾರದ ವಿಚಾರದಲ್ಲಿ ದೇಶದಲ್ಲಿ ಎಂಥ ಒಂದು ಧಾರುಣವಾದ ಪರಿಸ್ಥಿತಿಯುಂಟಾಗಿದೆ ಎಂಬುದನ್ನು ಚರ್ಚೆ ಮಾಡುವುದಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿರತಕ್ಕ ಶ್ರೀ ಎನ್. ಹುಚ್ಚಮಾಸ್ತಿಗೌಡರು ಈ ಸಭೆಯ ಮುಂದೆ ಒಂದು ಸೂಚನೆಯನ್ನು ತಂದಿದ್ದಾರೆ. ಈ ಆಹಾರ ಕೊರತೆಯನ್ನು ನೀಗತಕ್ಕ ವಿಚಾರದಲ್ಲಿ ಈ ಸರ್ಕಾರ ಎಷ್ಟರಮಟ್ಟಿಗೆ ವಿಫಲವಾಗಿದೆ ಅದನ್ನು ಸಾಧಿಸಲು, ತಾವು ಮುಂದೇನು ಮಾಡಬೇಕಾಗಿದೆ ಎನ್ನತಕ್ಕ ವಿಚಾರಗಳನ್ನು ಚರ್ಚೆ ಮಾಡಲು, ನಮಗೆ ಈ ಬಗ್ಗೆ ಒಂದು ತತ್ವವನ್ನು ಪದೇಶ ಮಾಡಲು ಈಗ ಈ ಚರ್ಚೆಯನ್ನು ಸಭೆಯ ಮುಂದೆ ತಂದಿದ್ದಾರೆಂದು ನಾನು ಭಾವಿಸುತ್ತೇನೆ. ನಮಗೆ ಹೀಗೆ ತತ್ವ ಹೇಳತಕ್ಕ ಈ ಜನರು, ಇಲ್ಲಿಗೆ ಹದಿನಾರು ವರ್ಷಗಳಕಾಲ ದೇಶದ ಆಡಳಿತವನ್ನು ತಮ್ಮ ಕೈಲಿಟ್ಟುಕೊಂಡು ಎರಡು ಪಾಂಚವಾರ್ಷಿಕ ಯೋಜನೆಗಳನ್ನು ಮುಗಿಸಿ, ಈಗ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಎರಡನೇ ವರ್ಷದಲ್ಲಿ ಈಗ ಕಾಲಿಟ್ಟಿದ್ದಾರೆ. ಇಷ್ಟಾಗಿದ್ದರೂ ಅವರು ಈ ಆಹಾರ ಕೊರತೆಯನ್ನು ನೀಗುವುದರಲ್ಲಿ ಎಷ್ಟರಮಟ್ಟಿಗೆ ವಿಫಲರಾಗಿದ್ದಾರೆ ಎಂಬುದನ್ನು ಅವರೇ ಹೇಳಿದ್ದಾರೆ. ಆದರೆ ಇಲ್ಲಿಯತನಕ ಈ ಅಧಿಕಾರಪಕ್ಷದಲ್ಲಿರತಕ್ಕ ಜನ ಈ ಕಾರ್ಯಸಾಧನೆಯಲ್ಲಿ ಎಷ್ಟರಮಟ್ಟಿಗೆ ಜಯಪ್ರದ ಹೊಂದಿದ್ದಾರೆ ಎನ್ನತಕ್ಕ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಿಚ್ಛಿಸುತ್ತೇನೆ. ಮೊದಲು ಇವರು ನಮ್ಮ ರಾಜ್ಯಕ್ಕೆ 4೫ ಲಕ್ಷ ಟನ್ ಆಹಾರ ಬೇಕಾಗುತ್ತದೆ ಅಷ್ಟನ್ನು ಬೆಳೆಸಬೇಕೆಂದು ಇವರು ಮೊದಲು ಒಂದು ಯೋಜನೆಯನ್ನು ಹಾಕಿಕೊಂಡರು. ಅದರ ಬಗ್ಗೆ ಇವರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ವೇದಿಕೆಗಳಮೇಲೆ ನಿಂತು ಬೇಕಾದಷ್ಟು ಘೋಷಣೆಗಳನ್ನು ಮಾಡಿದರು. ಆದರೆ ಆ ಘೋಷಣೆಗಳೆಲ್ಲ ಕೇವಲ ವೇದಿಕೆಗಳಮೇಲೆ ನಿಂತವೇ ಹೊರತು ಅವು ಭೂಮಿಗೆ ಇಳಿಯಲೇ ಇಲ್ಲ ; ಅವು ಕಾರ್ಯಗತವಾಗಲಿಲ್ಲ ಎಂದು ನಾನು ಹೇಳುತ್ತೇನೆ. ಇವರು ಹಾಗೆ ಆ ವೇದಿಕೆಗಳಮೇಲೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಲು ಇವರು ಕೈಗೊಂಡ ಉಗ್ರಕಾರ್ಯಕ್ರಮಗಳೇನೆಂದರೆ ಇಂಗ್ಲೆಂಡ್, ಅಮೇರಿಕಾ ದೇಶಗಳಿಗೆ ಹೋಗಿ ಅಲ್ಲಿಂದ ಆಹಾರಧಾನ್ಯಗಳನ್ನು ತಂದು ಶಾಭಾಶ್‌ಗಿರಿಗಳಿಸಲು ಸತತ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಇದೇನೂ ಅಂಥ ಚಾತುರ್ಯತೆಯ ಕಾರ್ಯವಲ್ಲ. ಇದು ತೀರಾ ನಾಚಿಕೆಗೇಡಾದ ಪ್ರಸಂಗ ಎಂದು ಹೇಳದೆ ವಿಧಿಯಿಲ್ಲ. ಈ ದಿವಸ ಇವರು ನಮಗೆ ಆ 1957

(ಶ್ರೀ ಎಸ್. ಶಿವಪ್ಪ)

ಮತ್ತು 1958ರ ಅಂಕಿ ಅಂಶಗಳನ್ನು ಇಟ್ಟುಕೊಂಡು ಅವುಗಳ ಆಧಾರದ ಮೇಲೆ ನಮಗೆ ಕೆಲವು ಅಂಕಿ ಅಂಶಗಳನ್ನು ತಿಳಿಸಿದ್ದಾರೆ. 1957-58ರಲ್ಲಿ ನಮ್ಮಲ್ಲಿ 33 ಲಕ್ಷ ಟನ್ ಉತ್ಪತ್ತಿಯಾಗಿದೆ. 1958-59ರಲ್ಲಿ 34 ಲಕ್ಷ ಟನ್ ಆಹಾರ ಉತ್ಪತ್ತಿಯಾಗಿದೆ. ಇನ್ನು 1961-62ರಲ್ಲಿ ಇವರು ನಿರೀಕ್ಷಿಸಿದ್ದಂತೆ 33.5 ಲಕ್ಷ ಟನ್ ಆಹಾರಧಾನ್ಯಗಳ ಉತ್ಪತ್ತಿ ಆಗಿದೆ. 2-3 ಲಕ್ಷ ಟನ್‌ಗಳಷ್ಟು ಪ್ಲಸ್ ಉತ್ಪತ್ತಿಯಾಗಿದೆ. ಹೀಗೆ ಕಳೆದ ಹತ್ತು ವರ್ಷಗಳಿಂದಲೂ ನಮ್ಮ ಆಹಾರದ ಉತ್ಪನ್ನ ಮೇಲಕ್ಕೇರದಂತೆ ಒಂದೇ ಮಟ್ಟದಲ್ಲಿ ನಿಂತಿದೆ. ಆದರೆ ಜನಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಇದು ಈ ಮಟ್ಟದಲ್ಲೇ ನಿಲ್ಲಬೇಕಾಯಿತು ಎಂದು ಶ್ರೀ ಹುಚ್ಚಮಾಸ್ತಿಗೌಡರು ಹೇಳಿದರು. ಈ ಜನಸಂಖ್ಯೆ ಇಂಡಿಯಾದೇಶ ಒಂದರಲ್ಲೇ ಅಲ್ಲ ಇಡೀ ಪ್ರಪಂಚದಲ್ಲೆಲ್ಲಾ ಜಾಸ್ತಿ ಆಗುತ್ತಿದೆ. ಈ ಕಳೆದ 10 ವರ್ಷಗಳಲ್ಲಿ ಇಂಡಿಯಾ ದೇಶದ ಜನಸಂಖ್ಯೆ 40 ಲಕ್ಷ ಜಾಸ್ತಿ ಆಗಿದೆ. ಅಂದರೆ ದೇಶದಲ್ಲಿದ್ದ ಜನಸಂಖ್ಯೆಯ ಶೇಕಡ 20ರಷ್ಟು ಜಾಸ್ತಿ ಆದಂತಾಯಿತು. ಆದರೆ ಜನರು ಸರ್ಕಾರಕ್ಕೆ ತರುತ್ತಿರುವ ತೆರಿಗೆ ವಿಚಾರಕ್ಕೆ ಬಂದರೆ 1957-58ಕ್ಕೆ ಹಿಂದೆ ದೇಶದಲ್ಲಿದ್ದ ಜನರು 24 ಕೋಟಿ ರೂಪಾಯಿಗಳಷ್ಟು ತೆರಿಗೆ ಕೊಡುತ್ತಿದ್ದ ಕಡೆ ಈ ದಿವಸ 50 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಕೊಡುತ್ತಿದ್ದಾರೆ. ಹೇಗೆ ಜನ ಈ ದಿವಸ ಒಂದಕ್ಕೆ ಎರಡರಷ್ಟು ತೆರಿಗೆ ಕೊಡುತ್ತಿದ್ದಾರೆ. 1957 58 ರ ನಂತರ ಈ ತೆರಿಗೆಯನ್ನು 50 ಕೋಟಿಯಿಂದ 99 ಕೋಟಿಗೆ ಏರಿಸಿದ್ದಾರೆ. ಜನರ ಮೇಲೆ ಇಷ್ಟು ತೆರಿಗೆ ಹೇರಿದಮೇಲೆ ಅವರಿಗೆ ಸರ್ಕಾರದವರು ಎಷ್ಟು ಅನ್ನ-ಬಟ್ಟೆ ಇವುಗಳನ್ನು ಒದಗಿಸಲು ಹಣ ಖರ್ಚುಮಾಡಿದ್ದಾರೆಂಬುದನ್ನು ಹೇಳಬಲ್ಲರೇ? ಮಂತ್ರಿಗಳು ಈ ದಿವಸ ಅವರ ಹೃದಯವನ್ನು ಮುಟ್ಟಿ ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಅವರು ಶ್ರಮಿಸಿದ್ದಾರೆಂಬುದನ್ನು ಹೇಳಲಿ. ತಾವು ಈ ದೇಶದಲ್ಲಿ ಆಹಾರದ ಕೊರತೆಯನ್ನು ನಿವಾರಿಸಲು ಸರಕಾರದ ಕಡೆಯಿಂದ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ಜನತೆ ಕೇಳುತ್ತಿದ್ದಾರೆ. ಜನತೆಗೆ ತಾವು ಹೇಳಿರುವ ಪ್ರಕಾರ ಈ ದೇಶಕ್ಕೆ ಸುಮಾರು 48 ಲಕ್ಷ ಟನ್ನುಗಳಷ್ಟನ್ನು ಆಹಾರವಾಗಿ ಒದಗಿಸಬೇಕಾಗಿತ್ತು. ಆದರೆ ತಾವೇ ಹೇಳಿರುವಂತೆ ಸುಮಾರು 35 ಟನ್ನು ಲಕ್ಷದಷ್ಟು ಬೆಳೆಯಲು ಸಾಧ್ಯವಾಯಿತು ಎಂದು ಹೇಳಿದ್ದೀರಿ. ಅಂದರೆ ನೀವು ಒಬ್ಬ ಮನುಷ್ಯನಿಗೆ ಎಷ್ಟು ಆಹಾರ ಬೇಕಾಗಿತ್ತೋ ಅದರ ಅರ್ಧದಷ್ಟು ಮಾತ್ರ ಕೊಡಲು ಸಾಧ್ಯವಾಯಿತು. ಅಮೇರಿಕಾ ದೇಶವನ್ನು ಇವೊತ್ತು ನೀವು ನೋಡುವುದಾದರೆ ಅಲ್ಲಿ ಶೇಕಡ 25 ರಷ್ಟು ಜನ ವ್ಯವಸಾಯ ಮಾಡುತ್ತಿದ್ದರೂ ಕೂಡ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ನಮ್ಮಲ್ಲಿ ನೂರಕ್ಕೆ 85 ರಷ್ಟು ಜನ ವ್ಯವಸಾಯದಲ್ಲೇ ಆಸಕ್ತಿ ವಹಿಸುತ್ತಿರುವುದರಿಂದ ನಮ್ಮಲ್ಲಿ ಆಹಾರ ಧಾನ್ಯಗಳು ಹೆಚ್ಚಾಗಿ ಬೆಳೆಯಬೇಕಾಗಿತ್ತು. ಅಮೇರಿಕಾ ದೇಶದವರು ಹೆಚ್ಚು ಹೆಚ್ಚಾಗಿ ಆಹಾರ ಧಾನ್ಯಗಳನ್ನು ಬೆಳೆದು ಹೊರ ದೇಶಗಳಿಗೆ ಕಳುಹಿಸುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ನೂರಕ್ಕೆ 75 ರಷ್ಟು ಜನರು ವ್ಯವಸಾಯ ಮಾಡುತ್ತಿದ್ದರೂ ಇಲ್ಲಿಯ ರೈತರು ಹೆಚ್ಚಿನ ಬೆಳೆ ಮಾಡಲು ಸಾಧ್ಯವಾಗಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಅಲ್ಲಿ ಒಬ್ಬ ಮನುಷ್ಯನಿಗೆ 8 ಎಕರೆಗಳಷ್ಟು ಭೂಮಿ ಇದೆ. ಇಲ್ಲಿ ಒಬ್ಬ ಮನುಷ್ಯನಿಗೆ ಒಂದು ಎಕರೆ ಮಾತ್ರ ಇದೆ.

ಶ್ರೀ ಎಸ್. ಶಿವಪ್ಪ.—ಹಾಗಾದರೆ ಜಪಾನ್ ದೇಶವನ್ನು ತೆಗೆದುಕೊಳ್ಳಿ. ಅಲ್ಲಿರುವ ಪರ ಕ್ಯಾಪಿಟಾ ಎಷ್ಟಿದೆ? ನಮ್ಮಲ್ಲಿ ಎಷ್ಟಿದೆ ಎನ್ನುವುದನ್ನೂ ನೋಡಿ. ನಮ್ಮ ದೇಶಕ್ಕಿಂತ ಜಪಾನ್ ದೇಶದಲ್ಲಿ ಒಂದು ಎಕರೆಗೆ ಐದರಷ್ಟು, ಹತ್ತರಷ್ಟು ಬೆಳೆಯನ್ನು ಬೆಳೆಯುತ್ತಿದ್ದಾರೆ ಆದರೆ ನಮ್ಮಲ್ಲಿ ಶತಮಾನಗಳಿಂದಲೂ ಯಾವ ರೀತಿಯಾಗಿ ರೈತ ಬೆಳೆ ಮಾಡುತ್ತಿದ್ದನೋ ಅದರಂತೆ ಮಾಡುತ್ತಿದ್ದಾನೆಯೇ ಹೊರತು ಹೆಚ್ಚಿನ ದವಸವನ್ನೇನೂ ಬೆಳೆಯಲು ಅವನಿಂದ ಸಾಧ್ಯವಾಗಲಿಲ್ಲ. ಹಿಂದೆ ರೈತ ತನ್ನ ಕಾಲಿನ ಮೇಲೆ ನಿಂತು ಅವನಿಗೆ ಬೇಕಾದಷ್ಟು ದವಸವನ್ನು ಬೆಳೆಸಿಕೊಂಡು ಹೋಗುತ್ತಿದ್ದ ಬಗ್ಗೆ ಅವನಿಗಿದ್ದ ಉತ್ಸಾಹ, ಹುರುಪು, ಇವೆಲ್ಲಾ ಮಾಯವಾಗುತ್ತಿವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಳೆ ಕೂಡ ಬರುತ್ತಿಲ್ಲ.

ಶ್ರೀ ಎಸ್. ಶಿವಪ್ಪ.—ಹೌದು, ಮಳೆಯೇ ನೀವು ಮಾಡುತ್ತಿರುವ ಅನ್ಯಾಯಗಳಿಗೆ ಹೆದರಿ ರೈತನನ್ನು ಬಿಟ್ಟು ಓಡಿ ಹೋಗುತ್ತಿದೆ. (ನಗು)

ಈ ರೀತಿಯಾಗಿ ರೈತನಲ್ಲಿ ಒಂದು ತರಹದ ಜಿಗುಪ್ಸೆ ಬಂದು ಅವನಲ್ಲಿದ್ದ ಉತ್ಸಾಹ ಮಾಯವಾಗಿ ಹೋಗುತ್ತಿದೆ. ತಾವು ರೈತನಿಗಾಗಿ ಎಷ್ಟೋ ಅನುಕೂಲಗಳನ್ನು ಕೊಡುತ್ತಿದ್ದರೂ ಕೂಡ ಅದು ನೇರವಾಗಿ ರೈತನಿಗೆ ಹೋಗುತ್ತಿಲ್ಲ. ಯಾವ ರೈತ ಚೆನ್ನಾಗಿ ಸಮರ್ಥನಾಗಿ ಕೆಲಸ ಮಾಡಬೇಕು ಎಂದು ಅವನಿಗಾಗಿ ಸವಲತ್ತುಗಳನ್ನು ಒದಗಿಸಿ ಅವನಿಗಾಗಿ ಬೇಕಾದಷ್ಟು ಪರಿಹಾರಗಳನ್ನು ಕೊಡುತ್ತಿದ್ದರೂ ಅವೊಂದೂ ಅವನಿಗೆ ಸಿಕ್ಕದೇ ಬೇರೆ ಜನಕ್ಕೆ ಸಿಗುತ್ತಿದೆ. ನೀವು ಕೊಡುವ ಪರಿ

ಕಾರಗಳು, ಸವಲತ್ತುಗಳು ಮತ್ತು ಇತರ ಸಹಾಯಗಳೆಲ್ಲಾ ಅವನನ್ನು ಹಿಂಬಾಲಿಸುತ್ತಿರುವ ಜನಕ್ಕೆ ಸಿಗುತ್ತಿದೆಯೇ ವಿನಾ ನಿಜವಾದ ಸಹಾಯ ಅವನಿಗೆ ದೊರಕದೇ ಅವನು ನಿಸ್ಸಹಾಯಕನಾಗಿದ್ದಾನೆ. ರೈತ ಈಗ ಬಹಳ ಹಿಂದಿದ್ದಾನೆ. ಅನೇಕ ವರ್ಷಗಳ ಕಾಲ ರೈತ ದುಡಿದಿದ್ದು ಬೇಸಾಯ ಮಾಡುತ್ತಿದ್ದಂತಹ ಅವನ ಶಕ್ತಿ ಇಂದು ಉಳಿದಿಲ್ಲ ಮತ್ತು ಅವನ ಹುಮ್ಮಸ್ಸು ದಿನೇ ದಿನೇ ಕುಂದುತ್ತಿದೆ. ಇದನ್ನು ತಾವು ಯೋಚನೆ ಮಾಡಬೇಕು. ರೈತನ ಸ್ಥಿತಿಯನ್ನು ಉತ್ತಮ ಪಡಿಸಬೇಕಾದರೆ ಇಂತಿಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿದ್ದೀರಿ. ಇದರಲ್ಲಿ ಈ ದೇಶಕ್ಕಾಗಿ ಹೆಚ್ಚಿನ ಆಹಾರವನ್ನು ಬೆಳೆಯಬೇಕು ಮತ್ತು ಆ ರೀತಿಯಾಗಿ ಜಾಸ್ತಿ ಆಹಾರವನ್ನು ಬೆಳೆಯುವುದಕ್ಕೋಸ್ಕರ ನೀವು ಏನೇನು ಮಾತುಗಳನ್ನು ಹೇಳುತ್ತಿದ್ದೀರೋ ಅವೆಲ್ಲವನ್ನೂ ಎಲ್ಲರೂ ಒಪ್ಪತಕ್ಕದ್ದೇ ಅದರಲ್ಲೇನೂ ಅನುಮಾನವಿಲ್ಲ. ತಾವು ಹೇಳುವಂತೆ ಈಗ ಮೂರು ಯೋಜನೆಗಳನ್ನೂ ಮಾಡಿ ಹೀಗೆ ಮಾಡಿದ್ದೇವೆಂದು ಹೇಳುತ್ತಾ ಬರೀ ಬಾಯಿಮಾತಿನ ಮಲ್ಲರಾಗಿದ್ದೀರಲ್ಲಾ ಎಂದು ನಾನಿಲ್ಲಿ ಕೇಳಬೇಕಾಗಿದೆ. ನೀವು ಆಗಿಂದಾಗ್ಗೆ ಹಾಕುತ್ತಿರುವ ಪ್ರೋಗ್ರಾಂನಂತೆ ಯಾವ ಯಾವ ಪ್ರದೇಶದಲ್ಲಿ ಎಷ್ಟು ಜನ ರೈತರು ಹೆಚ್ಚು ಬೆಳೆ ಮಾಡಿದ್ದಾರೆ ಎನ್ನುವುದನ್ನೇನಾದರೂ ನೋಡಿದ್ದೀರಾ? ರೈತರೆಲ್ಲಾ ಶಕ್ತಿಮೀರಿ ದುಡಿದು ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ಅಗಿಂದಾಗ್ಗೆ ಭಾಷಣಗಳನ್ನು ಮಾಡಿ, ಪಂಡಿತ ನೆಹರೂರವರೂ ಹಾಗೇ ಹೇಳಿದ್ದಾರೆ ಎಂದು ಎಲ್ಲ ಜನಕ್ಕೂ ಗಿಳಿಪಾಠ ಹೇಳಿದಂತೆ ಗ್ರಾಮಫೋನಿನ ಮೂಲಕ ಮತ್ತು ಇನ್ನಿತರ ಸಾಧನಗಳ ಮೂಲಕ ಆಹಾರ ಧಾನ್ಯದ ಸಂಪತ್ತನ್ನು ಜಾಸ್ತಿ ಮಾಡಬೇಕೆಂದು ಹೇಳುವಂತಹ ಗಿಳಿ ಪಾಠ ಬೇಡ. ಅದು ಎಲ್ಲರಿಗೂ ಗೊತ್ತಿದೆ. ಈಗ ಚೀಣಾ ದೇಶದ ಯುದ್ಧ ನಮ್ಮ ಭಾರತದ ಬಾಗಿಲಿಗೆ ಬಂದಿದೆ. ಅದಕ್ಕಾಗಿ ನಮಗೆ ಹಿಮಾಲಯದಲ್ಲಿ ಬಂದೂಕನ್ನು ಹಿಡಿದುಕೊಂಡು ಹೋಗುವಂತಹ ಒಬ್ಬ ಯೋಧ ಬೇಕು ಮತ್ತು ನೇಗಿಲನ್ನು ಹಿಡಿದುಕೊಂಡು ವ್ಯವಸಾಯ ಮಾಡತಕ್ಕಂತಹ ಒಬ್ಬ ಯೋಧ ನಮಗೆ ಇಂದು ಬೇಕಾಗಿದೆ ಮತ್ತು ಅವರಿಗಾಗಿ ಎಲ್ಲ ವಿಧವಾದ ಸಹಾಯ ಸಲಕರಣೆಗಳನ್ನು ಕೊಡಬೇಕೆಂದು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಆಹಾರದ ಉತ್ಪತ್ತಿಯನ್ನು ಹೆಚ್ಚುಮಾಡಲ ಭೂಮಿಯ ನೇಗಿಲನ್ನು ಹೊತ್ತು ದುಡಿಯುತ್ತಿರುವ ಅನ್ನದಾತನಿಗೆ ಏನೇನು ಸಲಕರಣೆಗಳು ಬೇಕೋ ಅವನ್ನೆಲ್ಲಾ ಒದಗಿಸಿಕೊಟ್ಟಿದ್ದೇವೆ. ಈಗ ಯುದ್ಧ ಬಂದಿದೆ ಎಂದು ನಮ್ಮ ದೇಶಕ್ಕೆ ಹೆಚ್ಚಿನ ಆಹಾರ ಬೆಳೆಯಬೇಕು ಮತ್ತು ಹಾಗೆ ಬೆಳೆದವರಿಗೆ ಬಹುಮಾನ ಕೊಡುತ್ತೇವೆ ಎಂದು ಹೇಳಿದಾಗ ನಾನು ಈ ಸಭೆಯಲ್ಲಿ ರೈತರಿಗೆ ಆಗುತ್ತಿರುವ ನಾನಾ ಕಷ್ಟಗಳನ್ನು ನೋಡಿದರೆ ಅದು ಒಂದಕ್ಕೆರಡರಷ್ಟಾಗಿದೆ. ಸರಕಾರ ಹೀಗೆ ಆಹಾರ ಉತ್ಪತ್ತಿ ಮಾಡಬೇಕೆಂದು ಅನ್ನದಾತನಾದ ರೈತನಿಗೆ ಹೇಳುತ್ತಿದ್ದರೂ ಕೂಡ ಅವನಿಗೆ ಭೂಮಿಯಲ್ಲಿ ಕೆಲಸ ಮಾಡುವ ಶಕ್ತಿ ಕುಗ್ಗುವಂತೆ ನೀವು ಮಾತಾಡುತ್ತಿರುವ ಕಾರ್ಯಕ್ರಮಗಳಿಂದಾಗುತ್ತಿದೆ. ಹೀಗಾದರೆ ನಮ್ಮ ದೇಶದಲ್ಲಿ ಹೆಚ್ಚಿನ ಆಹಾರ ಹೇಗೆ ಬರುತ್ತದೆ ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ನಿಮ್ಮ ದೃಷ್ಟಿ ಹೇಗಿದೆ ಎಂದರೆ ರೈತನಿಂದ ವೋಟನ್ನು ಪಡೆಯುವಾಗ ಅವನಿಗೆ ನೀವು ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುತ್ತೇವೆಂದು ಅವನನ್ನು ಮರುಳು ಮಾಡಿ ಅವನಿಗಾಗಿ ಮೂರು ಪಂಚವಾರ್ಷಿಕ ಯೋಜನೆಯನ್ನು ಮಾಡಿದ್ದೇವೆ ಎಂದು ಐದು ವರ್ಷಕ್ಕೊಂದು ಸಾರಿ ಹೇಳಿ ವೋಟನ್ನು ಪಡೆದು ಬಂದ ಮೇಲೆ ಅವನನ್ನೇ ಮರೆತುಬಿಡುತ್ತಿದ್ದೀರಿ. ನೇಗಿಲಿನ ರೈತ ನಮಗೆ ಮುಖ್ಯ ಎಂದು ನೇಗಿಲನ್ನು ಮತ್ತು ಒಂದು ಜೊತೆ ಎತ್ತನ್ನು ನಿಮ್ಮ ಎಲೆಕ್ಷನ್ನು ಪೋಸ್ಟರಿನಲ್ಲಿ ಅಚ್ಚು ಹಾಕಿಸಿಕೊಂಡು 'ನಿಮ್ಮ ಓಟು ಯಾರಿಗೆ, ನಮ್ಮ ಎತ್ತಿಗೆ' ಎಂದು ಹೇಳುತ್ತ ರೈತನ ಮೇಲೆ ಒಂದು ಸೋಗು ಹಾಕಿಕೊಂಡು ವೋಟನ್ನು ಪಡೆಯುವುದು ಸುಲಭ. ಆದರೆ ಉತ್ಪತ್ತಿ ಹೆಚ್ಚು ಮಾಡಲು ರೈತರಿಗೆ ಸರಕಾರದಿಂದ ಸರಿಯಾದ ಚಿಕಿತ್ಸೆಯಾಗುವಂತಹ ಒಂದು ಮೆಷಿನರಿ ಬೇಕು. ಇದಕ್ಕೆ ನಿಮ್ಮ ಬುಲ್‌ಡೋಜರುಗಳ ಹಾಗೂ ಟ್ರಾಕ್ಟರುಗಳಂತಹ ಮೆಷಿನರಿಯಿಂದ ಆಹಾರ ಹೆಚ್ಚಾಗುವುದಿಲ್ಲ Man Machinery is man power. ಅದನ್ನು ಮಾಡದೇ ಇರುವುದರಿಂದ ನಿಮ್ಮ ಎಲ್ಲಾ ಯೋಜನೆಗಳೂ ಮಣ್ಣುಪಾಲಾಗುತ್ತಿವೆ. ಅವನಿಗೆ ಬೇಕಾದಂತಹ ಅನುಕೂಲಗಳನ್ನೆಲ್ಲಾ ಕಲ್ಪಿಸಿಕೊಡಬೇಕು ಉದಾಹರಣೆಯಾಗಿ ಅಮೆರಿಕಾ ದೇಶವನ್ನೇ ತೆಗೆದುಕೊಳ್ಳಿ. ಅಲ್ಲಿನ ರೈತರ ಪರಿಸ್ಥಿತಿ ಹೇಗಿದೆ ಮತ್ತು ಅವನಿಗೆ ಅನುಕೂಲಗಳನ್ನು ಹೇಗೆ ಮಾಡಿಕೊಡುತ್ತಿದ್ದಾರೆ ಎನ್ನುವುದನ್ನು ನೋಡಬಹುದು. ಅಮೆರಿಕಾದ ಅಧ್ಯಕ್ಷರು ರಿಟೈರು ಆದಮೇಲೆ ರಾಜಕೀಯ ಜೀವನದಿಂದ ಇಳಿದು I might go to a Farm House ಎಂದು ಹೇಳುತ್ತಾರೆ. ವ್ಯವಸಾಯವನ್ನೇ ನಂಬಿಕೊಂಡು ಇರುವ ರೈತರಿಗೆ ಎಷ್ಟು ಮಟ್ಟಿನ ಸೌಕರ್ಯಗಳನ್ನು ಕೊಡಬಹುದು ಎನ್ನುವುದನ್ನು ಆಲೋಚನೆಮಾಡಬೇಕು. ರೈತ ಎನ್ನುವವನಿಗೆ ಭೂಮಿಯ ಮೇಲೆ ಮಮತೆ ಕಡಮೆಯಾಗಿ ನಮ್ಮ ದೇಶದಲ್ಲಿ ಕೆಳಮಟ್ಟಕ್ಕೆ ಹೋಗುತ್ತಿದೆ. ವ್ಯವಸಾಯ ಮಾಡತಕವರಿಗೂ ಮತ್ತು ಭೂಮಿಯನ್ನೇ ನಂಬಿಕೊಂಡಿರುವವರಿಗೂ ಘರ್ಷಣೆಯಾಗದಂತೆ ಸಮನ್ವಯವಾಗುವಂತೆ ವ್ಯವಸಾಯವನ್ನೇ ನಂಬಿಕೊಂಡಿರುವವರು ಹಳ್ಳಿಗೆ ಹೋಗಿ ನೆಲಸಿ ಅಲ್ಲಿಯೇ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಬೇಕು. ಹಾಗೆ ಮಾಡದಿರು

(ಶ್ರೀ ಎಸ್. ಶಿವಪ್ಪ)

ವುದರಿಂದ ಈಗ ಅನ್ನವನ್ನು ಉತ್ಪತ್ತಿ ಮಾಡುವುದು ಮಾಯವಾಗುತ್ತಿದೆ. ರೈತನ ಸುತ್ತಮುತ್ತಲಿರುವ ಜನರು ಬಹಳ ಸುಲಭವಾಗಿ ಜೀವನ ಮಾಡುತ್ತಿದ್ದಾರೆ. ರೈತನಿಗಾಗಿ ಕೊಡುತ್ತಿರುವ ಸಹಾಯಗಳೆಲ್ಲಾ ಮಧ್ಯವರ್ತಿಯ ಜನಕ್ಕೆ ಸಿಕ್ಕಿ ಅವರೇ ಎಲ್ಲ ಸುಖ ಭೋಗಗಳನ್ನೂ ಪಡೆಯುತಿದ್ದಾರೆ. ನಿಜವಾಗಿಯೂ ಬೆವರು ಸುರಿಸಿ ಕೆಲಸ ಮಾಡುವ ರೈತಾಪಿ ಜನಕ್ಕೆ ಸರಿಯಾದ ಸಹಾಯಗಳು ದೊರೆಯುತ್ತಿಲ್ಲ. ರೈತರಿಗಾಗಿ ನೀರಿನ ಸೌಕರ್ಯಗಳನ್ನು ಕೊಡಲು ಬಾವಿ ತೋಡಿಸಿ ಕೊಳ್ಳುವುದಕ್ಕಾಗಿ ಪಂಪುಸೆಟ್ಟುಗಳನ್ನು ಸಾಲವಾಗಿ ಕೊಡುತ್ತಿದ್ದಾರೆ. ಶಾಶ್ವತವಾದ ಸಹಾಯ ಮಾಡಬೇಕೆಂದು ಸಾಲವಾಗಿ ಹಣ ಹಾಗೂ ಇನ್ನೂ ಅನೇಕ ತರಹದ ಸೌಲಭ್ಯಗಳನ್ನು ಕೊಡುತ್ತಿದ್ದೇವೆ ಎಂದು ಅಂಕಿ ಸಂಖ್ಯೆಗಳ ಮೂಲಕ ಈಚೆಗೆ ಸರಕಾರದವರು ಇಲ್ಲಿ ಹೇಳಿದರು, ಆದರೆ ತಾವು ಯಾವ ರೀತಿಯಾದ ಸಾಲ ಮತ್ತು ಇತರ ಸೌಕರ್ಯಗಳನ್ನು ಕೊಟ್ಟರೂ ರೈತರ ಬೆಂಬಲಗರಾಗಿರತಕ್ಕವರೇ ಎಲ್ಲಾ ಸಹಾಯಗಳನ್ನೂ ಪಡೆಯುತ್ತಿದ್ದಾರೆ, ಆದರೆ ತಾವು ಕಾನೂನುಗಳನ್ನು ಮಾಡಿ ಅದಕ್ಕೆ ತಕ್ಕಂತಹ ನಿಯಮಗಳನ್ನು ಮಾಡಿದ್ದೇವೆಂದು ಭಾವಿಸಿಕೊಳ್ಳಬಹುದು.

ಬಡಪಾಯಿ ರೈತ ಸಾಲಕ್ಕಾಗಿ ಜೈಲಿಗೆ ಹೋಗುತ್ತಾನೆ ನಾನು ಬಿಚ್ಚಿದ ಮನಸ್ಸಿನಿಂದ ಹೇಳುತ್ತಿದ್ದೇನೆ. ನೀವು ಇಷ್ಟು ಲಘುವಾಗಿ ಯೋಚನೆ ಮಾಡಬಾರದು. ಬಹಳ ಆಳವಾಗಿ ಆಲೋಚನೆ ಮಾಡಬೇಕು. ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ, ಏಕೆ ಸಾಕಾದಷ್ಟು ಆಹಾರೋತ್ಪತ್ತಿಯಾಗುತ್ತಿಲ್ಲ? ನಿಮ್ಮನ್ನು ಇವತ್ತು ಅಳತೆ ಮಾಡತಕ್ಕಂಥ ಕೋಲು ಈ ಪ್ರಶ್ನೆ: ನೀವು ಆಹಾರವನ್ನು ಎಷ್ಟು ಉತ್ಪತ್ತಿ ಮಾಡಿದ್ದೀರಿ ಅನ್ನುವುದು ನಿಮ್ಮ ಈ 16 ವರ್ಷದ ಆಡಳಿತವನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದರೆ, ಅದಕ್ಕೆ ಒಂದು ಪ್ರಶ್ನೆ ಏನಿದೆಯೆಂದರೆ, ಎಷ್ಟು ಆಹಾರವನ್ನು ಉತ್ಪತ್ತಿ ಮಾಡಿದ್ದೀರಿ ಅನ್ನುವುದು. ನೀವು ಖರ್ಚು ಮಾಡುತ್ತಿರುವ ಹಣಕ್ಕೆ ಸರಿಯಾದ ಪ್ರತಿಫಲ ದೊರೆತಿದೆಯೇ? ನಮ್ಮ ದೇಶದ ಆದಾಯ 1957 ನೇ ಇಸವಿಯಲ್ಲಿ 58 ಕೋಟಿ ರೂಪಾಯಿ ಇತ್ತು; ಈಗ 100 ಕೋಟಿ ಆಗಿದೆ ಈ ಹಣ ಹೇಗೆ ಖರ್ಚಾಗುತ್ತಿದೆ; ಖರ್ಚಿನ ಮೇಲೆ ಒಂದು ಹತೋಟಿ ಇಲ್ಲವೇ ಇಲ್ಲ. ಆ ಖರ್ಚಿನಿಂದ ರೈತರಿಗೆ ಉಪಯೋಗವಾಗುತ್ತದೆಯೇ? ಇಲ್ಲ ಮತ್ತು ಈ 100 ಕೋಟಿ ರೂಪಾಯಿ ಎಲ್ಲಿಗೆ ಹೋಯಿತು? ನೀವು ರೈತನಿಗೆ ಹಣ ಕೊಡದೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಕೊಟ್ಟು ಅವರನ್ನು ಶ್ರೀಮಂತರನ್ನಾಗಿ ಮಾಡುತ್ತೀರಿ. ಶರಾವತಿ ಯೋಜನೆಯಲ್ಲಿ ಕೋಟ್ಯಂತರ ರೂಪಾಯಿ ಮುಳುಗಿಸಿದ್ದೀರಿ. ಅವರುಗಳು ಸುಖವಾಗಿ ಕುಳಿತು, ಲಕ್ಷಾಂತರಗಟ್ಟಲೆ ಸಂಪಾದಿಸಿ, ಸುಲಭವಾಗಿ ಜೀವನ ಮಾಡುತ್ತ ಇರಬೇಕು. ಈ ಭೂಮಿಯನ್ನು ಮಾಡುವ ರೈತ 365 ದಿನ ಗೇಯಿದು, ಬೆವರು ಸುರಿಸಿದರೂ ಅವನಿಗೆ ಏನು ಪ್ರತಿಫಲವಿದೆ? ರೈತ ಅವನ ಜೀವಮಾನವನ್ನೆಲ್ಲಾ ನಿರುತ್ಸಾಹದಿಂದ ಉತ್ತೇಜನವಿಲ್ಲದೆ ಕಳೆಯಬೇಕು.

2-30 P. M.

ನಮ್ಮ ದೇಶದಲ್ಲಿ ಆಹಾರವನ್ನೇನಾದರೂ ಬೆಳೆಯಬೇಕೆಂದರೆ, it is only through the gifts of monsoon. We are under the vagaries of monsoon. ಮಳೆ ಬಂದು ಸಾಕಷ್ಟು ಆಹಾರ ಬೆಳೆದರೆ, ಆಹಾರ ಜಾಸ್ತಿಯಾಯಿತು ಎಂದು ನಿಮ್ಮ ಭುಜವನ್ನು ತಟ್ಟಿಕೊಳ್ಳುತ್ತೀರಿ. ಅದು ಅಲ್ಲ, ನಾನು ಹೇಳತಕ್ಕಂಥಾದ್ದು ಸರ್ಕಾರದ ರೀತಿ ನೀತಿಗಳಿಂದ, ನಿಮ್ಮ ಕಾರ್ಯಕ್ರಮಗಳಿಂದ ಏನು ಮಾಡಿದ್ದೀರ, ಆಹಾರ ಉತ್ಪತ್ತಿ ಜಾಸ್ತಿ ಮಾಡಿದ್ದೀರಿ. ನಮ್ಮ ದೇಶದಲ್ಲಿ ತುಂಗ ಭದ್ರ ಅಣೆಕಟ್ಟು ಪೂರೈಸಿ ಎಷ್ಟು ವರ್ಷವಾಯಿತು? ಅದರಲ್ಲಿ ಸುಮಾರು 6½ ಲಕ್ಷ ಎಕರೆ ಭೂಮಿ ಸಾಗುವಳಿಯಾಗಬೇಕು ಇವತ್ತು ಎಷ್ಟು ಎಕರೆ ಸಾಗುವಳಿಯಾಗುತ್ತಿದೆ? ಶ್ರೀ ಎ. ಜಿ. ರಾಮಚಂದ್ರರಾವ್ ಕಮಿಟಿಯವರು ಅಲ್ಲಿ ಇವತ್ತಿನದಿವಸ ಶೇಕಡ ಅರ್ಧರಷ್ಟು ಭೂಮಿ ಕೂಡ ಉಪಯೋಗವಾಗುತ್ತಿಲ್ಲವೆಂದು ಹೇಳಿದ್ದಾರೆ ಆರು ಲಕ್ಷ ಎಕರೆಗೆ ನೀರು ನುಗ್ಗಿ ಪುನಃ ಹಿಂದಕ್ಕೆ ಹೊಳೆಗೆ ಹೋಗುತ್ತಿದೆ. ಈ ಯೋಜನೆಗಳಲ್ಲಿ ಕೋಟ್ಯಂತರ ರೂಪಾಯಿ ವ್ಯವಸಾಯಕ್ಕೋಸ್ಕರ ಖರ್ಚು ಮಾಡಿದ್ದೀರ. ಈ ಯೋಜನೆಗಳಿಂದ ಖಂಡಿತವಾಗಿಯೂ ವ್ಯವಸಾಯಕ್ಕೆ ಪ್ರಯೋಜನವಾಗುತ್ತಿಲ್ಲ. ತಮ್ಮ ರಾಜಕೀಯವನ್ನು ಈ ಅಣೆಕಟ್ಟುಗಳ ನಿರ್ಮಾಣಕ್ಕೆ ಸೇರಿಸಬೇಡಿ. ಮೂರು ಅಣೆಕಟ್ಟುಗಳನ್ನು ಕಟ್ಟಲು ನಮ್ಮ ಸರಕಾರ ಯೋಜನೆಗಳನ್ನು ತಯಾರು ಮಾಡಿ ಹಲವಾರು ವರ್ಷಗಳಾದವು ಆದರೂ ಕೂಡ ಆ ಅಣೆಕಟ್ಟುಗಳನ್ನು ಕಟ್ಟತಕ್ಕಂಥ ಪ್ರಯತ್ನ ಯಾವ ರೀತಿಯಲ್ಲಿಯೂ ಮುಂದುವರೆದಿಲ್ಲ. ಇವು ಗೋರೂರು, ಹಾರಂಗಿ ಮತ್ತು ಕಂಬದ ಕಡ ಪ್ರಾಜೆಕ್ಟುಗಳು. ನೀವು ಈ ಅಣೆಕಟ್ಟುಗಳ ಯೋಜನೆಗಳನ್ನು ಕಾರ್ಯಗತಮಾಡದೆ ಇರುವುದಕ್ಕೆ ಕಾರಣವೇನು? ನಮ್ಮ ರಾಜ್ಯದ ಇರಿಗೇಷನ್ ಫೆಸಿಲಿಟಿಗಳು ಹೊರ ರಾಜ್ಯಗಳಿಗಿಂತಲೂ ಹಿಂದೆ ಉಳಿದಿವೆ. ಇಲ್ಲಿ ಶೇಕಡ 7 2

ರಷ್ಟು ಮಾತ್ರ ಇರಿಗೇಶನ್ ಫೆಸಿಲಿಟಿ ಕೊಟ್ಟಿದ್ದಾರೆ, All India average ಶೇಕಡ 25ರಷ್ಟಿದೆ. ಅಂದರೆ ನಮ್ಮದು ಆಲ್-ಇಂಡಿಯಾದ ಮೂರನೆ ಒಂದರಷ್ಟಿದೆ. ನೆರೆಪ್ರಾಂತ್ಯವಾದ ಮದ್ರಾಸಿನಲ್ಲಿ 38 ಪರ್ಸೆಂಟು ಇರಿಗೇಶನ್ ಫೆಸಿಲಿಟಿಕೊಟ್ಟಿದ್ದಾರೆ. ಇಷ್ಟು ಹಿಂದುಳಿದಿದ್ದರೂ ಕೂಡ ಅನೇಕ ಕಾಂಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಏತಕ್ಕೆ ಮನಸ್ಸು ಮಾಡಿಲ್ಲ. ನಮ್ಮ ಕಾವೇರಿ ಅಗ್ರಿಮೆಂಟು 1972ಕ್ಕೆ ಮುಗಿದು ಹೋಗುತ್ತದೆ. ಆವಾಗ ಏನು ಮಾಡುತ್ತೀರಿ. ನೀವು ಯಾವ ಅಣೆಕಟ್ಟುಗಳನ್ನು ಇನ್ನೂ ಮಂಜೂರು ಮಾಡದೆ ಮೀನಮೇಶ ನೋಡುತ್ತಿರುವುದನ್ನು ಕಂಡು ಬಹಳ ವ್ಯಸನವಾಗುತ್ತದೆ. ಯಾರೋ ಪ್ರಭಾವ ಶಾಲಿಗಳು ಬಂದು ತಮ್ಮ ಹಿತಕ್ಕೆ ಧಕ್ಕೆಯಾಗುತ್ತದೆಂದು, ಬೇಡ ಎಂದು ಹೇಳಿದರೆ, ಕಾವೇರಿ ನದಿಗೆ ಅಣೆಕಟ್ಟುಗಳನ್ನು ಮುಂದೆ ಹಾಕುತ್ತಿದ್ದೀರಿ. ಕೃಷ್ಣರಾಜ ಸಾಗರ ಕಟ್ಟತಕ್ಕಂಥ ಕಾಲದಲ್ಲಿ ಎಷ್ಟೋ ಎಕರೆ ಪ್ರದೇಶ ಮುಳುಗಡೆಯಾಯಿತು; ಸರ್ ಎಂ. ವಿಶ್ವೇಶ್ವರಯ್ಯನವರು ಆ ಯೋಜನೆ ಬಿಟ್ಟರೆ? ಯಡತೊರೆಯೇ ಮುಳುಗಿ ಹೋಯಿತು. ಹಳ್ಳಿಗಳು ಮುಳುಗಿದರೆ ಹೊಸ ಪಟ್ಟಣಗಳು ನಿರ್ಮಾಣವಾಗುತ್ತವೆ. ತಾವು ಯಾರೋ ದೊಡ್ಡ ಪ್ರಭಾವ ಶಾಲಿಗಳು ಬಂದು ಯಾವುದೋ ಪ್ರದೇಶ ಮುಳುಗಡೆಯಾಗಿಬಿಡುತ್ತದೆಂದು ಹೇಳಿ ಬಿಟ್ಟರೆ, ತಾವು ಮೀನಮೇಶ ಮಾಡಿದರೆ ಯಾವ ಒಂದು ಕಾರ್ಯವನ್ನು ಸಾದನೆ ಮಾಡಬೇಕೋ, ಅದು ಸಾದನೆ ಯಾಗುವುದಿಲ್ಲ.

[MR. DEPUTY SPEAKER in the Chair]

ನೀವು ಧೈರ್ಯದಿಂದ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿ ಅದರ ಪ್ರಯೋಜನವನ್ನು ಪೂರ್ಣವಾಗಿ ಪಡೆಯತಕ್ಕಂಥ ವಿಚಾರದಲ್ಲಿ ತಾವು ಖಂಡಿತವಾಗಿಯೂ ಮನಸ್ಸು ಮಾಡಬೇಕು.

ಇವತ್ತಿನ ದಿವಸ ನಮ್ಮ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಏನಿದೆ? ಈ ಎರಡು ಯೋಜನೆಗಳು ಆದ ಮೇಲೆ the growth of national imcome is 4 per cent. ನಮ್ಮ ರಾಜ್ಯದ್ದು 3½ ಪರ್ಸೆಂಟು; ಅದಕ್ಕಿಂತಲೂ ಕಡಮೆ ಇದೆ. ನಾವು ಯಾವ ಅಂಶವನ್ನು ತೆಗೆದುಕೊಂಡೂ, ಭಾರತ ದೇಶದ ಆವರೇಜಗಿಂತ ಕಡಿಮೆ ಇದ್ದೇವೆ. ನೀರಾವರಿ ಸೌಲಭ್ಯಗಳನ್ನು ಒದಗಿಸುವುದರಲ್ಲಿ, ಭಾರತದ ಸರಾಸರಿಗೆ ಬಹಳ ಕೆಳಗಿದ್ದೇವೆ. ಆದ್ದರಿಂದ ಈ ಅಣೆಕಟ್ಟುಗಳ ನಿರ್ಮಾಣ ಕೆಲಸವನ್ನು ಧೈರ್ಯವಾಗಿ ಮಾಡುವುದರ ಮುಖಾಂತರ, ನಮ್ಮ ಮೈಸೂರು ರಾಜ್ಯದಲ್ಲಿ ಸಾಕಾದಷ್ಟು ಆಹಾರ ಉತ್ಪತ್ತಿ ಮಾಡುವುದರಲ್ಲಿ ಉತ್ತೀರ್ಣರಾಗುತ್ತೀರೆಂದು ನಂಬಿದ್ದೇನೆ.

ಈ ಮೈನರ್ ಇರಿಗೇಷನ್ ವಿಚಾರದಲ್ಲಿ ಆಗಲೇ ನಮ್ಮ ಮಾನ್ಯ ಮಿತ್ರರು ಹೇಳಿದ್ದಾರೆ. ಈ ಮೈನರ್ ಇರಿಗೇಷನ್ ಕಾರ್ಯ ಸರಿಯಾಗಿ ಮುತುವರ್ಜಿಯಿಂದ ಮಾಡದೆ ಹೋದರೆ, ದೇಶದಲ್ಲಿ ಏನನ್ನು ಖಂಡಿತವಾಗಿ ಸಾಧನೆ ಮಾಡುವುದಕ್ಕಾಗುವುದಿಲ್ಲ. ಹಿಂದಿನ ಕಾಲದಲ್ಲಿ ಪಾಳೆಗಾರರು, ರಾಜ ಮಹಾರಾಜರುಗಳು ಸಹಸ್ರಾರು ಕೆರೆಗಳನ್ನು ಕಟ್ಟಿ ಹೋಗಿದ್ದಾರೆ. ಅವರು ಕಟ್ಟಿ ಹೋದ ಕೆರೆಗಳ ದುರಸ್ತಿ ಕೆಲಸ ನಡೆಯದೆ, ಕೆರೆಗೆ ಬಂದಂಥ ನೀರು ಸೋರಿ ಹೋಗುತ್ತಿದೆ. ಆ ನೀರು ರೈತನ ಗದ್ದೆಗಳಿಗೆ ಹೋಗುವಂತೆ ಮಾಡಿದರೆ ಆಹಾರೋತ್ಪತ್ತಿಯನ್ನು ಹೆಚ್ಚು ಮಾಡಲು ಪ್ರಯೋಜನವಾಗುತ್ತದೆ. ಈ ಸಭೆಯಲ್ಲಿ ವರ್ಷ ವರ್ಷವೂ ಇದನ್ನು ಹೇಳುತ್ತಿದ್ದರೂ, ಏನು ಕೆಲಸವೂ ಆಗಿಲ್ಲ. ಕೆರೆಗಳ ರಿಪೇರಿಯಾಗದೆ, ಶೇಕಡ 50 ರಷ್ಟು ಕೆರೆಗಳ ನೀರು ವ್ಯರ್ಥವಾಗಿ ಹೋಗುತ್ತಿದೆ. ಕೆರೆಗಳ ಏರಿಗಳು ಒಡೆದು ಹೋಗಿ ನೀರು ಸೋರಿ ಹೋಗುವುದೇ ದೇಶದಲ್ಲಿ ನೀರಿನ ಉಪಯೋಗವನ್ನು ಪೂರ್ಣವಾಗಿ ಹೊಂದದೆ ಇರುವುದಕ್ಕೆ ಕಾರಣ. ಈ ಕೆರೆಗಳ ದುರಸ್ತಿ ಕಾರ್ಯ ಬಹಳ ಮುಖ್ಯವಾದ ವಿಚಾರ ಅದಕ್ಕೆ ಸರ್ಕಾರ ಬಹಳ ತೀವ್ರವಾದ ಗಮನ ಕೊಡಬೇಕು.

ಐದು ಸಾವಿರ ಪಂಪು ಸೆಟ್ಟುಗಳನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳಿದ್ದೀರಿ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರೂ, ರೆವಿನ್ಯೂ ಡಿಪಾರ್ಟ್‌ಮೆಂಟಿನವರೂ ಈ ಎಲೆಕ್ಟ್ರಿಕ್ ಪಂಪು ಸೆಟ್ಟುಗಳನ್ನು ಕೊಟ್ಟಿದ್ದರು; ರೈತರು ಅವುಗಳನ್ನು ಮನೆಯಲ್ಲಿ ಇಟ್ಟುಕೊಂಡುಬಿಟ್ಟಿದ್ದಾರೆ. ಖಾಲಿ ಲೈನುಗಳನ್ನು, ಕರೆಂಟಿಲ್ಲದೆ, ಎಳೆದರೆ ಪಂಪುಸೆಟ್ಟಿನಿಂದ ಏನು ಪ್ರಯೋಜನವಾಗುತ್ತದೆ? ಉತ್ತರ ಕರ್ಣಾಟಕದಲ್ಲಿ ಮುಂದೆ ಎಲೆಕ್ಟ್ರಿಸಿಟಿ ಬರುತ್ತದೆಂದು ನೂರಾರು ಮೈಲಿ ಲೈನು ಹಾಕಿಕೊಂಡು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಮುಂದೆ ಶರಾವತಿಯಿಂದ ಕರೆಂಟು ಕೊಡುತ್ತೇವೆಂದು ಮುಖ್ಯ ಮಂತ್ರಿ ಹೇಳುತ್ತಿದ್ದಾರೆ. ಅದರ ಮೇಲೆ ಗಾಳಿಯಲ್ಲಿ ಲೈನು ಎಳಿಯುತ್ತಿದ್ದಾರೆ. ಖಾಲಿ ಲೈನಿಂದ ಏನು ಪ್ರಯೋಜನ. ಖಾಲಿ ಲೈನು ಬಿಡಬೇಡಿ ಸರಿಯಾದ ಲೈನ್ ಬಿಡಿ. ಕೊಟ್ಟ ಪಂಪುಸೆಟ್ಟುಗಳು ಮನೆಯಲ್ಲಿ ಬಿದ್ದಿವೆ. ನಿಜವಾದ ಪರಿಸ್ಥಿತಿಗೆ ಇಳಿಯಿರಿ. ಸುಮ್ಮನೆ ಗಾಳಿ ಗೋಪುರ ಕಟ್ಟತಕ್ಕಂಥ ಯೋಜನೆಗಳನ್ನು ದೇಶದ ಮುಂದಿಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಕೇವಲ ವಾದ ಸರಣಿಯಿಂದ, ವೇದಿಕೆಗಳ ಭಾಷಣಗಳಿಂದ ಆಹಾರ ಉತ್ಪತ್ತಿ ಆಗುವುದಿಲ್ಲ. ವೇದಿಕೆ

(ಶ್ರೀ ಎಸ್. ಶಿವಪ್ಪ)

ಭಾಷಣಗಳ ಕಾಲ ಹೋಯಿತು. ಇವತ್ತು ಕಾರ್ಯ ಮಾಡತಕ್ಕ ಪ್ರವೃತ್ತಿ ಬೆಳೆಯಲಿ. ಮಾನ್ಯ ಮಂತ್ರಿಗಳು ಈ ರಾಜ್ಯಕ್ಕೆ 27 ಮಂತ್ರಿಗಳು ಬೇಕು, ಕೆಲಸ ವಿದೆಯೆಂದು ಹೇಳಿದರು. ಇವತ್ತು 27 ಮಂತ್ರಿಗಳು ಬಂದರೂ ಆಹಾರದ ಕೊರತೆ ನೀಗಲಿಲ್ಲ, ಆಹಾರದ ಅಭಾವ ನೀಗಲಿಲ್ಲ ಮಂತ್ರಿಗಳ ಸಂಖ್ಯೆ ಜಾಸ್ತಿಯಾಯಿತು, ಭೋಗ ಜಾಸ್ತಿಯಾಯಿತು; ಆದರೆ ಅವರು ಆಹಾರ ಕೊರತೆ ನೀಗತಕ್ಕಂಥ ಕಾರ್ಯದಲ್ಲಿ ವಿಫಲರಾಗಿದ್ದಾರೆ. ಈ ವಿಫಲತೆಯಿಂದ ಸರಕಾರ ಕೆಳಗಿಳಿಯುವುದಕ್ಕೆ ತಯಾರಿದೆಯೇ? ಅದು ಅಧಿಕಾರವನ್ನು ತ್ಯಾಗಮಾಡಿ, ಮಂತ್ರಿಗಳು ಹಳ್ಳಿಗಳಿಗೆ ಹೋಗಿ, ಆಹಾರೋತ್ಪತ್ತಿ ಮಾಡಲಿ. ಅವರೂ ನೇರವಾಗಿ ಈ ಕಾರ್ಯದಲ್ಲಿ ನೆರವಾಗುತ್ತೇವೆಂಬ ಮನೋಭಾವವನ್ನು ತೋರಿಸಿದರೆ, ಬೆಳೆಸಿ ಕೊಂಡರೆ, ರೈತನಿಗೆ ಕೂಡ ಅದರಿಂದ ಒಂದು ಹುಮ್ಮಸ್ಸು ಬರುತ್ತದೆ. ಇವತ್ತು ಮಂತ್ರಿಗಳು ಅಧಿಕಾರವನ್ನು ಬಿಟ್ಟು, ಹಳ್ಳಿಗಳಿಗೆ ಬಂದು, ವ್ಯವಸಾಯ ಕಾರ್ಯದಲ್ಲಿ ನಿರತರಾದರೆ, ರೈತರಿಗೂ ಹೆಚ್ಚು ಆಹಾರೋತ್ಪತ್ತಿ ಮಾಡಲು ಒಂದು ಹುಮ್ಮಸ್ಸು, ಒಂದು ಪ್ರೇರಣೆ ಬರಬಹುದು. ಅದು ಬಿಟ್ಟು ಇಲ್ಲಿ ಕೂತುಕೊಂಡು, ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡಿ, ವಿದ್ಯುಚ್ಛಕ್ತಿಯನ್ನು ಮುಂದೆ ಕೊಡುತ್ತೇವೆಂದು ಹೇಳಿದರೆ ಏನೂ ಆಗುವುದಿಲ್ಲ. ಇವೆಲ್ಲಾ ಕೇವಲ ಹೊಗಳು ಭಟ್ಟರ ಕಥೆಯಾಗುತ್ತದೆ. ನೀವು ಕಾರ್ಯೋನ್ಮುಖರಾಗಿ, ನಿಮ್ಮಿಂದ ಕರ್ಮಯೋಗಿಯ ಕೆಲಸವಾಗಲಿ.

ಇವತ್ತು ಬೇಕಾಗಿರತಕ್ಕದ್ದು ಕರ್ಮಯೋಗಿಗಳು. ಇವರ ಶಕ್ತಿ ಇವತ್ತಿನ ದಿವಸ ಬೆಳೆಯಬೇಕು. ಕರ್ಮಯೋಗಿಗಳು ಹೆಚ್ಚಿದರೆ ಮಾತ್ರ ಆಹಾರವನ್ನು ಬೆಳೆದು ಆಹಾರದ ಕೊರತೆಯನ್ನು ನೀಗಬಹುದು. ಈಗಲಾದರೂ ಕೂಡ ಇಂಥ ಕೆಲಸವನ್ನು ಮಾಡಿ ದೇಶದಲ್ಲಿರತಕ್ಕ ಆಹಾರಾಭಾವವನ್ನು ನೀಗಬೇಕೆಂದು ಸಭಾಪತಿಯವರು ಕೊಟ್ಟ ಅವಕಾಶದಲ್ಲಿ ಸರ್ಕಾರಕ್ಕೆ ಬುದ್ಧಿವಾದವನ್ನು ಹೇಳುತ್ತಿದ್ದೇನೆ. ಇದನ್ನು ಬಗೆಹರಿಸದೆ ಹೋದರೆ ದೇಶದಲ್ಲಿ ಆಹಾರ ಕ್ರಾಂತಿಯಾಗುತ್ತದೆ. ಅದು ಬಹಳ ದಿವಸವಿಲ್ಲ. ಈ ಆಹಾರ ಕ್ರಾಂತಿ ನಿಮ್ಮನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತದೆ ಎಂದು ಹೇಳಲಾರೆ. ಎಲ್ಲ ದೇಶಗಳಲ್ಲಿಯೂ ಕೂಡ ಆಹಾರ ಕಡಿಮೆಯಾದಾಗ ಆಹಾರ ಕ್ರಾಂತಿ ಎದ್ದಿದೆ. ಸರ್ಕಾರದವರು ಜನತೆಗೆ ಏನು ಹೇಳುತ್ತಿದ್ದಾರೆಂದರೆ ನಿಮ್ಮ ಕಚ್ಚೆಯನ್ನು ಕಟ್ಟಿ ಜನಗಳ ಉತ್ಪತ್ತಿಯನ್ನು ಕಡಮೆ ಮಾಡಿ ಎಂದು. ಇದನ್ನು ಹೇಳುವುದಕ್ಕೆ ಇವರು ಯಾರು ? ಜನಗಳನ್ನು ಉತ್ಪತ್ತಿ ಮಾಡತಕ್ಕದ್ದು ಬಿಡತಕ್ಕದ್ದು ಅವರವರಿಗೆ ಸಂಬಂಧಪಟ್ಟ ವಿಷಯ. ನಾವು ಮಾಡಬೇಕಾದ್ದು ಆ ಜನತೆಗೆ ಉದ್ಯೋಗ ದೊರಕಿಸುವುದು.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಕಚ್ಚೆ ಕಟ್ಟಿ ಎಂದು ಹೇಳುತ್ತಾರೆಂಬುದಾಗಿ ತಿಳಿಸಿದರು, ಕಚ್ಚೆ ಕಟ್ಟಬೇಕೆ, ಹೊಟ್ಟೆ ಕಟ್ಟಬೇಕೆ ?

ಶ್ರೀ ಎಸ್. ಶಿವಪ್ಪ.—ಇವತ್ತು ಅವರು ಕಚ್ಚೆ ಕಟ್ಟಿ ಎಂದು ಹೇಳುತ್ತಿದ್ದಾರೆ. ಹೊಟ್ಟೆಯನ್ನು ಈಗಾಗಲೇ ಕಟ್ಟಿದ್ದೇವೆ. ಹೊಟ್ಟೆಗೆ ಆಹಾರ ಯಾವಾಗ ಇಲ್ಲವೋ ಆಗ ಹೊಟ್ಟೆಯನ್ನು ಕಟ್ಟಿ ಉಪವಾಸ ಇರಬೇಕಾಗುತ್ತದೆ. ಇದರಿಂದ ದೇಶದಲ್ಲಿ ಕ್ರಾಂತಿ ನಡೆಯುತ್ತದೆ. ಆಹಾರ ಸಮಸ್ಯೆಯನ್ನು ನಿವಾರಿಸುವುದರಲ್ಲಿ ಮಂತ್ರಿಗಳು ಸಂಪೂರ್ಣರಾಗಿ ವಿಫಲರಾಗಿದ್ದಾರೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಮಾತನಾಡುವಾಗ ಎಲ್ಲೆಲ್ಲಿ ಮಳೆ ಹೋಗಿದೆ, ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಕೆಲಸವಾಗಬೇಕಾಗಿದೆ ಎಂದು ಸಲಹೆ ಮಾಡಿದರೆ ಆ ಭಾಗಗಳಲ್ಲಿ ಏನೇನು ಕೆಲಸಗಳು ಪ್ರಾರಂಭವಾಗಿವೆ ಇನ್ನು ಯಾವ ಕೆಲಸಗಳನ್ನು ಮಾಡಬಹುದು ಎಂದು ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಆಹಾರ ಮಂತ್ರಿಗಳು ಎಲ್ಲೆಲ್ಲಿ ಮಳೆ ಬಂದಿಲ್ಲ, ಎಲ್ಲಿ ಅಭಾವ ವುಂಟಾಗಿದೆ ಎಂದು ಹೇಳಿದರೆ ಅದಕ್ಕೆ ಪರಿಹಾರ ಕೊಡುತ್ತೇವೆ ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರಿಗೆ ಮಾತನಾಡುವುದಕ್ಕೆ ಇಲ್ಲಿ ಅವಕಾಶ ಸಿಕ್ಕದೆ ಇರಬಹುದು. ಅಂಥ ಸದಸ್ಯರು ಪತ್ರ ಮುಖೇನ ಅವರಿಗೆ ತಿಳಿಸಿದರೆ ಅವರು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಮುಂದಿನ ಸಲ ನಾವು ಬಂದಾಗ ನಮಗೆ ತಿಳಿಸಬೇಕು.

ಶ್ರೀ ಟಿ. ಎಚ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಸಭೆಯ ಮುಂದೆ ತಂದಿರುವ ಸೂಚನೆಯ ವಿಚಾರದಲ್ಲಿ ಅವರು ಮಾತನಾಡಿದರು ಮತ್ತು ಅವರ ನಂತರ ಮಾತನಾಡಿದಂಥ ಶ್ರೀ ಶಿವಪ್ಪನವರು ಮತ್ತು ಶ್ರೀಮತಿ ನಾಗರತ್ನಮ್ಮನವರೂ ಮಾತನಾಡಿದರು. ಅವರು ಹೇಳಿದಂಥ ವಿಚಾರಗಳನ್ನು ನಾನು ಪುಷ್ಟೀಕರಿಸುತ್ತ ನಾಗಮಂಗಲ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ.

ನಾಗಮಂಗಲ ತಾಲ್ಲೂಕಿನಲ್ಲಿ ಮುಕ್ಕಾಲು ಭಾಗ ಬಿತ್ತನೆಯಾಗಿಲ್ಲ, ಹೊಲದಲ್ಲಿ ಗೊಬ್ಬರದ ಗುಡ್ಡೆಗಳನ್ನು ಸಹಿತ ಎತ್ತಿಲ್ಲವೆನ್ನುವುದನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಿನ್ನೆಯ ದಿವಸ ಬೆಳಿಗ್ಗೆ ಅನಿರೀಕ್ಷಿತವಾಗಿ ನಮ್ಮ ಮುಖ್ಯಮಂತ್ರಿಗಳು ನಾಗಮಂಗಲದ ಮಾರ್ಗವಾಗಿ ಹೋದರು. ನಾನು ಅವರನ್ನು ನೋಡಿದ್ದರೆ ಕೆಲವು ಸ್ಥಳಗಳನ್ನು ತೋರಿಸಬೇಕು ಎಂದು ಇದ್ದೆ. ಆದರೆ ಮಂತ್ರಿಗಳ ಕಾರು ಬಹಳ ಬೇಗ ಹೊರಟುಹೋಯಿತು. ಮಾನ್ಯ ಕಂದಾಯ ಸಚಿವರನ್ನು ಯಾವುದೋ ಒಂದು ಸಂದರ್ಭದಲ್ಲಿ ನಮ್ಮ ತಾಲ್ಲೂಕಿಗೆ ಬರಬೇಕೆಂದು ಕರೆಯುತಕ್ಕ ಸಂದರ್ಭವಿದೆ. ನಿನ್ನೆ ಮತ್ತು ಮೊನ್ನೆ ಇಲ್ಲಿಗೆ ತಾಲ್ಲೂಕು ಕಚೇರಿಯಿಂದ ಬಂದಿರತಕ್ಕ ಮಳೆಯ ವಿವರಣೆಯಲ್ಲಿ ನಾಗಮಂಗಲದಲ್ಲಿ 84 ಸೆಂಟು, ಬಿಂಡಿಗನವಲೆಯಲ್ಲಿ 48 ಸೆಂಟು ಈ ರೀತಿಯಾಗಿ ಮಳೆಯಾಗಿದೆ ಎಂದು ತಿಳಿಸಿದ್ದಾರೆ. ಆದರೆ ಕಳೆದ ನಾಲ್ಕೂವರೆ ತಿಂಗಳಿನಿಂದ ಮಳೆಯಿಲ್ಲದ ಜಾಗದಲ್ಲಿ ಇದರಿಂದ ನೆಲವನ್ನು ಅರ್ಧ ಇಂಚು ಸಹಿತ ಉಳುವುದಕ್ಕೆ ಸಾಧ್ಯವಿಲ್ಲ ಎನ್ನುವುದು ತಮಗೆ ಅರ್ಥವಾಗಬಹುದು. ಮೊದಲು ಮಾತನಾಡಿದ ಮಿತ್ರರು ನಿನ್ನೆ ಮತ್ತು ಮೊನ್ನೆ ಮಳೆಯಾಗಿರುವುದರಿಂದ ನಮಗೆ ಈಗ ಬಂದಿರತಕ್ಕ ಕಷ್ಟಗಳೆಲ್ಲ ಪರಿಹಾರವಾಯಿತು ಎಂದು ಹೇಳಿದರು. ಈಗ ನಾವು ಸ್ವಲ್ಪ ಕುಳಿತುಕೊಂಡರೆ, ಕೆಲಸಕಾರ್ಯಗಳ ವಿಚಾರದಲ್ಲಿ ಮುತುವರ್ಜಿ ವಹಿಸದೆ ತಕ್ಷಣ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳ ಕಡೆ ನಿಗಾ ಕೊಡದೆ ಹೋಗಬಹುದು ಎನ್ನುವ ಭಯ ನನ್ನ ಮನಸ್ಸಿನಲ್ಲಿದೆ.

ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆ ನಮ್ಮ ದೇಶದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದೆರಡು ಗೋಕಟ್ಟೆಯ ತರಹ ಕಟ್ಟೆಗಳಿವೆ. ಅವುಗಳನ್ನು ರಿಪೇರಿ ಮಾಡಿದರೆ ಕೆಲವು ಕಾಲ ಅದರಲ್ಲಿ ನೀರು ನಿಲ್ಲುತ್ತದೆ. ಈ ಸಂದರ್ಭದಲ್ಲಿ ನನ್ನ ತಾಲ್ಲೂಕಿನ ಪರಿಸ್ಥಿತಿಯನ್ನು ಹೇಳುತ್ತೇನೆ. ಪ್ರತಿ ವರ್ಷವೂ ಕೂಡ ನಾವು ನೆಮ್ಮದಿಯಿಂದ ಬಾಳತಕ್ಕ ಅನುಕೂಲವನ್ನು ಪಡೆದುಕೊಂಡು ಬಂದಿಲ್ಲ ಮಳೆ ಬರುವುದಿಲ್ಲ. ಹಸ್ತ, ಚಿತ್ತ, ಸ್ವಾತಿ ಮಳೆಗಳಲ್ಲಿ ನಾಗಮಂಗಲ ತಾಲ್ಲೂಕಿಗೆ ಬೇಕಾದ 25 ಅಂಗುಲ ಮಳೆಯಾಗಬೇಕು. ಹೀಗೆ 25 ಅಂಗುಲ ಮಳೆಯಾದರೆ ರೈತನಿಗೆ ಒದಗಿಸಬೇಕಾದ ಯಾವ ಸೌಲಭ್ಯಗಳನ್ನೂ ಕೂಡ ಅವರು ಒದಗಿಸುತ್ತಿಲ್ಲ. ಯಾವ ಯಾವ ತಾಲ್ಲೂಕಿನಲ್ಲಿ ಮಳೆ ಹೇಗೆ ಬೀಳುತ್ತದೆ ಎನ್ನತಕ್ಕ ಲೆಕ್ಕ ಇವತ್ತು ನಮಗೆ ಸಿಕ್ಕಬೇಕು. ವ್ಯವಸಾಯದ ಸಂಶೋಧನಾ ಕೇಂದ್ರಗಳೇನಿವೆ ಅವು ಯಾವ ಯಾವ ಬೆಳೆಯನ್ನು ಯಾವ ಯಾವ ಮಳೆ ಬಂದಾಗ ಹಾಕಬೇಕು, ಅದಕ್ಕೆ ಏನು ಮಾಡಬೇಕು ಎನ್ನತಕ್ಕ ಸಂಶೋಧನೆಯನ್ನು ಮಾಡಿ ನಮ್ಮ ರೈತರಿಗೆ ತಿಳಿಸತಕ್ಕ ವ್ಯವಸ್ಥೆ ಇವತ್ತಿನ ದಿವಸ ಆಗಿಲ್ಲ. ಮಂಡ್ಯ ಜಿಲ್ಲೆಯಲ್ಲಿ package programme ಬಂದಿದೆ. ಆದರೆ ಅವರು ಕೆಲಸ ಮಾಡುತ್ತಿಲ್ಲ ಎಂದು ಹೇಳತಕ್ಕ ಕೃತಘ್ನ ನಾನಲ್ಲ. ಅವರು ಬಹಳ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಆದರೆ ಅನಿರೀಕ್ಷಿತವಾದ ಕಾರಣಗಳಿಗಾಗಿ–ಇದು ಮನುಷ್ಯನ ಕೈಯಲ್ಲಿಲ್ಲ–ಪ್ರಕೃತಿಯು ನಮ್ಮ ಮೇಲೆ ಮುನಿಸಿಕೊಂಡಿರತಕ್ಕ ಕಾಲದಲ್ಲಿ ಅವರ ಕೆಲಸ ಅಷ್ಟು ಯಶಸ್ವಿಯಾಗಿಲ್ಲ. ಈ ಸಂದರ್ಭದಲ್ಲಿ ನಾವು ಶಾಶ್ವತವಾದ ಕೆಲವು ಕೆಲಸಗಳನ್ನು ಆಲೋಚನೆ ಮಾಡಬೇಕಾಗಿದೆ. ಹೀಗೆ ಮಾಡುವಾಗ ಸರ್ಕಾರ ನಮ್ಮ ಹತ್ತಿರ ದುಡ್ಡು ಇಲ್ಲ ಎಂಬತಕ್ಕ ಒಂದು ಮಾತನ್ನು ಹೇಳತಕ್ಕದ್ದು ಮಾಮೂಲಾಗಿದೆ. ಹೀಗೆ ಕುಳಿತುಕೊಂಡರೆ ಆಗುವುದಿಲ್ಲ. ಇಲ್ಲಿ ಶಾಶ್ವತವಾದ ಕೆಲಸಗಳನ್ನು ಮಾಡಬೇಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತವೆ. ಕೆರೆ,ಕಟ್ಟೆ, ಕುಂಟೆಗಳೇನಿವೆ ಅವನ್ನು ಕೂಡಲೇ ದುರಸ್ತು ಮಾಡಿಸಬೇಕು. ಈಗ ಸರ್ಕಾರದವರು ಒಂದು ಹೊಸ ಆರ್ಡರು ಮಾಡಿದ್ದಾರೆ. ಅದರ ಪ್ರಕಾರ 24 ಅಂಗುಲಕ್ಕೆ ಹೆಚ್ಚು ಮಳೆಯಾದರೆ ಒಂದು ಸಾವಿರ ರೂಪಾಯಿ ಖರ್ಚು ಮಾಡಬಹುದು, 20 ಅಂಗುಲ ಮಳೆಯಾದರೆ ಇಷ್ಟು ಖರ್ಚು ಮಾಡಬಹುದು, ಇದರ ಮೇಲ್ಪಟ್ಟು ಎಸ್ಟಿಮೇಟಾದರೆ ಆ ಕೆಲಸಗಳನ್ನು ತೆಗೆದುಕೊಳ್ಳಬಾರದು ಎಂದು. ಇದರಿಂದ ನಮ್ಮ ತಾಲ್ಲೂಕಿನಲ್ಲಿ ನೂರಾರು ಕೆಲಸಗಳು ಅಂದಾಜು ಆಗಿದ್ದಂಥ ಕೆಲಸಗಳು turn down ಆಗಿವೆ. ಇದರಿಂದ ನಮಗೆ ಬಹಳ ಅನಾಹುತವಾಗುತ್ತದೆ, ನಮ್ಮ ಜನ ಬಹಳ ಕಷ್ಟಪಡಬೇಕಾಗುತ್ತದೆ. ಪದೇ ಪದೇ ಮಳೆಯಾಗದೆ ಇರತಕ್ಕ ತಾಲ್ಲೂಕು ನಾಗಮಂಗಲ ತಾಲ್ಲೂಕಾಗಿರುವುದರಿಂದ ಅಲ್ಲಿಗೆ ಈ ಕಾನೂನನ್ನು ಅನ್ವಯ ಮಾಡಬೇಡಿ. ಅಲ್ಲಿ ಏನೇನು ಕಟ್ಟೆ ಕೆರೆಗಳು ದುರಸ್ತು ಆಗಬೇಕೋ ಅವುಗಳನ್ನೆಲ್ಲ ಒಂದು ಕಡೆಯಿಂದ ಮಾಡಿಕೊಂಡೇ ಹೋಗಿ ಇದಕ್ಕೆಲ್ಲ ಹಣವನ್ನು ಹೇಗೆ ತರಬೇಕು ಎಂದರೆ ನಮ್ಮ ದೇಶಕ್ಕೆ ಹೆಚ್ಚು ಉತ್ಪತ್ತಿಯನ್ನು ಕೇಂದ್ರ ಸರ್ಕಾರದವರು ನಾನಾ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಹೆಚ್ಚು ಅನುಭವಶಾಲಿಗಳಾದ ಮುಖ್ಯಮಂತ್ರಿಗಳು ಇದ್ದಾರೆ. ಅವರು ದಿಲ್ಲಿಗೆ ಹೋಗಿ ಪರಿಹಾರ ಕೆಲಸದ ಸಲುವಾಗಿ ಕೇಂದ್ರ ಸರಕಾರದಿಂದ 20—25 ಕೋಟಿ ರೂಪಾಯಿ ಹಣ ಪಡೆದು ಒಂದು ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕು. ಈ ಹಣ ತಂದು ಕೆಲಸ ಕೈಕೊಳ್ಳಲು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಇನ್ವೆಸ್ಟಿಗೇಷನ್ಸ್ ಸಬ್ ಡಿವಿಜನ್ಸ್ ಎಂದು ಮಾಡಿದ್ದಾರೆ. ಎಂಜನಿಯರ್ ಎಲ್ಲಿಯೋ ಇರುತ್ತಾನೆ, ಸರ್ವೇಯರ್ ಎಲ್ಲಿಯೋ ಇರುತ್ತಾನೆ. ಅವರನ್ನು ಹುಡುಕುವುದು ಹೇಗೆ? ಸರ್ವೆ

(ಶ್ರೀ ಟಿ. ಎನ್. ಮಾದಪ್ಪಗೌಡ)

ಡಿಪಾರ್ಟ್‌ಮೆಂಟಿನಲ್ಲಿರುವ ಸಬ್ ಡಿವಿಜನ್ನಿನಲ್ಲಿ ಸಾಕಷ್ಟು ಸಿಬ್ಬಂಧಿ ಇಲ್ಲ. ಎಲ್ಲೆಲ್ಲಿ ಕೆರೆ, ಕಟ್ಟೆ ಆಗಬೇಕು ಎಂದು ರೈತ ಬಂದು ಹೇಳುವುದರ ಬದಲು ನೀವೇ ಸರ್ವೆ ಮಾಡಿಸಿ ಕೆಲಸ ಮಾಡಿಸಿಕೊಡ ತಕ್ಕಂಥ ಏರ್ಪಾಡು ಮಾಡದೇ ಹೋದರೆ ಸುಖರಾಜ್ಯ ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲದೆ ಹೋಗುತ್ತದೆ. ಬಾವಿ ವಿಚಾರದಲ್ಲಿ ನಾಗರತ್ನಮ್ಮನವರು ಚೆನ್ನಾಗಿ ಹೇಳಿದರು. ನಮ್ಮ ಕಡೆ ಅಷ್ಟಾಗಿ ಬಾವಿಗಳಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸುಮಾರು 30 ಬಾವಿಗಳಾಗಿರಬಹುದು. ಬಾಕಿ ಬಾವಿಗಳು ನಾನಾ ಹಂತದಲ್ಲಿ ನಿಂತುಹೋಗಿವೆ. ಒಂದು ಬಾವಿಗೆ 3,000 ತೆಗೆದುಕೊಂಡು ಇನ್ನೂ 2,000 ರೂಪಾಯಿ ಸಾಲ ಮಾಡಿ ನಿರ್ಗತಿಕರಾದಂಥ ಉದಾಹರಣೆಗಳು ಮೂರು ನಾಲ್ಕು ನಾನು ಕಣ್ಣಾರೆ ನೋಡಿದ್ದೇನೆ. ರೈತರಿಗೆ ಪರಿಹಾರ ಕೊಡಬೇಕು. ಹಣ ವಾಪಸ್ಸು ಕೊಡಲು ಹೆಚ್ಚು ಕಂತುಗಳ ಸೌಕರ್ಯ ಒದಗಿಸಬೇಕು. ನಮ್ಮ ಕಡೆ ರೈತರು ಸತ್ಯವಂತರಾಗಿದ್ದಾರೆ. ಸಾಲ ತೆಗೆದುಕೊಂಡ ಹಣ ಹಿಂತಿರುಗಿಸುವ ಭಾವನೆ ಅವರಿಗೆ ಇದೆ. ಋಣ ತೀರಿಸದೆ ಯಾವ ರೈತನೂ ಇರುವುದಿಲ್ಲ. ಸರಕಾರವೇ ಬಾವಿ ತೆಗೆಯಿಸಿ ಕೊಡುವ ವ್ಯವಸ್ಥೆ ಮಾಡಬೇಕು ಮತ್ತು ಸುಲಭವಾದ ಕಂತುಗಳಲ್ಲಿ ಹಣ ಹಿಂತಿರುಗಿಸುವ ಏರ್ಪಾಡು ಮಾಡಬೇಕು. ದೇಶದಲ್ಲಿ ಎಲ್ಲರಿಗೂ ಅನ್ನ ಒದಗಿಸಿ ಕೊಡುವ ರೈತನಿಗೆ ಏನು ಸೌಕರ್ಯ ಒದಗಿಸಿಕೊಟ್ಟಿದ್ದೇವೆ ? ದೇಶ ಸಂರಕ್ಷಣೆ ಮಾಡುವ ಸೈನಿಕನಿಗೆ ಎಲ್ಲ ವ್ಯವಸ್ಥೆ ಮಾಡಿಕೊಡುತ್ತೇವೆ, ಅನ್ನ ಕೊಡತಕ್ಕಂಥವನಿಗೆ ಏನು ಮಾಡಿದ್ದೇವೆ ? ತಾವು ಧೈರ್ಯವಾಗಿ ಇಂಥಾದ್ದನ್ನು ಮಾಡಿದ್ದೇವೆಂದು ಹೇಳಲು ಸಾಧ್ಯವಿಲ್ಲ. ರೈತನು ಬೆಳೆಯುವ ಬೆಳೆಗೆ ಸರಿಯಾದ ಪ್ರತಿಫಲ ದೊರೆಯುವುದಿಲ್ಲ. ಚುನಾವಣೆಯಲ್ಲಿ ಓಟು ದೊರಕಿಸಲು ಏನು ಮಾಡಬೇಕು ಅವನ್ನು ಮಾಡುತ್ತೀರಿ. ರಾಗಿ, ಭತ್ತ, ಕಬ್ಬು ಯಾವುದೇ ಬೆಳೆ ಇರಲಿ ಒಂದು ಎಕರೆಗೆ 450 ರೂಪಾಯಿ ಖರ್ಚಾಗುತ್ತದೆಂದು ಹೇಳುತ್ತಾರೆ. ಇಷ್ಟು ಖರ್ಚು ಮಾಡಿ ಬೆಳೆಯತಕ್ಕದ್ದು ಏನು ? ಮೂರು ಪಲ್ಲಕ್ಕಿಂತ ಹೆಚ್ಚಿಗೆ ಬರುವುದಿಲ್ಲ. ರೈತ ಇಷ್ಟರಲ್ಲಿ ಸಂಸಾರ ಸಾಗಿಸುವುದು ಹೇಗೆ? ಸಾಲ ತೀರಿಸುವುದು ಹೇಗೆ ? ಡಬ್ಬಲ್ ರೇಟ್ ಕಂದಾಯ ಕೊಡುವುದು ಹೇಗೆ ? ಕಾರ್ಖಾನೆಯಲ್ಲಿ ಕೂಲಿಕಾರರು ಕೂಲಿ ಸರಿಯಾಗಿ ದೊರೆಯುವುದಿಲ್ಲವೆಂದು ಮುಷ್ಕರ ಹೂಡಿದರೆ ಬೋನಸ್ ಕೊಡುತ್ತೀರಿ. ಇವನಿಗೆ ಯಾರು ಗತಿ ? ವ್ಯವಸಾಯ ಸಚಿವರಿಗೆ ಕಂದಾಯ ಸಚಿವರಿಗೆ ಇಬ್ಬರಿಗೂ ರೈತನ ಕಷ್ಟ ಸುಖ ಅರ್ಥವಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡು ಅವರು ಸೂಕ್ತವಾದ ಬೆಲೆ ದೊರೆಯುವ ಹಾಗೆ ಒಂದು ಏರ್ಪಾಡು ದಯವಿಟ್ಟು ಮಾಡಬೇಕು ಎಂದು ನಾನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ರೈತನಿಗೆ ಸರಿಯಾದ ಬೆಲೆ ದೊರೆಯದಿದ್ದರೆ ಆತನು ಕೂಲಿ ಮಾಡಲು ಭದ್ರಾವತಿಗೊ, ಬೆಂಗಳೂರಿಗೋ ಹೊರಟುಹೋಗುತ್ತಾನೆ. ತಿಂಗಳಿಗೆ ಒಂದು ನೂರು ರೂಪಾಯಿಯಾದರೂ ಕೂಲಿ ಮಾಡಿದರೆ ಸಿಕ್ಕುತ್ತದೆ. ಹಳ್ಳಿ ಬಿಟ್ಟು ಬಿಟ್ಟು ಪಟ್ಟಣಕ್ಕೆ ಬರುತ್ತಾನೆ. ವ್ಯವಸಾಯ ಮಾಡುವುದನ್ನೇ ಬಿಟ್ಟುಬಿಡುತ್ತಾನೆ. ಇದನ್ನು ಪೂರ್ಣ ವಿಚಾರ ಮಾಡಿದರೆ ಇನ್ನು ಮುಂದೆ ರೈತ ಜೀವನ ಮಾಡಿ ಬದುಕುತ್ತಾನೆ ಎಂದು ಯಾರೂ ತಿಳಿದುಕೊಳ್ಳಬಾರದು. ಈ ಅಸೆಂಬ್ಲಿ ಅಧಿವೇಶನ ಮುಗಿದ ಮೇಲೆ ನಮ್ಮ ತಾಲ್ಲೂಕಿಗೆ ಬರಬೇಕೆಂದು ಶ್ರೀಮಾನ್ ಕೃಷ್ಣಪ್ಪನವರನ್ನು ಆಹ್ವಾನಿಸುತ್ತೇನೆ. ಅವರು ಕಣ್ಣಾರೆ ಕೆಲವು ಪ್ರದೇಶ ನೋಡಬೇಕು. ನಮ್ಮ ತಾಲ್ಲೂಕಿನಲ್ಲಿ ಅರ್ಧ ಭಾಗ ಬಿತ್ತನೆಯಾಗಿಲ್ಲ. ಇನ್ನೂ ಮಳೆಯಾಗಿಲ್ಲ. ಪೈರು ಒಣಗಿ ಹೋಗಿದೆ. ಇನ್ನು ಮಳೆಯಾದರೂ ಪ್ರಯೋಜನವಾಗುವುದಿಲ್ಲ. ಇದು ನಿಮಗೆ ಅರ್ಥವಾಗುತ್ತದೆ. ಆದ್ದರಿಂದ ರೈತ ಕೊಡತಕ್ಕಂಥ ಕಂದಾಯ ವಸೂಲ್ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಸತ್ಯವಾಗಿ ಪರಿಸ್ಥಿತಿ ಏನಿದೆ ದಯವಿಟ್ಟು ನೋಡಬೇಕು. ಶಾನುಭೋಗರು ಪಾಣಿ ಬರೆಯುವುದನ್ನು ನಂಬುವುದಕ್ಕಾಗುವುದಿಲ್ಲ. ಶಾನುಭೋಗರು 12 ಆಣೆ ಪೀಕು ಎಂದು ಏರಿಸಿ ಬರೆದಿರುತ್ತಾರೆ.

ಈ ವರ್ಷ ಸೆಪ್ಟೆಂಬರ್ ಕಾಲದಲ್ಲಿದ್ದೇವೆ, ಮಹಾನವಮಿ ಬರುತ್ತಾ ಇದೆ, ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ಕೆರೆ, ಕಟ್ಟೆ, ಕುಂಟೆಗಳಲ್ಲಿ ಒಂದು ತೊಟ್ಟು ನೀರೂ ಇಲ್ಲ. ಕುಡಿಯುವುದಕ್ಕಂತೂ ಮಹಾದೇವ ಈಶ್ವರನೇ ಗತಿ. ಶ್ರೀ ಹೆಗ್ಗಡೆಯವರು ನಮ್ಮ ಭಾಗದ ಎಲ್ಲಾ ಬಾವಿಗಳನ್ನೂ ತೆಗೆಸುತ್ತೇವೆ ಎಂದು ಅವರು ಹೇಳಿದರು ಬಹಳ ಸಂತೋಷ. ಅದರಲ್ಲೂ ಬರ ಬಂದಿರತಕ್ಕ ಈ ಕಾಲದಲ್ಲಿ ಅದನ್ನು ಪೂರೈಸಿ ಆಮೇಲೆ ಬೇರೆ ಕೆಲಸಗಳ ಕಡೆಗೆ ಗಮನಕೊಡಿ. ವ್ಯವಸಾಯದ ಮಂತ್ರಿಗಳು ಹೆಚ್ಚಿನ ಉತ್ಪಾದನೆ ಮಾಡುವುದಕೆ ಏನು ಬೇಕೋ ಅದನ್ನು ಅವರು ಮಾಡಲಿ, ಪಿ.ಡಬ್ಲ್ಯು.ಡಿ. ಮಂತ್ರಿಗಳು ಸರ್ವೇ ಕೆಲಸ ಬೇಗ ಮಾಡಿಸಲಿ ಅವರಿಗೂ ಧರ್ಮ, ಪುಣ್ಯ ಬರುತ್ತದೆ ದೇಶಕ್ಕೂ ಒಳ್ಳೆಯದಾಗುತ್ತದೆ. ಕಂದಾಯದ ಮಂತ್ರಿಗಳು ಡಬ್ಬಲ್ ಸೆಸ್ಸು, ಟ್ರಿಬ್ಬಲ ಸೆಸ್ಸು ಈ ಸಾರಿ ಹಾಕುವುದಕ್ಕೆ ಹೋಗಬೇಡಿ, ತಕ್ಷಣ ದೆಹಲಿಗೆ ಹೋಗಿ 25 ಕೋಟಿ ರೂಪಾಯಿಗಳಾದರೂ

ಸರಿಯೆ ತಂದು ಶಾಶ್ವತವಾದ ಪರಿಹಾರ ಕೆಲಸವನ್ನು ಮಾಡಬೇಕೆಂದು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ಈ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಬಹು ಮುಖ್ಯವಾದ ಶೋಷಣೆಗೆ ಬಲಿಯಾಗಿರತಕ್ಕ ರೈತಾಪಿ ಜನರ ಬಗ್ಗೆ ಈ ಸಭೆ ಕಳವಳವನ್ನು ವ್ಯಕ್ತಪಡಿಸುವುದು ನ್ಯಾಯವಾಗಿಯೇ ಇದೆ; ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ನಮ್ಮ ರಾಜ್ಯದ ವಾಸ್ತವಿಕತೆಯನ್ನು ಚಿತ್ರಿಸಿದ್ದಾರೆ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ರಾಜ್ಯ ಸರಕಾರ ಆಹಾರದ ಉತ್ಪತ್ತಿ ಮತ್ತು ಯೋಜನೆಗಳು ಎಷ್ಟುಮಟ್ಟಿಗೆ ತಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ ಎಂಬ ವಿಚಾರವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಶ್ರೀಮಾನ್ ಮಾದಪ್ಪ ಗೌಡರು ನಮ್ಮ ರಾಜ್ಯದ ಅತ್ಯಂತ ಕನಿಷ್ಟ ಮಳೆಯನ್ನು ಪಡೆಯತಕ್ಕ ಒಂದು ತಾಲ್ಲೂಕನ್ನು ಪ್ರತಿನಿಧಿಸುತ್ತಾ ಅವರೂ ಸಹ ನಮ್ಮ ರೈತ ಜನರ ಕಷ್ಟ ಪರಂಪರೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಕ್ಷಾಮ ಪರಿಹಾರ ಮತ್ತು ಅಲ್ಪ ಮತ್ತು ಅತಿವೃಷ್ಟಿ ಇವುಗಳ ವಿಚಾರವನ್ನು ನಾವು ದೂರದೃಷ್ಟಿಯಿಂದ ಇವತ್ತು ಚರ್ಚೆ ಮಾಡಬೇಕಾಗಿದೆ ಮತ್ತು ಏನೇ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೂ ಕೂಡ ಅದನ್ನು ಒಂದು ಶಾಶ್ವತವಾದ ಅಂತಸ್ತಿನ ಮೇಲೆ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸದ ಸೂಚನೆಯಾದರೂ ಕೂಡ ತಕ್ಷಣದಲ್ಲಿ ನಮ್ಮ ರಾಜ್ಯದಲ್ಲಿ ಹಲವಾರು ಕಡೆ ಮಳೆ ಸಕಾಲಕ್ಕೆ ಬಾರದೇ ಹೋಗಿ ಅದರಿಂದ ಉದ್ಭವಿಸಿರತಕ್ಕ ಕಳವಳಕರವಾದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರ್ಕಾರದ ಮಟ್ಟದಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬ ಬಗ್ಗೆ ಸದಸ್ಯರುಗಳಾದ ನಾವು ಇವತ್ತು ಸಲಹೆಗಳನ್ನು ಸರ್ಕಾರದ ಮುಂದೆ ಇಡಬೇಕಾಗಿದೆ. ಇದೇ ಸಂದರ್ಭದಲ್ಲಿ ನಾವು ವಾಸ್ತವತೆಗೆ ಸಂಬಂಧವೇ ಇಲ್ಲದಂತಹ ಯೋಜನೆಗಳನ್ನು ವಿಧಾನ ಸೌಧದಲ್ಲಿ ಕುಳಿತು ಮಾಡುವುದರಿಂದ ನಮ್ಮ ರೈತ ಜನಾಂಗಕ್ಕೆ ಯಾವ ವಿಧವಾದ ಉಪಕಾರವಾಗಲಿ ಅಥವಾ ಯಾವ ವಿಧವಾದಂತಹ ಪ್ರಯೋಜನವಾಗಲೀ ಆಗುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ. ನಾವು ಪಂಚವಾರ್ಷಿಕ ಯೋಜನೆಗಳನ್ನು ಬಹುಮಟ್ಟಿನ ಮಹತ್ವಾಕಾಂಕ್ಷೆಯಿಂದ ರೂಪಿಸಿಕೊಂಡಿದ್ದೇವೆ. ಹಲವಾರು ಜನ ಆರ್ಥಿಕ ಪರಿಣತರು ಮತ್ತು ದೇಶದ ಸಂಬಂಧದಲ್ಲಿ ಸಾಕಾದಷ್ಟು ಅನುಭವವನ್ನು ಪಡೆದಿರತಕ್ಕ ಶಾಸ್ತ್ರವೇತ್ತರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ನಾವು ಪ್ರತಿವರ್ಷವೂ ಕೂಡ ಅಮೇರಿಕದ ಕಡೆಗೆ, ಕೆನಡಾ ದೇಶದ ಕಡೆಗೆ ಗೋಧಿಗಾಗಿ, ಅಕ್ಕಿಗಾಗಿ ಪಬ್ಲಿಕ್ ಲಾ 480ನೇ ಕ್ಲಾಸನ್ನು ಆಶ್ರಯ ಮಾಡುತ್ತಾ ಹೋದರೆ ನಾವು ಸ್ವತಂತ್ರ ರಾಷ್ಟ್ರವಾಗಿ ಎಷ್ಟು ದಿವಸ ಈ ಕೆಲಸಕ್ಕೆ ಕೈ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. 16 ವರ್ಷಗಳು ಕಳೆದು ಹೋದವು. 16 ವರ್ಷಗಳಲ್ಲಿ ನಾವು ಎರಡು ಪಂಚವಾರ್ಷಿಕ ಯೋಜನೆಗಳನ್ನು ಪೂರೈಸಿ ಮೂರನೆಯದರ ಮಧ್ಯಭಾಗದಲ್ಲಿದ್ದೇವೆ ಆದರೂ 1948ನೇ ಇಸವಿಯಲ್ಲಿ ನಾವು ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಎಷ್ಟು ಆಹಾರವನ್ನು ಉತ್ಪಾದನೆ ಮಾಡುತ್ತಾ ಇದ್ದೆವೋ 1963ನೇ ಇಸವಿಯಲ್ಲೂ ಆ ಆಹಾರದ ಉತ್ಪಾದನೆಯಲ್ಲಿ ಪರಿಣಾಮಕಾರಿಯಾದ ಅಥವಾ ಸಮಾಧಾನಕರವಾದ ಹೆಚ್ಚಳವನ್ನು ತೋರಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಕಳೆದ ಈ ಶಾಸನ ಸಭೆಯ ಅಧಿವೇಶನದಲ್ಲಿ ನಾವು 1963-64ನೇ ಇಸವಿಯ ಆಯವ್ಯಯವನ್ನು ಚರ್ಚೆ ಮಾಡುತ್ತಾ ಇದ್ದಾಗ ನಾವು ಈ ಸಭೆಯ ಮುಂದೆ ಹಲವು ವಿಷಯಗಳನ್ನು ಅಂಕಿ ಅಂಶಗಳನ್ನು ಆ ದಿವಸ ಇಟ್ಟೆವು. ಆ ಅಂಕಿ ಅಂಶಗಳ ಪ್ರಕಾರ ನಮ್ಮ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವುದಾದರೆ ನಾವು ಅಗ್ರಿಕಲ್ಚರಲ್ ಫ್ರಂಟ್ ಅಥವಾ ವ್ಯವಸಾಯದ ಕ್ಷೇತ್ರದಲ್ಲಿ ಆಹಾರದ ಸ್ವಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಏನು ಕಾರ್ಯಕ್ರಗಳನ್ನು ತೆಗೆದುಕೊಂಡರೂ ಕೂಡ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ, ನಾವು ಏನೊಂದು ಗುರಿಯನ್ನು ಈ ಆಹಾರದ ಹೆಚ್ಚಳಕ್ಕೆ ಇಟ್ಟುಕೊಂಡಿದ್ದೇವೆಯೋ ಅದನ್ನು ಸಾಧಿಸುವುದರಲ್ಲಿ ಶೇಕಡ 30 ಭಾಗ ಕೂಡ ಯಶಸ್ಸನ್ನು ಪಡೆಯುವುದಕ್ಕೆ ಆಗಲಿಲ್ಲ ಎಂಬುದನ್ನು ನಾವು ಇವತ್ತು ಸರಕಾರದ ಮುಂದೆ ಸೂಚನೆ ಮಾಡುತ್ತಾ ಇದ್ದೇವೆ. ಇವತ್ತು ಹೇಗಾದರೂ ಕೂಡ ಇವತ್ತಿನ ಪರಿಸ್ಥಿತಿ ಯಾವ ವಿಧದಲ್ಲೂ ಉತ್ತಮವಾಗಿಲ್ಲ, ಯಾವ ವಿಧದಲ್ಲೂ ಸುಧಾರಣೆಯಂತೂ ಆಗಲಿಲ್ಲ ಎಂದ ಮೇಲೆ ಈ ಸರ್ಕಾರಕ್ಕೆ ವ್ಯವಸಾಯಕ್ಕೆ ಸಾಕಾದಷ್ಟು ಆಸಕ್ತಿ ಇಲ್ಲವೋ ಅಥವಾ ಸರ್ಕಾರ ಬಾಕಿಯ ವ್ಯವಹಾರಗಳ ಮಧ್ಯೆ ವ್ಯವಸಾಯ ಕ್ಷೇತ್ರದ ವ್ಯವಹಾರಕ್ಕೆ ಸಾಕಾದಷ್ಟು ಗಮನ ಕೊಡುವುದಕ್ಕೆ ಅವರಿಗೆ ಕಾಲ ಇಲ್ಲವೋ ಎಂಬ ಅನುಮಾನವುಂಟಾಗುತ್ತದೆ ನನಗೆ. ಯಾವ

(ಶ್ರೀ ಎಸ್. ಎಂ. ಕೃಷ್ಣ)

ರಾಷ್ಟ್ರವೇ ಆಗಲಿ ಅದು ಮುಂದುವರಿಯಬೇಕಾದರೆ ಮೊಟ್ಟಮೊದಲನೆಯದಾಗಿ ಆಹಾರದ ಸ್ವಪರಿಪೂರ್ಣತೆಯನ್ನು ಸಾಧನೆ ಮಾಡಿಕೊಳ್ಳಬೇಕಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರದ ಉತ್ಪಾದನೆಗೆ ಬಹು ಪ್ರಶಸ್ತವಾದ ಅಗ್ರ ಸ್ಥಾನವನ್ನು ಕೊಡಲಾಗಿತ್ತು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಹೆಚ್ಚು ಅಗ್ರ ಸ್ಥಾನವನ್ನು ಕೊಟ್ಟೆವು, ಇವತ್ತು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತೆ ನಾವು ವ್ಯವಸಾಯದ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಆ ಯೋಜನಾ ಮಂಡಲಿಯವರು ಅಭಿಪ್ರಾಯ ಪಟ್ಟಿದ್ದಾರೆ. ನಾವು ಈ ಆಹಾರದ ವಿಚಾರವನ್ನು ಚರ್ಚೆ ಮಾಡುತ್ತಾ ಇರುವಾಗ ಅದಕ್ಕೆ ಸಂಬಂಧಪಟ್ಟ ಮತ್ತೊಂದು ಸಮಸ್ಯೆ ಈ ನಮ್ಮ ದೇಶದಲ್ಲಿ ಉಂಟಾಗುತ್ತಾ ಇರತಕ್ಕದ್ದು ಎಂದರೆ ಜನಸಂಖ್ಯೆ. ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಇವತ್ತು ಬಹು ತೀವ್ರವಾಗಿ ಈ ವಿಚಾರದಲ್ಲಿ ಆಲೋಚನೆ ಮಾಡಬೇಕಾಗಿದೆ.

ಈಗ ಹೆಚ್ಚಾಗುತ್ತಿರುವ ಜನಸಂಖ್ಯೆಯನ್ನು ನಿಯಂತ್ರಣಗೊಳಿಸಲು ಸರ್ಕಾರದವರು ಯಾವುದಾದರೊಂದು ನಿರ್ದಿಷ್ಟವಾದ ಅಥವಾ ಸ್ಪಷ್ಟವಾದ ಒಂದು ಯೋಜನೆಯನ್ನು ಹಾಕಿಕೊಳ್ಳಲೇಬೇಕು. ತತ್ರಾಪಿ ಇನ್ನು 10-15 ವರ್ಷಗಳ ಕಾಲ ಹೀಗೆ ಕೈಬಿಟ್ಟಪಕ್ಷದಲ್ಲಿ, ನಮ್ಮ ಇಂಡಿಯಾ ಮತ್ತು ಚೈನಾ ಈ ಎರಡು ದೇಶಗಳಲ್ಲಿ ಹೆಚ್ಚುವರಿಯಾಗತಕ್ಕ ಜನಸಂಖ್ಯೆ ಇನಿದೆ ಅದು ಇಡೀ ಪ್ರಪಂಚದಲ್ಲಿ ಈ ಆಹಾರಸ್ವಪರಿಪೂರ್ಣತೆಗೆ ಒಂದು ದೊಡ್ಡ ಧಕ್ಕೆ ಬರುವ ರೀತಿಯಲ್ಲಿ ಬೆಳೆಯುತ್ತಿದೆ ಎನ್ನತಕ್ಕ ಅಂಶವನ್ನು ತಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ದಿವಸ ನಮ್ಮ ಇಂಡಿಯಾ ದೇಶದಲ್ಲಿತಕ್ಕ 40-45 ಕೋಟಿ ಜನಗಳಿಗೆ ಆ ಇಂಗ್ಲೆಂಡ್-ಅಮೇರಿಕಾಗಳು ಗೋಧಿಯನ್ನು ಒದಗಿಸಬಹುದು. ಆದರೆ ಆ ದೇಶಗಳು ಹೀಗೆ ಎಲ್ಲಿಯವರೆಗೆ ನಮಗೆ ಈ ಆಹಾರಧಾನ್ಯಗಳನ್ನು ಒದಗಿಸಬಲ್ಲವು ಎಂಬುದನ್ನು ನಾವು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯ ಅಸಂಬದ್ಧವಾಗಿದ್ದರೂ ಹೇಳಲೇಬೇಕಾಗಿದೆ. ಅದೇನೆಂದರೆ : ನಾವು ಈ ಒಂದು ನಿರ್ಲಿಪ್ತತೆ, ಈ ಆಹಾರ ಸಾಮಾಗ್ರಿಗಳಿಗೆ ಪರದೇಶಗಳನ್ನೇ ಅವಲಂಬಿಸಿಕೊಂಡಿರುತ್ತೇವೆಯೋ ಅಲ್ಲಿಯವರೆಗೆ ನಮ್ಮಲ್ಲಿ ಈ ಆಹಾರೋತ್ಪನ್ನ ಹೆಚ್ಚುವುದಿಲ್ಲ. ಮುಂದೆ ಇದರಿಂದ ದೇಶಕ್ಕೆ ದೊಡ್ಡ ತೊಂದರೆ ಆಗುತ್ತದೆ ಎಂಬುದನ್ನು ತಾವುಗಳೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ತಿಳಿಸಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ ನಾವು ಏನಾದರೂ ಒಂದು ಯಶಸ್ವಿಗಳಿಸಬೇಕಾಗಿದ್ದರೆ, ನಾವು ಜನಸಂಖ್ಯೆಯನ್ನು ಕಮ್ಮಿ ಮಾಡಲು ಏನಾದರೂ ಒಂದು ನಿಯಂತ್ರಣವನ್ನು ಹಾಕಿಕೊಳ್ಳಲೇಬೇಕು. ಆದರೆ ಇದು ಬಹಳ ಕಷ್ಟವಾದ ಕೆಲಸ. ಆದರೆ ಹಳ್ಳಿಗಳಕಡೆಯಲ್ಲಿ ದೇವರು ಮಕ್ಕಳನ್ನು ಕೊಡುತ್ತಾನೆಂಬ ಒಂದು ಭಾವನೆ ಜನರಲ್ಲಿ ಬೆಳೆದು ಬಂದಿದೆ. ಹೀಗೆ ನಾವು ಒಂದು ದೇವರಾಶ್ರಯದಲ್ಲಿ ಈ ಕುಟುಂಬವೃದ್ಧಿಯನ್ನು ಮಾಡುತ್ತಾ ಹೋದರೆ, ಅದು ದೇಶದ ಹಿತದೃಷ್ಟಿಯಿಂದಲಾಗಲೀ ಅಥವಾ ಆ ಕುಟುಂಬದ ಹಿತದೃಷ್ಟಿಯಿಂದಲಾಗಲೀ ಖಂಡಿತ ಒಳ್ಳೆಯದಲ್ಲ. ಈ ವಿಚಾರದಲ್ಲಿ ಜನಗಳಿಗೆ ಒಂದು ಸರಿಯಾದ ತಿಳುವಳಿಕೆಯನ್ನು ಉಂಟುಮಾಡತಕ್ಕದ್ದು ಸರ್ಕಾರದ ಮತ್ತು ನಮ್ಮೆಲ್ಲರ ಕರ್ತವ್ಯವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಈ ಜನಸಂಖ್ಯೆಯನ್ನು ಕಡಮೆ ಮಾಡುವುದಕ್ಕಾಗಿ ಒಂದು ಕಡೆ ಒಬ್ಬ ವ್ಯಂಗ್ಯ ಚಿತ್ರಗಾರ ಒಂದು ಚಿತ್ರವನ್ನು ಬರೆದಿದ್ದಾನೆ. ಆ ಚಿತ್ರದಲ್ಲಿ ಅತ ಏನು ತೋರಿಸಿದ್ದಾನೆಂದರೆ: ಒಂದು ಸಣ್ಣ ಮನೆ, ಅಲ್ಲಿ 2-3 ಜೊತೆ ಎತ್ತುಗಳು, ಒಬ್ಬ ಯಜಮಾನಿ, ಒಬ್ಬ ಯಜಮಾನ, ಮತ್ತು ಇಬ್ಬರು ಮಕ್ಕಳು. ಒಂದು ಕುಟುಂಬ ಸುಭಿಕ್ಷವಾಗಿರಬೇಕಾಗಿದ್ದರೆ ಇಷ್ಟು ಜನ ಸಾಕೆಂದು ಆತನು ಚಿತ್ರದಲ್ಲಿ ತೋರಿಸಿದ್ದರೆ ಅಲ್ಲಿ ಮತ್ತೊಬ್ಬ ಮನುಷ್ಯ ನಿಂತು ಹೇಳುತ್ತಾನೆ: ಭಗವಂತ ಈ ವ್ಯಕ್ತಿಗೆ ಒಳ್ಳೇ ಹೆಂಡತಿಯನ್ನು ಕೊಟ್ಟಿದ್ದಾನೆ, ಸಾಕಷ್ಟು ಹೊಲಗದ್ದೆಗಳನ್ನು ಕೊಟ್ಟಿದ್ದಾನೆ, ಎತ್ತುಗಳನ್ನು ಕೊಟ್ಟಿದ್ದಾನೆ, ಆದರೆ ಇಬ್ಬರೇ ಇಬ್ಬರು ಮಕ್ಕಳನ್ನು ಕೊಟ್ಟಿದ್ದಾನೆಂದು ಪಶ್ಚಾತ್ತಾಪ ಪಡುತ್ತಿದನಂತೆ. ಆ ಚಿತ್ರದಲ್ಲಿ ಆ ರೀತಿ ಇದೆ. ಹಳ್ಳಿಗಾಡಿನವರ ಈ ವ್ಯಂಗಚಿತ್ರವು ಅವರ ಒಂದು ವಾಸ್ತವಿಕ ಜೀವನವನ್ನು ಪ್ರತಿಬಿಂಬಿಸುವ ಕೈಗನ್ನಡಿಯಂತಿದೆ. ನಾವು ಈ ಹೊತ್ತು ಜವಾಬ್ದಾರಿ ಪಡೆದಿರತಕ್ಕ ಜನಗಳಾಗಿರುವುದರಿಂದ ನಾವು ಇತರರಿಗೆ ಮಾರ್ಗದರ್ಶಿಗಳಾಗಿ ನಡೆಯಬೇಕಾಗಿದೆ. ಈ ಕೆಲಸದಲ್ಲಿ ನಾವು ಸ್ವಲ್ಪಮಟ್ಟಿಗೆ ಜನರ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗಿ ಬರಬಹುದು. ನಾವು ನಮ್ಮ ದೇಶದ ಜನಸಂಖ್ಯೆಯನ್ನು ಅದಷ್ಟು ಮಟ್ಟಿಗೆ ಕಡಮೆ ಮಾಡಲು ಪ್ರಯತ್ನ ಮಾಡದಿದ್ದರೆ ನಾವು ಒಂದು ದೊಡ್ಡ ದೇಶವನ್ನು ಕಟ್ಟಿದಾಗ್ಯೂ ಅದರಿಂದ ಯಾವ ಲಾಭವನ್ನೂ ಪಡೆಯುವ ಅವಕಾಶವಿರುವುದಿಲ್ಲ. ನಾನು ನಮ್ಮ ಮದ್ದೂರು ತಾಲ್ಲೂಕಿನಲ್ಲಿ ನಮ್ಮ ಜನರಿಗೆ ಅನಕೂಲವಾಗಲಿ ಎಂದು ಮಿತಕುಟುಂಬ ಯೋಜನೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದುದಕ್ಕಾಗಿ, ಈಶ ನಮ್ಮಿಂದ ಓಟುಗಳನ್ನು ತೆಗೆದುಕೊಂಡು ಹೋಗಿ ಈ ದಿವಸ ನಮಗೇನೇ ನಮ್ಮ ಕುಟುಂಬ ಎಷ್ಟಿರಬೇಕು, ನಾವು ಯಾವ

ರೀತಿ ನಡೆಯಬೇಕು, ನಮ್ಮ ಕುಟುಂಬದಲ್ಲಿ ಮಕ್ಕಳಿಷ್ಟಿರಬೇಕು ಎಂಬುದನ್ನೆಲ್ಲ ನಮಗೇ ಹೇಳಿ ಕೊಡುವುದಕ್ಕೆ ಬಂದಿದ್ದಾನೆ ಎನ್ನತಕ್ಕ ಮಾತುಗಳು ನಡೆದವು. ಆದರೂ ನಾವು ಈ ಕಾರ್ಯವನ್ನು ಮಾಡಬೇಕಾದ್ದು ನಮ್ಮಗಳ ಕರ್ತವ್ಯ. ಈ ಜವಾಬ್ದಾರಿಯುತವಾದ ಕೆಲಸವನ್ನ ನಾವು ಮಾಡಲೇ ಬೇಕು. ಈ ಜವಾಬ್ದಾರಿ ನಮ್ಮ ಮೇಲೆ ಬೀಳುವುದಕ್ಕಿಂತ ಹೆಚ್ಚಿಗೆ ಈ ಜವಾಬ್ದಾರಿಯನ್ನು ಹೊತ್ತು ಕೆಲಸಮಾಡಬೇಕಾದ ಕರ್ತವ್ಯ ಸರ್ಕಾರದವರ ಮೇಲಿದೆ. ನಾನಾದರೂ ಈ ವಿಚಾರವನ್ನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ; ಕಾರಣವೇನೆಂದರೆ ಸರ್ಕಾರದವರು ಈ ದಿಕ್ಕಿನಲ್ಲಿ ಇಲ್ಲಿಯವರೆಗೆ ಯಾವ ಒಂದು ನಿರ್ದಿಷ್ಟವಾದ ಮತ್ತು ಧೈರ್ಯವಾದ ನಿಲುವನ್ನು ಅವರು ವ್ಯಕ್ತಪಡಿಸಿರುವುದಿಲ್ಲ. ಇದಕ್ಕೆ ಕೆಲವು ಕಾರಣಗಳಿರಬಹುದು. ಆದರೂ ಈ ಕಾರ್ಯಕ್ಕೆ ಸರ್ಕಾರದವರು ಹೆಚ್ಚಿನ ನೆರವನ್ನೂ ಮತ್ತು ನಿಗವನ್ನೂ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬಹುಕಾಲದಿಂದಲೂ ಈ ಸಮಸ್ಯೆ ಹೀಗೇ ನಿಂತುಬಂದಿದೆ. ಸರ್ಕಾರದವರೂ ಈಗಲಾದರೂ ಈ ವಿಚಾರದಕಡೆಗೆ ತಮ್ಮ ದೃಷ್ಟಿ ಯನ್ನು ಹರಿಸದೆ ಹೋದರೆ ಮುಂದೆ ದೇಶಕ್ಕೆ ಒಂದು ದೊಡ್ಡ ಅಪಘಾತ ಉಂಟಾಗುತ್ತದೆಂದು ನಾನು ತಿಳಿಸಲಿಚ್ಛಿಸುತ್ತೇನೆ; ಮುಂದೆ ಇದನ್ನು ಯಾವರೀತಿಯಲ್ಲೂ ಸುಧಾರಣೆ ಮಾಡಲು ಸಾಧ್ಯವಿರುವುದಿಲ್ಲ. ಈ ಹಿಂದೆ ಶ್ರೀ ಮಾದಪ್ಪಗೌಡರು ನಾಗಮಂಗಲ ತಾಲ್ಲೂಕಿನ ಜನರ ಕಷ್ಟಗಳನ್ನು ಹೇಳುತ್ತಿದ್ದರು. ಅವರು ಹೇಳಿದ್ದು ವಾಸ್ತವ್ಯವಾದ ಅಂಶಗಳು. ನಾನೂ ಕೂಡ ಆ ಭಾಗದ ಜನರನ್ನು ಪ್ರತಿನಿಧಿಸ ತಕ್ಕವನಾಗಿದ್ದೇನೆ. ನಾನು ಆ ಭಾಗದಲ್ಲಿ ಸಂಚಾರಣೆ ಮಾಡಿದಾಗ ಅವರ ಸ್ಥಿತಿಗತಿಗಳನ್ನು ನೋಡಿ ಬಹಳ ಸಂಕಟಪಟ್ಟೆನು. ಆ ಪ್ರದೇಶದಲ್ಲಿ ಅನೇಕ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರಿನ ಬಾವಿಗಳೂ ಸಹ ಇರುವುದಿಲ್ಲ. ಒಂದೆರಡು ಮೈಲಿಗಳ ದೂರ ಹೋಗಿ ಅವರು ಹರಿಯುವ ಹಳ್ಳಗಳಿಂದ ನೀರನ್ನು ತಂದು ಕುಡಿಯಬೇಕಾಗಿದೆ. ಇಂಥ ಒಂದು ದರ್ಭರ ಪರಿಸ್ಥಿತಿ ಅಲ್ಲಿದೆ. ಅಲ್ಲಿ ಬಹಳ ಆಳವಾಗಿ ಬಾವಿಗಳನ್ನು ತೆಗೆದರೂ ನೀರಿಲ್ಲ. ಆದರೆ ಇಲ್ಲಿಗೆ 2-3 ದಿವಸಗಳ ಹಿಂದೆ ಇದೇ ಸಭೆಯಲ್ಲಿ ಕುಡಿಯುವ ನೀರಿನ ಬಾವಿಗಳ ವಿಚಾರ ಇಲ್ಲಿ ಚರ್ಚೆಗೆ ಬಂದಿದ್ದಾಗ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ ಎಂದು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರವಾಗಿ 348 ಗ್ರಾಮಗಳಲ್ಲಿ ಬಾವಿಗಳಿರುವುದಿಲ್ಲ ಎಂದು ಸರ್ಕಾರದವರು ತಿಳಿಸಿದ್ದಾರೆ. ಇದೊಂದು ಮೂಲಭೂತವಾದ ಪ್ರಶ್ನೆ. ಇದು ಜೀವ ಸಾವಿನ ಹೊಣೆಗಾರಿಕೆಯ ಮಹಾ ಪ್ರಶ್ನೆ. ನಾವು ಸ್ವಾತಂತ್ರ್ಯವನ್ನಾದರೂ ಅಪೇಕ್ಷೆ ಮಾಡಿದ್ದು ಏತಕ್ಕೆ? ನಾವು ನಮ್ಮ ಪ್ರಭುತ್ವವನ್ನು ನಾವು ನಾವೇ ನಡೆಸಿಕೊಂಡು ಹೋಗುತ್ತೇವೆ, ನಮ್ಮ ಜನರಿಗೆ ನೆಮ್ಮದಿಯನ್ನೂ ಮತ್ತು ಕಲ್ಯಾಣವನ್ನೂ ಉಂಟು ಮಾಡುತ್ತೇವೆ, ಎಂಬ ದೃಷ್ಟಿಯಿಂದ ತಾನೇ ನಾವು ಆ ಬ್ರಿಟಿಷರನ್ನು ಇಲ್ಲಿಂದ ಕಳುಹಿಸಿ, ಈ ಸರ್ಕಾರವನ್ನು ಸ್ಥಾಪಿಸಿದ್ದು. ಅಂಥ ಒಂದು ಸರ್ಕಾರವನ್ನು ಸ್ಥಾಪನೆಮಾಡಿ ಇಲ್ಲಿಗೆ 16 ವರ್ಷ ಗಳಾದರೂ ನಾವಿನ್ನೂ ಜನರಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ ಎಂದರೆ ನಾವು ಏತಕ್ಕೆ ಈ ಸ್ವಾತಂತ್ರ್ಯಕ್ಕಾಗಿ ಇಷ್ಟು ಹೋರಾಟ ನಡೆಸಬೇಕಾಯಿತು ಎಂದು ಜನಗಳು ಸರ್ಕಾರವನ್ನು ಪ್ರಶ್ನಿಸಬೇಕಾಗಿದೆ; ಸರ್ಕಾರ ಈ ದಿವಸ ಈ ಕೆಲಸವನ್ನು ನೇರವಾಗಿ ನಡೆಸದೆ ಇದನ್ನು ತಾಲ್ಲೂಕು ಬೋರ್ಡುಗಳಿಗೂ, ಗ್ರಾಮಪಂಚಾಯಿತಿಗಳಿಗೂ ವಹಿಸಿ ಕೊಟ್ಟಿದೆ. ನಮ್ಮ ಈ ಗ್ರಾಮಪಂಚಾಯಿತಿಗಳಲ್ಲಿ ಹಲವಾರು ಪಂಚಾಯಿತಿಗಳು ಇನ್ನೂ ಕೆಲಸವನ್ನೇ ಪ್ರಾರಂಭ ಮಾಡಿಲ್ಲ. ಕುಡಿಯುವ ನೀರಿನ ಬಾವಿಗಳನ್ನು ವ್ಯವಸ್ಥೆಮಾಡಲು ಅವರಿಗೆ ಸಾಕಷ್ಟು ಹಣ ಸಿಕ್ಕುವುದಿಲ್ಲ.

ಈ ಬಾವಿಗಳ ವ್ಯವಸ್ಥೆಯನ್ನು ತಾಲ್ಲೂಕು ಅಭಿವೃದ್ಧಿ ಸಂಸ್ಥೆಗಳಿಗಾಗಲೀ ಅಥವಾ ಗ್ರಾಮ ಪಂಚಾಯತಿಗಳಿಗಾಗಲೀ ವಹಿಸತಕ್ಕ ನೀತಿಯನ್ನು ಬಿಟ್ಟು ಅದು ರಾಜ್ಯಸರಕಾರದ ನೇರವಾದ ಕಾರ್ಯವಾಗಿರಬೇಕು. ಇದು ರಾಜ್ಯಸರಕಾರದ ಹೊಣೆಗಾರಿಕೆಯಾಗಿರಬೇಕು. ಇದರಲ್ಲಿ ಲೇಶ ಮಾತ್ರವೂ ರಾಜ್ಯ ಸರಕಾರ ತನ್ನ ಜವಾಬುದಾರಿಯನ್ನು ತಪ್ಪಿಸಿಕೊಳ್ಳುವಂತಾಗಬಾರದು. ಮಂತ್ರಿ ಗಳು ಪ್ರವಾಸ ಹೋದ ಕಾಲದಲ್ಲಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ಬಾವಿಗಳಿಲ್ಲ ಎಂದು ಜನ ಹೇಳಿ ಅರ್ಜಿಗಳನ್ನು ಕೊಟ್ಟಿರುತ್ತಾರೆ. ಇಂತಹ ಜನಕ್ಕೆ ಕುಡಿಯುವ ಬಾವಿಗಳನ್ನು ಕೊಟ್ಟು ನೀರಿನ ಸೌಕರ್ಯವನ್ನು ಒದಗಿಸಿ ಕೊಡದೇ ಇರುವುದು ತೀರಾ ಶೋಚನೀಯವಾದುದು ಮತ್ತು ಇದಕ್ಕಾಗಿ ಸರಿಯಾದ ವ್ಯವಸ್ಥೆಯನ್ನು ಮಾಡುವುದರಲ್ಲಿ ಸರಕಾರ ವಿಫಲವಾಗಿದೆ ಎಂದು ಹೇಳಿದರೆ ಅದು ಅತಿಶಯವಾಗುವುದಿಲ್ಲ ಮತ್ತು ಸುಳ್ಳಾದಂತಹ ಮಾತೂ ಆಗಲಿಲ್ಲ. ಬಹುಶಃ ಕಾಂಗ್ರೆಸ್ಸು ಪಕ್ಷದ ಸದಸ್ಯರೂ ಕೂಡ ನನ್ನಷ್ಟೇ ಅಲ್ಲದೆ ನನಗಿಂತಲೂ ಹೆಚ್ಚಾಗಿ ಈ ವಿಚಾರದಲ್ಲಿ ಸರಕಾರದ ಗಮನವನ್ನು ಸೆಳೆದಿದ್ದಾರೆ. ಗ್ರಾಮ ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಅಭಿವೃದ್ಧಿ ಸಂಸ್ಥೆಗಳಿಗೆ ಈ ಒಂದು ಬಹು ಮುಖ್ಯವಾದ ಕೆಲಸವನ್ನು ನಮ್ಮ ರೈತಾಪಿ ಜನಕ್ಕೆ ಅಗತ್ಯವೆಂದು ಕುಡಿಯುವ ನೀರಿನ ವ್ಯವಸ್ಥೆ ಯನ್ನೂ ವಹಿಸಿಕೊಡುವ ನೀತಿಯನ್ನು ನಾವುಗಳು ಇವೊತ್ತಿನ ದಿವಸ ಬಿಡಿಸಬೇಕು ಮತ್ತು ಸರಕಾರ

(ಶ್ರೀ ಎಸ್. ಎಂ. ಕೃಷ್ಣ)

ದವರು ಆ ನೀತಿಯನ್ನು ಪುನರ್ವಿಮರ್ಶೆ ಮಾಡಬೇಕು ಮತ್ತು ಇದು ಸರಕಾರದ ಹೊಣೆಗಾರಿಕೆಯಲ್ಲೇ ಇರುವಂತೆ ಕೊಡಬೇಕು ಎಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ನಿವೇದನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ನೀರಾವರಿ ಪಂಪುಸೆಟ್ಟುಗಳ ವಿಚಾರ. ಪಂಪುಸೆಟ್ಟುಗಳನ್ನು ಹಂಚುವಾಗ ಇದು ಬಹಳ ವಾದ ವಿವಾದಗಳಿಗೆ ಕಾರಣವಾಗಿದೆ. ಸರಕಾರದವರು ಜನಕ್ಕೆ ಅನುಕೂಲವಾಗಬೇಕೆಂದು ಪಂಪುಸೆಟ್ಟುಗಳಿಗಾಗಿ ಸಾಲ ಕೊಡುತ್ತಾರೆ. ರೈತಾಪಿ ಜನರು ಪಂಪುಸೆಟ್ಟುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಪಂಪುಸೆಟ್ಟುಗಳನ್ನು ನೀವು ನಮಗೆ ಕೊಡುವಾಗ ಇಂತಹ ಕಡೆಯಲ್ಲಿಯೇ ಬಾವಿಯನ್ನು ತೆಗೆಯಬೇಕು. ಇಂತಹದೇ ಹಳ್ಳದಲ್ಲಿ ಹರಿದುಹೋಗತಕ್ಕ ನೀರನ್ನು ತೆಗೆದು ಉಪಯೋಗಿಸುವುದಕ್ಕಾಗುವುದಿಲ್ಲ ಎನ್ನುವಂತಹ ಯಾವ ಷರತ್ತುಗಳನ್ನೂ ಸರಕಾರದವರು ಹಾಕಿಲ್ಲ ಎನ್ನುವುದು ನನ್ನ ಸಾಧಾರಣವಾದ ತಿಳುವಳಿಕೆ. ಕೆಲವು ಕಡೆ ಏನಾಗಿದೆ ಎಂದರೆ ಕೆಲವು ಜಿಲ್ಲಾಧಿಕಾರಿಗಳು ಅನಾವಶ್ಯಕವಾದ ಜಾಗ್ರುತಿಗಳನ್ನು ತೆಗೆದುಕೊಳ್ಳುತ್ತಾರೆ. ಉದಾಹರಣೆಯಾಗಿ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಆಗುತ್ತಿರುವ ಕೆಲವು ವಿವರಗಳನ್ನು ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಒಬ್ಬ ರೈತ ಸರಕಾರದಿಂದ ಪಂಪುಸೆಟ್ಟುಗಳನ್ನು ತೆಗೆದುಕೊಂಡಿದ್ದಾನೆ. ಅದಕ್ಕಾಗಿ ಆಗಬೇಕಾದ ಎಲ್ಲ ನಿಬಂಧನೆಗಳಿಗೂ ಮತ್ತು ಅಗ್ರಿಮೆಂಟಿಗೂ ಸಹಿ ಹಾಕಿದ್ದಾನೆ. ಹಾಗಿದ್ದರೂ ಕೂಡ ಅಲ್ಲಿನ ಜಿಲ್ಲಾಧಿಕಾರಿಗಳು ಆಕ್ರೋಶದಿಂದಾಗಿ ಹತ್ತಿರದಲ್ಲೇ ಹೋಗತಕ್ಕ ಸಣ್ಣ ಕಟ್ಟೆಯ ಮೂಲಕ ನೀರು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅದು ಕಾನೂನಿಗೆ ವಿರೋಧವಾಗಿದೆ ಎಂದು ಹೇಳುತ್ತಾರೆ ಒಂದು ಮಾತಿನ ಧ್ವನಿಯಲ್ಲಿ ಆಹಾರದ ಹೆಚ್ಚುವರಿಯುವಂತೆ ಮಾಡಬೇಕು ಎನ್ನುವ ನೀತಿಯೇನು ? ಇನ್ನೊಂದು ಧ್ವನಿಯಲ್ಲಿ ಕಾನೂನಿಗೆ ವಿರೋಧವಾಗಿದೆಎಂದು ಸಣ್ಣ ಸಣ್ಣ ಅಡಚಣೆಗಳನ್ನು ಮಾಡುವಂತಹ ಹಿಂಸೆಯ ನೀತಿಯಲ್ಲಿ ಎಷ್ಟರಮಟ್ಟಿನ ತರ್ಕ ಉಳಿದಿದೆ ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ನೆರೆಯ ಮದರಾಸು ರಾಜ್ಯದಿಂದ ನಾವು ಕಲಿಯಬೇಕಾದುದು ಬೇಕಾದಷ್ಟಿದೆ. ಆ ರಾಜ್ಯದಲ್ಲಿ ಒಂದು ತೊಟ್ಟು ನೀರೂ ಕೂಡ ವೇಸ್ಟು ಆಗದ ರೀತಿಯಲ್ಲಿ ರೈತರಿಗೆ ನೀರಾವರಿ ಸೌಕರ್ಯಗಳನ್ನು ಒದಗಿಸಲು ಸರಕಾರದ ಕಾಮಗಾರಿ ಇಲಾಖೆಯವರು ಎಷ್ಟೋ ಮುಂಜಾಗರೂಕತೆ ವಹಿಸಿದ್ದಾರೆ. ನಾನು ಇಲ್ಲಿ ಒಂದು ಪ್ರಶ್ನೆ ಮಾಡುತ್ತೇನೆ. ಜನ ಇರತಕ್ಕದ್ದು ಕಾನೂನಿಗೋ ಅಥವಾ ಕಾನೂನು ಇರತಕ್ಕದ್ದು ಜನಕ್ಕೋ ಎಂದು ಹೇಳುವಂತೆ ಪ್ರತಿಯೊಬ್ಬ ರೈತನಿಗೂ ಹಿಂಸೆಗಳನ್ನು ಮಾಡುತ್ತ ಇರತ್ತಾರೆ. ನೀವು ಏನು ಪಂಚವಾರ್ಷಿಕ ಯೋಜನೆಗಳಿಂದ ಆಹಾರದ ಸ್ವಪರಿಪೂರ್ಣತೆಯನ್ನು ಸಾಧನೆ ಮಾಡುವುದಕ್ಕೆ ಹೊರಟಿದೀರೋ ಅವುಗಳನ್ನು ಕಾರ್ಯರೂಪಕ್ಕೆ ತರುವಾಗ ನಿಮ್ಮ ಕಾನೂನುಗಳೇ ಅವಕಾಶ ಮಾಡಿಕೊಡುತ್ತಿಲ್ಲ. ರೈತನಿಗೆ ತಾಲ್ಲೂಕು ಆಫೀಸಿಗೆ ಹೋಗಿ ತಹಶೀಲುದಾರರಿಂದ "No objection certificate" ಎನ್ನುವ ಒಂದು ಸರ್ಟಿಫಿಕೇಟನ್ನು ತರಲು ರೈತನಿಗಾಗುತ್ತಿರುವ ಕಷ್ಟವೇನು ಎನ್ನುವುದನ್ನು ಸರಕಾರ ನೋಡಬೇಕು. ಈ ಪಂಪುಸೆಟ್ಟುಗಳ ವ್ಯವಹಾರದಲ್ಲಿ ಸರಕಾರ ಈಗಿರುವ ಕಾನೂನನ್ನು ಕೊಂಚಮಟ್ಟಿಗಾದರೂ ಸಡಿಲ ಮಾಡತಕ್ಕ ಸನ್ನಿವೇಶಗಳಲ್ಲಿ ಮಾಡಬೇಕು. ಸಡಿಲಮಾಡುವುದಕ್ಕಾಗಿ ಯಾವ ಕಾನೂನು ಸಾಧ್ಯವಿಲ್ಲ ಎನ್ನುವಂತಿರಬಾರದು. ಇವೊತ್ತು ಜನತಂತ್ರದ ಯಶಸ್ವಿಯಾಗಬೇಕು, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕು ಎಂದು ಹೇಳುತ್ತ ಇಂತಹ ಅರ್ಥವಿಲ್ಲದ ಕಾನೂನುಗಳನ್ನು ಕಾನೂನು ಕಡತದಿಂದ ತೆಗೆದು ಹಾಕಿದರೆ ನೀವು ಏನೊಂದು ನಿರ್ದಿಷ್ಟವಾದ ಗುರಿಯನ್ನು ಸಾಧಿಸಬೇಕೆಂದಿದ್ದೀರೋ ಅದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ನಾಲಾ ಪ್ರದೇಶಗಳು ನಮ್ಮಲ್ಲಿ ಕೆಲವು ಕಡೆ ಇವೆ. ಮದ್ದೂರು ತಾಲ್ಲೂಕಿನಲ್ಲಿ ಹಿಂಷಾನದಿಯ ನಾಲೆ, ವಿಶ್ವೇಶ್ವರಯ್ಯ ನಾಲೆಯಲ್ಲಿ, ಎಡನಾಲೆ, ಬಲನಾಲೆ ಎಂದು ಇವೆ. ಎಡನಾಲೆಯ ಹತ್ತಿರದಲ್ಲಿರತಕ್ಕ ಪ್ರಾಂತಕ್ಕೆ ನೀರಿನ ಸೌಕರ್ಯ ಮತ್ತು ನೀರಿನ ಆಶ್ರಯಗಳು ದೊರಕುತ್ತವೆ. ಇದರ ಕೊನೆಯಲ್ಲಿರತಕ್ಕ ಜನಗಳ ಕ್ಷೇತ್ರಗಳಿಗೆ ನೀರು ಸಿಗದೆ ಒಂದು ಬೆಳೆಯನ್ನು ತೆಗೆಯುವುದಕ್ಕೆ ಕೂಡ ಬಹಳ ಕಷ್ಟವಾಗಿದೆ. ಒಂದು ಬೆಳೆಯೂ ಆಗದೆ ಮಳೆಯೂ ಚೆನ್ನಾಗಿ ಬಾರದೆ ಇರುವ ಕ್ಷೇತ್ರಗಳಲ್ಲಿ ಅಲ್ಲಿರುವ ಸೂಪರ್‌ವೈಸರುಗಳು ಮತ್ತು ಅಸಿಸ್ಟೆಂಟು ಇಂಜಿನೀಯರುಗಳು ಸಾಕಾದಷ್ಟು ವಿಚಕ್ಷಣೆಯಿಂದ ಕೆಲಸ ಮಾಡಿದ್ದರೆ ಇಲ್ಲಿಗೆ ನೀರು ಹೋಗವುದಕ್ಕೆ ಸಾಧ್ಯ. ಇದರ ಮೇಲೆ ಸರಿಯಾಗಿ ನೀರು ಪಡೆಯತಕ್ಕ ಜನರೂ ವಾಟರು ರೇಟು ಕೊಡಬೇಕು ಮತ್ತು ನಾಲಾದ ಕೊನೆಯಲ್ಲಿ ಕೆಳಗಡೆ ಇರುವ ಜನ ಯಾವ ನೀರಿನ ಸೌಕರ್ಯವನ್ನು ಪಡೆಯದಿದ್ದರೂ ಕೂಡ ಅವರೂ ವಾಟರು ರೇಟನ್ನು ಕೊಡಲೇಬೇಕು ಎನ್ನುವ ಸರಕಾರದ ನೀತಿ ಬಹಳ ತಪ್ಪಾಗಿ ಮತ್ತು ಕಷ್ಟವಾಗಿ ತೋರುತ್ತಿದೆ. ಈ ನೀತಿಯನ್ನು ಸರಕಾರ ಪುನರ್ವಿಮರ್ಶಿಸಿ ಎಷ್ಟು ವಾಟರು ರೇಟುಕಡ್ಡಾಯವಾಗಿ ಕೊಡಬೇಕು ಎನುವ

ದನ್ನು '' ಈಕ್ವಿಟಿ '' ಯ ಮೇಲೆ ಪುನರ್ವಿಮರ್ಶಿಸಿ ಇದನ್ನು ಬೇಗ ಮಾಡಬೇಕು, ನಾಲೆಯ ನದಿಯ ಕೆಳಗಡೆ ಇರುವ ಜನರಿಗೆ ನೀರು ಪೂರ್ತಿಯಾಗಿ ದೊರಕದೇ ಇರುವುದರಿಂದ ಇಂತಹವರು ವಾಟರು ರೇಟನ್ನು ಈಗಿರುವುದರಲ್ಲಿ ಅರ್ಧದಷ್ಟು ಮಾತ್ರ ಕೊಡಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡಲು ಪರಿಶೀಲನೆ ಮಾಡಬೇಕಾಗಿದೆ. ಇವೊತ್ತು ನಮ್ಮ ನಾಯಕರಾದ ಶ್ರೀಮಾನ್ ಶಿವಪ್ಪನವರು ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತ ನಮ್ಮ ಇಂಡಿಯಾ ದೇಶದ ವ್ಯವಸಾಯ ಕ್ಷೇತ್ರದಲ್ಲಿ ಏನು ಸುಧಾರಣೆ ನಡೆಯಬೇಕಾದರೂ ಅದು ಸಣ್ಣ ನೀರಾವರಿ ಯೋಜನೆಗಳ ಕಾಮಗಾರಗಳಿಂದಲೇ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದರು ತಾವು ತುಂಗಭದ್ರ ಜಲಾಶಯವನ್ನು ಮಾಡಿ ಐದಾರು ಲಕ್ಷ ಎಕರೆಗಳಷ್ಟು ಜಮೀನನ್ನು ನೀರಾವರಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಹುದು ಮತ್ತು ಇದಕ್ಕೆ ಸಾಕಾದಷ್ಟು ಜನರ ಸಹಾಯ ಬೇಕು. ಅಲ್ಲಿ ಕೆಲಸಮಾಡುವಂತಹ Adventurous spirit ಜನರಲ್ಲಿರಬೇಕು. ನಾವು ಯಾವ ಕ್ಷೇತ್ರದಲ್ಲಿಯೇ ಇರಲಿ ಎಲ್ಲಿ ನೀರಿದೆ ಎಂದು ತೋರಿಸಿದರೆ ಅಲ್ಲಿಗೆ ಹೋಗಿ ವ್ಯವಸಾಯ ಮಾಡಬೇಕು ಎನ್ನುವ ಆಶೆ ನಮ್ಮ ಜನರಲ್ಲಿಲ್ಲ. ನಮ್ಮ ಸ್ಥಳದಲ್ಲೇ ನಮ್ಮ ಊರಿನಲ್ಲೇ ಒಂದು ಎಕರೆಯಷ್ಟು ಜಮೀನಿದ್ದರೂ ಸಾಕು, ನಮಗೆ ಹತ್ತು ಎಕರೆ ಗಳಷ್ಟು ಭೂಮಿ ತುಂಗಭದ್ರದ ಬಳಿ ಸಿಕ್ಕಿದರೂ ನಾವು ಹೋಗುವುದಿಲ್ಲ ಎನ್ನುವ ಮನೋಭಾವನೆ ಯನ್ನು ನಮ್ಮ ಜನಗಳಿಂದ ಹಿಂತೆಗೆಸುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕು. ಇವೊತ್ತು ಸರ್ಕಾರದ ವರು ಕೂಡ ಜಮೀನುಗಳನ್ನು ವಿತರಣೆ ಮಾಡತಕ್ಕ ರೀತಿಯಲ್ಲಿಯೂ ಇವೊತ್ತು ಯಾರಾದರೂ ತರು ಣಾವಸ್ಥೆಯಲ್ಲಿರುವ ಯುವಕರಿಗೆ ಸಾಕಾದಷ್ಟು ಉತ್ತೇಜನವನ್ನು ಸರ್ಕಾರದವರು ಕೊಡಬೇಕಾ ಗಿದೆ. ಅವರನ್ನು ಒಂದು ಹೊಸ ಹಾದಿಯಲ್ಲಿ ನೆಲದತ್ತ ಮತ್ತು ಪ್ರದೇಶದತ್ತ ಅವರ ಗಮನವನ್ನು ಸೆಳೆದು ನೀರು ಸಿಕ್ಕುವ ಕ್ಷೇತ್ರಗಳಲ್ಲಿ ಅವರು ಬೆಳೆಯನ್ನು ಮಾಡಲು ಏನೇನು ಸೌಕರ್ಯಗಳು ಬೇಕೋ ಅವನ್ನೆಲ್ಲಾ ಸರಕಾರ ಇವೊತ್ತು ಮಾಡಿಕೊಡಬೇಕಾಗಿದೆ.

ಇನ್ನು ಈ ವ್ಯವಸಾಯ ಕ್ಷೇತ್ರದಲ್ಲಿರತಕ್ಕಂಥ ಕೂಲಿಗಾರರ ಬಗ್ಗೆ ಒಂದು ಮಾತನ್ನು ಹೇಳ ಕಾಗಿದೆ. ಈ 16 ವರ್ಷಗಳಲ್ಲಿ ನಾವು ಈ ಕಾರ್ಮಿಕ ಕ್ಷೇತ್ರದಲ್ಲಿ ಒಂದಿಷ್ಟು ಸುಧಾರಣೆ ಮಾಡಿದ್ದೇವೆ. ಅದರಲ್ಲಿಯೂ ಕೂಡ ಈ ಫ್ಯಾಕ್ಟರಿಗಳಲ್ಲಿರತಕ್ಕಂಥ, ಪಟ್ಟಣಗಳಲ್ಲಿರತಕ್ಕಂಥ ಕಾರ್ಮಿಕರ ಬಗ್ಗೆ ಸರ್ಕಾರದವರು ಆಗಿಂದಾಗ್ಗೆ ಹಲವಾರು ಸೌಲಭ್ಯಗಳನ್ನು ಮಾಡಿಕೊಟ್ಟಿದ್ದಾರೆ. ಆದರೆ ಈ ವ್ಯವ ಸಾಯಕ್ಷೇತ್ರದ ಕಾರ್ಮಿಕರ ಬಗ್ಗೆ ಸರಕಾರದ ದೃಷ್ಟಿ ಸಾಕಾದಷ್ಟುಮಟ್ಟಿಗೆ ಅವರಕಡೆಗೆ ಹೊರಳದೆ ಇರತಕ್ಕಂಥಾದ್ದಕ್ಕೆ ಕಾರಣ ಏನು ಅನ್ನುವುದನ್ನು ನಾವು ಯೋಚಿಸಬೇಕಾಗಿದೆ. ಅವರೂ ಕೂಡ ಕಷ್ಟಪಟ್ಟು ದುಡಿಯತಕ್ಕಂಥ ಜನ. ಅವರ ಬಗ್ಗೆ ಸಾಕಾದಷ್ಟು ಕಾನೂನಾಗದೆ, ಅಥವಾ ಸಾಕಾ ದಷ್ಟು ಅನುಕೂಲತೆಗಳಾಗಲಿ, ಆಕರ್ಷಿತವಾದಂಥ ಯೋಜನೆಗಳಾಗಲೀ ಏಕೆ ಸರ್ಕಾರದವರು ಇನ್ನೂ ಮಾಡುವುದಕ್ಕೆ ಹೋಗಿಲ್ಲ ಅನ್ನುವುದನ್ನು ಪ್ರಶ್ನೆಮಾಡಬೇಕಾಗಿದೆ.

3-30 P.M.

ಮಾನ್ಯ ರೆವಿನ್ಯೂಮಂತ್ರಿಗಳು, ವ್ಯವಸಾಯ ಮಂತ್ರಿಗಳೂ ಇವರೆಲ್ಲರೂ ಕೂಡ ರೈತಾಪಿ ಜನ ಗಳನ್ನು ಪ್ರತಿಬಿಂಬಿಸುತ್ತಾರೆ. ಆದರೆ ರೈತಾಪಿ ಜನರ ಬಗ್ಗೆ ಅವರ ಕನಿಕರ, ಅವರ ಕೃಪಾದೃಷ್ಟಿ ಎಷ್ಟರಮಟ್ಟಿಗೆ ಹೊರಳಬೇಕೋ ಅಷ್ಟರಮಟ್ಟಿಗೆ ಹೊರಳದೆ ಇರುವುದಕ್ಕೆ ಕಾರಣವೇನು ಅನ್ನುವು ದನ್ನು ಪ್ರಶ್ನಿಸಬೇಕಾಗಿದೆ. ಈ ವ್ಯವಸಾಯದ ಕೂಲಿಗಾರರು ಏನಿದ್ದಾರೆ ಇವತ್ತು ಬಹುಶಃ ಅವರಲ್ಲಿ ಒಗ್ಗಟ್ಟಿಲ್ಲ. ಪಟ್ಟಣದ ಕಾರ್ಮಿಕರಲ್ಲಿ ಬಹಳ ಒಗ್ಗಟ್ಟಿದೆ, ಅವರು ಸಂಘಶಕ್ತಿ ಬೆಳಸಿಕೊಂಡಿದ್ದಾರೆ. ಆ ಸಂಘಶಕ್ತಿಯನ್ನು ವ್ಯವಸಾಯ ಕಾರ್ಮಿಕರು ಪಡೆದುಕೊಂಡಿಲ್ಲದಿರುವುದೇ ಇದಕ್ಕೆ ಕಾರಣ ಅನ್ನ ಬೇಕು. ಸಂಘಶಕ್ತಿ ಬೆಳಸಿಕೊಂಡಿರದೆ ಇರತಕ್ಕಂಥ ಈ ವ್ಯವಸಾಯ ಕಾರ್ಮಿಕರ ಬಗ್ಗೆಯೂ ಕೂಡ ಸರಕಾರ ಕನಿಕರ ಇಟ್ಟು ಅವರ ಸಹಾಯಕ್ಕೆ ಹೋಗಬೇಕು.

ಈ ವರ್ಷ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯಲ್ಲಿ ಕೂಡ ಮಳೆ ಇಲ್ಲದೆ ಸಾಕಾದಷ್ಟು ಜನಕ್ಕೆ ಕಳವಳ ಉಂಟಾಗಿದೆ. ಅಲ್ಲಿಯೂ ಕೂಡ ಕಂದಾಯದ ಮಾಫಿಯಾಗಬೇಕಾಗಿದೆ. ಒಂದನೆಯ ದಾಗಿ ಕಂದಾಯದ ವಿನಾಯಿತಿ ಕೊಡಬೇಕು. ಎರಡನೆಯದಾಗಿ ನಾವು ಕಳೆದ ಅಧಿವೇಶನದಲ್ಲಿ ಏನು ಅಗ್ರಿಕಲ್ಚರಲ್ ಲ್ಯಾಂಡ್ ರೆವಿನ್ಯು ಸರ್ಚಾರ್ಜ್ ಎಂದು ವಿಧಿಸಿದೆವೊ, ಅದನ್ನು ಈ ವರ್ಷದ ಮಟ್ಟಿಗೆ ತಡೆಹಿಡಿಯಬೇಕು. ಕೆಲವರು ಸರ್ಚಾರ್ಜನ್ನು ಕೊಟ್ಟುಬಿಟ್ಟಿದ್ದಾರೆ. ಅವರು ಕೊಟ್ಟಿರ ತಕ್ಕಂಥ ಸರ್ಚಾರ್ಜನ್ನು ಮುಂದಿನವರ್ಷದ ಸಾಲಿಗೆ ಅವರು ಜಮ ಕಟ್ಟಿಕೊಳ್ಳಬೇಕು. ಅಂತಿಮ ವಾಗಿ ಈ ಸರ್ಚಾರ್ಜ್ ನಿಯಮಾವಳಿಯನ್ನು ರದ್ದುಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗ ಳಲ್ಲಿ ಮನವಿ ಮಾಡಿಕೊಂಡು, ಈ ಮಾತುಗಳನ್ನು ಮುಗಿಸುತ್ತೇನೆ.

† ಟಿ. ಮಾದಯ್ಯಗೌಡ.—ಸಭಾಪತಿಗಳೆ, ನಮ್ಮ ಮುಂದಿರತಕ್ಕಂಥ ಈ ವಿಚಾರದ ಮೇಲೆ ನಾಲ್ಕಾರು ಸಂಗತಿಗಳನ್ನು ಈ ಮಾನ್ಯ ಸಭೆಗೆ ತಿಳಿಸಲು ನಾನು ಅಪೇಕ್ಷಿಸುತ್ತೇನೆ.

(ಶ್ರೀ ಟಿ. ಮಾದಯ್ಯಗೌಡ)

ಈ ಪ್ರಸ್ತಾವನೆಯನ್ನು ಸೂಚಿಸಿದವರು ಅನೇಕ ವಿಷಯಗಳನ್ನು ಹೇಳಿ, ಅಭಾವ ಪರಿಸ್ಥಿತಿಯನ್ನು ಕಡ್ಡಾಯವಾಗಿ ನಿವಾರಣೆ ಮಾಡುವುದಕ್ಕೆ ಸಾಧನೆಗಳನ್ನು ತಿಳಿಸಿದರು. ಅವರು ಕೆರೆಗಳ ದುರಸ್ತಿ, ನೀರಾವರಿ ಸೌಕರ್ಯ ಹೆಚ್ಚು ಮಾಡತಕ್ಕಂಥಾದ್ದು, ಕೆರೆಕಟ್ಟೆಗಳನ್ನು ಹೊಸದಾಗಿ ಕಟ್ಟಿಸತಕ್ಕಂಥಾದ್ದು, ಗೊಬ್ಬರಗೋಡುಗಳ ವಿಚಾರ, ಇತ್ಯಾದಿ ನಾನಾ ವಿಚಾರಗಳನ್ನು ಹೇಳಿದರು. ನಾನಾದರೂ ಈ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡದೆ, ತಾತ್ಕಾಲಿಕವಾಗಿ ಏನು ಒಂದರ ಅಭಾವ ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ ಅದನ್ನು ತಾತ್ಕಾಲಿಕವಾಗಿ ನಿವಾರಣೆ ಮಾಡುವುದಕ್ಕೆ ಸರಕಾರದವರು ಏನು ಮಾಡಬೇಕು ಅನ್ನತಕ್ಕಂಥಾದ್ದನ್ನು ಸಂಕ್ಷೇಪವಾಗಿ ಹೇಳಿ ಸರ್ವೇಸಾಧಾರಣವಾಗಿ ಇತರ ಒಂದೆರಡು ವಿಚಾರಗಳನ್ನು ಹೇಳಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಈಗ 2-3 ದಿವಸದ ಹಿಂದಿನ ಪರಿಸ್ಥಿತಿ ಬಹಳ ಕಳವಳದಾಯಕವಾಗಿತ್ತು. ಮಳೆ ಬರದೆ ಇದ್ದ ಪಕ್ಷದಲ್ಲಿ ಎಷ್ಟು ಹಾಹಾಕಾರ ದೇಶದಲ್ಲಿ ಉಂಟಾಗುತ್ತಿತ್ತು ಅಥವಾ ಮುಂದೆ ಏನಾಗುತ್ತಿತ್ತು ಎಂದು ಹೇಳತಕ್ಕಂಥಾದ್ದೇ ಬಹಳ ಕಷ್ಟ; ಪ್ರಾಣ ಬಿಡುತ್ತಾ ಇರತಕ್ಕಂಥಾವನ ಬಾಯಿಗೆ ನೀರು ಬಿಟ್ಟಹಾಗಾಯಿತು. ಈ 2-3 ದಿವಸದ ಮಳೆ ಸ್ವಲ್ಪ ಕುಟುಕು ಜೀವ ಉಳಿಸಿತು. ಆದರೂ ಕೂಡ ಇಷ್ಟರಿಂದಲೇ ಈ ಅಭಾವ ಪರಿಸ್ಥಿತಿ ಪರಿಹಾರವಾಗುತ್ತದೆ, ದೇಶದ ತೊಂದರೆ ನೀಗುತ್ತದೆ ಅಂತ ಹೇಳಿ ನಾನಾದರೂ ಭಾವಿಸುವುದಿಲ್ಲ. ಕಾರಣ ಏನೆಂದರೆ ಈಗ ಏನು ಸರ್ವೆಸಾಧಾರಣವಾಗಿ ನಮ್ಮ ಭಾಗದಲ್ಲಿ ರಾಗಿ ಫಸಲು ಇದೆಯೋ, ಆ ರಾಗಿ ಫಸಲು, ಮಳೆ 2-3 ದಿವಸದ ಹಿಂದೆ ಬೀಳುವುದಕ್ಕೆ ಮೊದಲು, ಸಂಪೂರ್ಣವಾಗಿ ಒಣಗಿ ಬಿಟ್ಟು ಹೋಗಿತ್ತು-ನಿತ್ರಾಣವಾಗಿ, ಸತ್ವಹೀನವಾಗಿ, ಮುಂದೆ ಯಾವ ಫಲವನ್ನೂ ಕೊಡುವುದಕ್ಕೆ ಅವಕಾಶವಿಲ್ಲ ಅನ್ನುವ ರೀತಿಯಲ್ಲಿ ಹೋಗಿತ್ತು. ಆದರೆ ರಾಗಿ ಬೆಳೆಯಲ್ಲಿ ಒಂದು ಗುಣ ಇದೆ. ಅದು ಎಷ್ಟು ನಿತ್ರಾಣವಾಗಿದ್ದರೂ, ಸ್ವಲ್ಪ ನೀರು ಸಿಕ್ಕಿದರೆ ಚೇತರಿಸಿಕೊಂಡು ಹಸಿರು ಆಗುವುದು. ಅಷ್ಟ ಮಾತ್ರದಿಂದಲೇ ಈ ಸಲ ರಾಗಿ ಫಸಲು ಆಗುತ್ತದೆ, ಯಥೇಚ್ಛವಾಗಿ ರಾಗಿಯನ್ನು ನೋಡತಕ್ಕಂಥ ಒಂದು ಸ್ಥಿತಿ ಬರುತ್ತದೆ ಎಂಬ ಭಾವನೆ ನನಗಿಲ್ಲ. ಕೆಲವು ವರ್ಷಗಳ ಹಿಂದೆ ರಾಗಿ ಪೈರು ಇದೇ ಒಂದು ಕಷ್ಟಕ್ಕೆ ಸಿಕ್ಕಿದಾಗ ನನಗೆ ಒಂದು ಅನುಭವ ಜ್ಞಾಪಕಕ್ಕೆ ಬರುತ್ತದೆ. ತೆನೆ ಬರತಕ್ಕಂಥ ಕಾಲದಲ್ಲ ಮಳೆ ಬಾರದಿದ್ದರೆ, ಸರಿಯಾಗಿ ತೆನೆ ಒಡಿಯುವುದಿಲ್ಲ, ತೆನೆ ಸಣ್ಣದಾಗಿ ಹೊರಡುತ್ತದೆ, ಹಾಗೆ ಹೊರಟಂಥ ತೆನೆಯು ಕಾಳ ಕಟ್ಟುವುದಿಲ್ಲ. ಈ ಸ್ಥಿತಿಯಿಂದ ನಮಗೆ 8 ಆಣೆ ಪೈರು ಬರುತ್ತದೆ ಎಂದು ಅಂದುಕೊಂಡರೆ, ಕಡೆಗೆ 2 ಆಣೆ, 4 ಆಣೆ ಬೆಳೆ ಆಗುವುದಿಲ್ಲ. ರಾಗಿ ಫಸಲು ಅನುಭವವಿರತಕ್ಕಂಥ ಸಮಸ್ತರಿಗೂ ಈ ವಿಚಾರ ಗೊತ್ತಿದೆ. ಈ ಕಾರಣದಿಂದ ನಮ್ಮ ಪ್ರಾಂತ್ಯದಲ್ಲಿ ರಾಗಿ ಬೆಳೆ ಈ ಸಲ ಕೆಟ್ಟುಹೋಯಿತು ಅಂತ ಹೇಳಿದರೂ ಸಹ ಅದು ಏನೂ ತಪ್ಪಾಗಲಾರದು ಎಂದು ನಾನು ಭಾವನೆ ಮಾಡುತ್ತೇನೆ.

ಕೆರೆಗಳಿಗೆ ಇನ್ನೂ ನೀರು ಬಂದಿಲ್ಲ. ಈಗ 2-3 ದಿವಸದಿಂದ ಬಂದ ಮಳೆ ನೀರೆಲ್ಲಾ ಭೂಮಿ ಮೇಲೆ ಇಂಗಿಹೋಗಿಬಿಟ್ಟು, ಕೆರೆಕಟ್ಟೆಯೊಳಗೆ ನೀರು ಬರತಕ್ಕಂಥ ಪ್ರಶ್ನೆ ಉದ್ಭವವಾಗಿಲ್ಲ. ಇಷ್ಟರ ಮಟ್ಟಿಗೇ ಇನ್ನೂ 4-5 ಬಾರಿ ದೊಡ್ಡ ಮಳೆ ಬಂದರೆ ಅವಾಗ ಕೆರೆಕಟ್ಟೆಗಳಿಗೆ ನೀರು ಬರಬಹುದು. ಈಗ ಕೆರೆಕಟ್ಟೆಗೆ ನೀರು ಬಂದರೂ ತರೀಫಸಲಿಗೆ ಕಾಲ ಮೀರಿಹೋಯಿತು. ಅನೇಕ ಕಡೆ ಏನು ಒಂದು ಮೊಳಕೆ ಹೊರಟಿತ್ತೋ ಅದು ಮಳೆ ಇಲ್ಲದೆ ಒಣಗಿ ಹೋಯಿತು. ಈಗ ಪುನಃ ಅದು ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ತರೀಬೆಳೆ, ಖುಷ್ಕಿ ಬೆಳೆ ನಮ್ಮ ಪ್ರಾಂತ್ಯದಲ್ಲಿ, ರಾಮನಗರದ ಸುತ್ತಮುತ್ತಲ ಪ್ರಾಂತ್ಯದಲ್ಲಿ ಬಹಳ ಹೀನಸ್ಥಿತಿಗೆ ಬಂದಿದೆ.

ಮತ್ತೊಂದು ವಿಚಾರವನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಮಳೆಯ ಅಭಾವದಿಂದ ಅನೇಕ ಗ್ರಾಮಗಳಲ್ಲಿ ಜನಗಳಿಗೆ ಮಾತ್ರವಲ್ಲ, ದನಗಳಿಗೆ ಕೂಡ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ತೊಂದರೆ ಆಯಿತು. ಕುಡಿಯುವುದಕ್ಕೆ ನೀರಿಲ್ಲದುದರ ಜೊತೆಗೆ ರಾಮನಗರ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ ಹುಲ್ಲಿನ ಅಭಾವವುಂಟಾಗಿ ಜನಗಳು, ಸುತ್ತಮುತ್ತಲೂ ಇದ್ದಂಥ ಮರಗಳ ಸೊಪ್ಪನ್ನು ತರೆದು ದನಗಳಿಗೆ ಹಾಕಿದರು. ಅದೂ ಅಲ್ಲದೆ ಕಾಡುಗಳಿಗೆ ಹೋಗಿ ಸೊಪ್ಪು ಸದೆ ತಂದು ದನಗಳಿಗೆ ಹಾಕಿ ಮೇಯಿಸಿದರು.

ಆ ಸೊಪ್ಪುಗಳನ್ನು ತಿಂದ ದನ ಅನೇಕ ಕಾರಣಗಳಿಂದ ಬದುಕಿಲ್ಲ. ನೂರಾರು ದನಗಳು ರಾಮನಗರ ತಾಲ್ಲೂಕಿನಲ್ಲಿ ಸತ್ತುಹೋದವು ಎಂದು ನನ್ನ ಗಮನಕ್ಕೆ ಬಂದಿದೆ. ರೆವೆನ್ಯೂ ಇಲಾಖೆಯವರಿಗೆ ಸರಿಯಾದ ವರದಿಗಳು ಬಂದಿವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ವಿಚಾರ ಮಾಡಿದ್ದರಲ್ಲಿ ತಾಲ್ಲೂಕು ತಹಸೀಲ್ದಾರರು ನಮಗೆ ಯಾರೂ ರಿಪೋರ್ಟ ಮಾಡಿಲ್ಲವೆಂದು ಹೇಳಿದರು, ರೆವೆನ್ಯೂ ಇನ್‌ಸ್ಪೆಕ್ಟರುಗಳು ನಮಗೆ ಪಟೇಲರಿಂದ ರಿಪೋರ್ಟ್ ಬರಬೇಕಾಗಿತ್ತು ಬರಲಿಲ್ಲ ಎಂದು ಹೇಳಿದರು, ಪಟೇಲರನ್ನು ಕೇಳಿದರೆ ಮೇವು ಇಲ್ಲದೆ ಸತ್ತು ಹೋದದಕ್ಕೆಲ್ಲ ನಾವು ರಿಪೋರ್ಟ ಮಾಡ

ಬೇಕಾದ್ದಿಲ್ಲ, ಬಾಯಿಲೆ ಕಸಾಲೆ ಬಂದಿದ್ದರೆ ಮಾತ್ರ ರಿಫೋರ್ಟ್ ಮಾಡುತ್ತೇವೆ ಎಂದು ಹೇಳಿದರು. ಒಟ್ಟಿನಲ್ಲಿ ನೂರಾರು ರಾಸುಗಳು ಒಂದು ತಾಲ್ಲೂಕಿನಲ್ಲಿ ಮೇವು ಇಲ್ಲದೆ ಸತ್ತುಹೋದುವು ಎಂದರೆ ವಿಷಾದಕರವಾದ ಸಂಗತಿ. ಮುಂಚೆಯೇ ವಿಚಾರ ಗೊತ್ತಾಗಿದ್ದರೆ ರೆವಿನ್ಯೂ ಇಲಾಖೆಯವರು ಬೇರೆ ಕಡೆಯಿಂದ ಹುಲ್ಲನ್ನು ತರಿಸಿಕೊಟ್ಟು ಉಪಕಾರ ಮಾಡುತ್ತಿದ್ದರು ಎಂದು ನನಗನ್ನಿಸುತ್ತದೆ. ಆದರೆ ತಾಲ್ಲೂಕಿನ ಕೆಳದರ್ಜೆಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಅನೇಕ ದನಗಳು ಸಾಯುವುದಕ್ಕೆ ಅವಕಾಶವಾಯಿತು ಎಂದು ನಾನಾದರೂ ವಿಷಾದದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿ ಬರುತ್ತದೆ.

[MR. SPEAKER in the Chair.]

ಈಗಾಗಲೇ ರಾಗಿ ಫಸಲು, ಬತ್ತದ ಫಸಲು ಇವೆಲ್ಲ ಹೋಗಿಬಿಡುತ್ತಿವೆ. ಎನ್ನತಕ್ಕ ಮನಸ್ಸಿನ ವ್ಯಾಕುಲತೆಯಿಂದ ಜನಗಳಿಗೆ ಕೂಲಿ ಕೆಲಸಗಳೂ ದೊರೆಯದೆ ಬಹಳ ತೊಂದರೆ ಪಡುತ್ತಿದ್ದಾರೆ. ಇದನ್ನು ಕಣ್ಣಾರೆ ನೋಡಬಹುದು. ಈ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಸಚಿವರನ್ನು ನಾನು ದೈನ್ಯದಿಂದ ಕೇಳಿಕೊಳ್ಳುವುದು ಪರಿಹಾರ ಕಾರ್ಯಗಳನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು, ಬಡ ಜನಗಳಿಗೆ ಆಹಾರ ದೊರೆಯದೆ ಇರುವ ಸಂದರ್ಭದಲ್ಲಿ ಅವರಿಗೆ ಪ್ರಾಣದಾನವನ್ನು ಸರ್ಕಾರದವರು ಮಾಡಿಕೊಡಬೇಕೆಂದು ನಾನಾದರೂ ಬಹಳ ಕಳಕಳಿಯಿಂದ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ದೀರ್ಘಕಾಲದ ಅಭಾವ ಪರಿಸ್ಥಿತಿಯ ವಿಚಾರದಲ್ಲಿ ಶ್ರೀ ಹುಚ್ಚಮಾಸ್ತಿಗೌಡರು ಒಂದು ಮಾತನ್ನು ಹೇಳಿದರು ಕೆರೆಗಳ ವಿಚಾರದಲ್ಲಿ. ಆ ಬಗ್ಗೆ ಒಂದೆರಡು ಮಾತುಗಳನ್ನು ನಾನೂ ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಕೆರೆಗಳ ಈಗಿನ ಹೀನಸ್ಥಿತಿಗೆ ಅನೇಕ ಕಾರಣಗಳಿವೆ ವರ್ಷ ವರ್ಷಕ್ಕೆ ಏನು ರಿಪೇರಿ ಆಗಬೇಕಾಗಿತ್ತೋ, ಮೈನ್‌ಟೆನೆನ್ಸ್ ವರ್ಕ್ ನಡೆಯಬೇಕಾಗಿತ್ತೋ ಅದು ನಡೆಯುತ್ತ ಇಲ್ಲ. ನಾವು ಹೊಸ ಹೊಸ ಕೆರೆಗಳನ್ನು ಕಟ್ಟುವುದಕ್ಕೆ, ಪಿಕಪ್ಪುಗಳನ್ನು ಕಟ್ಟುವುದಕ್ಕೆ ಹೊರಟಿದ್ದೇವೆ. ಆದರೆ ಇರುವ ಕೆರೆಗಳೆಲ್ಲ ಪ್ರತಿವರ್ಷವೂ ಹೂಳಿನಿಂದ ತುಂಬುತ್ತವೆ. ಇದೂ ಸಹ ಈಚೀಚೆಗೆ ಜಾಸ್ತಿಯಾಗುವುದಕ್ಕೆ ಕಾರಣಗಳಿವೆ. ಹಿಂದೆ ಕೆರೆಗಳ ಅಂಗಳದಲ್ಲಿ, ಪಕ್ಕದಲ್ಲಿ ಉಳದೆ ಇರತಕ್ಕ ಜಮೀನುಗಳಿದ್ದುವು, ಮರಗಳು ಇರುತ್ತಿದ್ದುವು. ಮಳೆ ಬಂದಾಗ ಕೊಚ್ಚಿಕೊಂಡು ಬಂದಂಥ ಎಕ್ಕಲು ಮಣ್ಣನ್ನು ತಡೆಯುವುದಕ್ಕೆ ಮರಗಳೂ ಉಳದೆ ಇರತಕ್ಕ ಜಮೀನುಗಳೂ ಇದ್ದುವು. ನೀರು ಬರತಕ್ಕ ಹಳ್ಳಗಳಲ್ಲಿ ಎಕ್ಕಲನ್ನು ತಡೆಯಲು ಕಟ್ಟೆಗಳನ್ನು ಕಟ್ಟಿ ಆ ಎಕ್ಕಲು ಬಂದು ಕೆರೆಗೆ ತುಂಬದ ಹಾಗೆ ವ್ಯವಸ್ಥೆ ಮಾಡಿದರು. ಈಗ ಅದಕ್ಕೆ ಏನೂ ಗಮನವನ್ನು ಕೊಟ್ಟಿಲ್ಲ ಎಂದು ನಾನು ಹೇಳಬೇಕಾಗಿದೆ. ಪ್ರತಿಯೊಂದು ಕೆರೆಗೂ ಎಷ್ಟು ಅಚ್ಚುಕಟ್ಟು ಇರಬೇಕೋ ಅಷ್ಟಿಲ್ಲದೆ ಹೊಸ ಹೊಸ ಅಚ್ಚುಕಟ್ಟುಗಳನ್ನು ಮಾಡಿದಾಗ್ಯೂ ಅದನ್ನು ಸರ್ಕಾರದವರು ಗಮನಿಸಲಿಲ್ಲವೆನ್ನುವುದು ವಾಸ್ತವ್ಯ.

Mr. SPEAKER.—Generally saying with regard to the entire deficiency all over the State will not do; the Hon'ble Member should kindly give a specific instance: in a particular area a particular tank requires immediate attention. I am only throwing out a suggestion; I leave it to the Hon'ble Member to say whatever he likes.

ಶ್ರೀ ಟಿ. ಮಾದಯ್ಯಗೌಡ.—ನಮ್ಮ ಸಬ್‌ಡಿವಿಜನ್ನಿನಲ್ಲ ಹೆಚ್ಚಿನ ಕೆರೆಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿವೆ. ಇಲ್ಲಿ ಕೆಲವು ಕೆರೆಗಳ ಕೆಳಗೆ 30 ವರ್ಷಗಳ ಹಿಂದೆ ಅಚ್ಚುಕಟ್ಟು ಎಷ್ಟಿತ್ತೊ ಅಷ್ಟೇ ಇದೆ. ಜಾಸ್ತಿ ಮಾಡಿಲ್ಲವೆಂದು ರೆವಿನ್ಯೂ ಇಲಾಖೆ ಹೇಳುತ್ತದೆಂದು ನಾನು ಕೇಳಿದ್ದೇನೆ. ಸಾಧಾರಣವಾಗಿ ಪ್ರತಿಯೊಬ್ಬರೂ ಕೂಡ ತಮ್ಮ ಜಮೀನು ಪಕ್ಕದಲ್ಲಿ ಅಷ್ಟು ಜಮೀನಿದ್ದರೆ ಅದನ್ನು ಸೇರಿಸಿಕೊಳ್ಳುವುದರಿಂದ ಕೆರೆಗಳ ಅಚ್ಚುಕಟ್ಟು ಜಾಸ್ತಿಯಾಗಿದೆ. ಇಂಥ ಕೆರೆ ಕೆಳಗೆ ಈ ರೀತಿಯಾಗಿವೆ ಎಂದು ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲ. ಎಲ್ಲ ಕೆರೆಗಳ ಕೆಳಗೂ ಈ ರೀತಿ ನಡೆದಿದೆ ಎಂದು ನಾನಾದರೂ ಭಾವಿಸುತ್ತೇನೆ. ಅದಕ್ಕೋಸ್ಕರ ಇಷ್ಟು ಮಾತ್ರ ಕೆರೆಗಳ ವಿಚಾರದಲ್ಲಿ ಹೇಳುತ್ತಿದ್ದೇನೆ.

ಕೆಲವು ಕಡೆ ಪಿಕಪ್ಪುಗಳನ್ನು ಮಾಡಿ ನೀರಾವರಿಯನ್ನು ಜಾಸ್ತಿ ಮಾಡಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ತನ್ಮೂಲಕ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತ ಇರತಕ್ಕದ್ದು ನಿಜ. ಅದಕ್ಕೋಸ್ಕರ ಸರ್ಕಾರವನ್ನು ನಾವು ಅಭಿನಂದಿಸಬೇಕು. ಆದರೆ ಅನೇಕ ಕಡೆ ಆಗುತ್ತಿರುವ ಪಿಕಪ್ಪುಗಳ ಕೆಲಸ ಸಮಾಧಾನಕರವಾಗಿಲ್ಲ. ಉದಾಹರಣೆಗೆ ರಾಮನಗರ ತಾಲ್ಲೂಕಿನಲ್ಲಿ ನಾಲ್ಕು ಪಿಕಪ್ಪುಗಳನ್ನು ಮಾಡಿದರೂ. ರೈತರ ಉಪಯೋಗಕ್ಕೋಸ್ಕರ ಇವನ್ನು ಮಾಡಿದರೂ ಅದರಿಂದ ರೈತರಿಗೆ ಕೆಲವು ಭಾಗವಾದರೂ ತರಿ ನೀರಾವರಿಗೆ ನೀರು ಸಿಕ್ಕಿತು ಎನ್ನುವಂತಿಲ್ಲ. ಯಾರೋ ಒಬ್ಬ ಕಂಟ್ರಾಕ್ಟರ ಸಲುವಾಗಿ ಈ ನಾಲ್ಕು ಪಿಕಪ್ಪುಗಳನ್ನೂ ಮಾಡಿ 50,000 ರೂಪಾಯಿ ಸರ್ಕಾರದ

(ಶ್ರೀ ಟಿ. ಮಾದಯ್ಯಗೌಡ)

ಹಣವನ್ನು ಹಾಳು ಮಾಡಿದರು. ಇದು ವ್ಯಸನಕರವಾದುದು, ಹೀಗಾಗಬಾರದು. ಪಿಕಪ್ಪುಗಳನ್ನು ಮಾಡಿಸಿದರೆ ಕೆರೆಕುಂಟೆಗಳಿರತಕ್ಕ ಹಳ್ಳಿಗಳ ಜನರಿಗೆ ಪ್ರಯೋಜನವಾಗಬೇಕು. ಆ ರೀತಿ ಆಗುವ ಹಾಗೆ ಇಲಾಖೆಯವರು ನೋಡಿಕೊಳ್ಳಬೇಕು. ಹಾಗೆ ಕೆಳದರ್ಜೆ ಅಧಿಕಾರಿಗಳು ಅನಾವಶ್ಯಕವಾಗಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿದರೆ ಅವರನ್ನು ಶಿಕ್ಷಿಸಬೇಕು ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳು ಇಚ್ಛಿಸುತ್ತೇನೆ.

ಹೆಚ್ಚು ಬೆಳೆ ಬೆಳೆಯುವುದಕ್ಕೆ, ಹೆಚ್ಚು ಆಹಾರ ಉತ್ಪತ್ತಿಯಾಗುವುದಕ್ಕೆ ಬಹಳ ಅವಶ್ಯಕವಾದುದು ಗೊಬ್ಬರ, ಬಿತ್ತನೆ, ಸಲಕರಣೆ ಇತ್ಯಾದಿಗಳು. ಗೊಬ್ಬರದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುವುದಕ್ಕೆ ಇಚ್ಛಿಸುತ್ತೇನೆ. ಕೃತಕ ಗೊಬ್ಬರ ಒಳ್ಳೆಯದು ಸರಿ. ಯಾವ ಜಮೀನು ದುರ್ಬಲವಾಗಿರುತ್ತದೆಯೋ ಅದಕ್ಕೆ ಸ್ವಲ್ಪ ಚೈತನ್ಯವನ್ನು ಕೊಡುವುದಕ್ಕೆ ಕೃತಕ ಗೊಬ್ಬರ ಬೇಕು. ಯಾವ ಮನುಷ್ಯ ದುರ್ಬಲನಾಗಿರುತ್ತಾನೆಯೋ ಅವನಿಗೆ ಟಾನಿಕ್ ಕೊಟ್ಟು ಅವನು ಚೇತರಿಸಿಕೊಳ್ಳುವಂತೆ ಮಾಡುವ ಹಾಗೆ ದುರ್ಬಲವಾಗಿರುವ ಭೂಮಿಗೆ ಕೃತಕ ಗೊಬ್ಬರವನ್ನು ಉಪಯೋಗಿಸುವುದು ಬಹಳ ಮುಖ್ಯವಾದ ಕೆಲಸ. ಆದರೆ ಎಲ್ಲ ಕಾಲಕ್ಕೂ ಕೂಡ ಟಾನಿಕ್ ಕೊಡುತ್ತೇವೆ, ಕೃತಕ ಗೊಬ್ಬರಗಳನ್ನು ಕೊಟ್ಟು ಬೆಳೆ ಬೆಳೆಯುತ್ತೇವೆ, ಅದರಿಂದ ನಮ್ಮ ಆಹಾರದ ಉತ್ಪತ್ತಿ ಜಾಸ್ತಿಯಾಗುತ್ತದೆ ಎಂದು ಭಾವನೆ ಮಾಡುವುದಾದರೆ ಅದು ಶುದ್ಧಾಂಗವಾಗಿ ತಪ್ಪು ಎಂದು ನನ್ನ ಭಾವನೆ. ನಮಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವುದು ಕೊಟ್ಟಿಗೆ ಗೊಬ್ಬರ, ಹಸುರು ಗೊಬ್ಬರ, ಕೊಟ್ಟಿಗೆ ಗೊಬ್ಬರ ಈಗ ಹೆಚ್ಚಾಗಿ ಸಿಕ್ಕುತ್ತಿಲ್ಲ ಏಕೆಂದರೆ ದನಗಳು ಕಡಮೆಯಾಗುತ್ತ ಬರುತ್ತಿವೆ. ದನಗಳು ಕಡಮೆಯಾಗುವುದಕ್ಕೆ ಕಾರಣ ಗೋಮಾಳಗಳು ಹೋಗುತ್ತಿವೆ. ಎಷ್ಟು ಗೋಮಾಳವಿರಬೇಕೋ ಅಷ್ಟಿವೆ ಎಂದು ನಾನಾದರೂ ಭಾವನೆ ಮಾಡುವುದಿಲ್ಲ. ಎಷ್ಟೋ ಗೋಮಾಳಗಳನ್ನು ಜನಗಳು ನಿರ್ಭಯವಾಗಿ ಉತ್ತುಕೊಂಡು ಕಂದಾಯವನ್ನು ಕೂಡ ಕೊಡದೆ ಅಥವಾ ಅದನ್ನು regularise ಮಾಡಿಸಿಕೊಳ್ಳದೆ ಆಕ್ರಮಿಸಿಕೊಂಡಿದ್ದಾರೆ. ಆ ಕಡೆ ದನಗಳಿಗೂ ಫಾಯಿದೆ ಇಲ್ಲ, ಈ ಕಡೆ ಸರ್ಕಾರಕ್ಕೂ ಫಾಯಿದೆ ಇಲ್ಲ. ಆದುದರಿಂದ ದನಗಳ ಸಂಖ್ಯೆ ಕಡಮೆಯಾಗಿದೆ. ಅವು ಎಷ್ಟು ಗೊಬ್ಬರವನ್ನು ಕೊಡಬೇಕೋ ಅಷ್ಟನ್ನು ಕೊಡುವುದಕ್ಕೆ ಅವಕಾಶವಿಲ್ಲ. ಉತ್ತಮವಾದ ದನಗಳನ್ನು ಸಾಕಬೇಕು, ಹೆಚ್ಚಿಗೆ ದನಗಳನ್ನು ಸಾಕುವುದಕ್ಕಿಂತಲೂ ಕಡಮೆಯಾದರೂ ಒಳ್ಳೆಯ ದನಗಳನ್ನು ಸಾಕಬೇಕು ಎಂದು ಅನೇಕ ವೇಳೆ ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಆದರೆ ನನಗಾದರೂ ಅನ್ನಿಸುತ್ತದೆ ದನಗಳ ಪ್ರಗತಿಯಾಗುವುದಕ್ಕೆ ಸ್ವಲ್ಪವಾದರೂ ಜಾಗವಿಲ್ಲದೆ ಇದ್ದರೆ, ಯಾರಿಗೆ ಹುಲ್ಲನ್ನು ಬೆಳೆಯುವುದಕ್ಕೆ ಅವಕಾಶವಿಲ್ಲವೋ ಅಂಥವರ ದನಗಳು ಹೋಗಿ ತಿರುಗಾಡಿಕೊಂಡು ಬರುವುದಕ್ಕೆ ಜಾಗವಿಲ್ಲದೆ ಹೋದರೆ ಬಹಳ ತೊಂದರೆಯಾಗುತ್ತದೆ. ಗೋಮಾಳವಿಲ್ಲದೆ ಹೋದರೆ ದೇಶಕ್ಕೆ ಹಾನಿಯಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ.

ಇಂದು ಹಳ್ಳಿಗಳಲ್ಲಿ ಗೋಮಾಳಗಳು ಇಲ್ಲ. ಇದ್ದರೂ ಕೂಡ ವಿಪರೀತ ಕಡಿಮೆಯಾಗುತ್ತಿವೆ. ವ್ಯವಸಾಯಕ್ಕೆ ಮುಖ್ಯವಾಗಿ ಹಸಿರು ಎಲೆ ಗೊಬ್ಬರಬೇಕು. ಅದಕ್ಕೋಸ್ಕರ ಕಂಪೋಸ್ಟ್ ಗೊಬ್ಬರ ತಯಾರು ಮಾಡುವುದು ಒಳ್ಳೆಯದು. ಗಿಡಗಳನ್ನು ಬೆಳೆಸಬೇಕು ಅಭಿವೃದ್ಧಿಪಡಿಸಬೇಕು ಎಂದು ಹೇಳುವುದು ಸರಿ. ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯ ಜನರಿಗೋಸ್ಕರ ಸೌದೆ ಮರಗಳನ್ನು ಬೆಳೆಸಲು ಹೊರಟಿದ್ದಾರೆ. ಹಿಂದಕ್ಕೆ ಹಳ್ಳಿಗಳಲ್ಲಿ ಹತ್ತಾರು ಬಂಡಿ ಹಸಿರು ಎಲೆಗೊಬ್ಬರ ತರಲು ಸಾಧ್ಯವಿತ್ತು. ಆದರೆ ಈಗ ಹಸಿರು ಸೊಪ್ಪು ದೊರೆಯುವುದು ಬಹಳ ಕಷ್ಟವಾಗಿದೆ. ಸೌದೆಗಾಗಿ ಕಾಡನ್ನು ಕಡಿಯುತ್ತಿದ್ದಾರೆ. ಕಾಡನ್ನು ಸರಿಯಾಗಿ ನೋಡಿಕೊಳ್ಳುತ್ತಿರುವುದಿಲ್ಲ. ದೇಶಕ್ಕೆ ಒಳ್ಳೆಯದಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒಂದು ಸಲಹೆ ತಿಳಿಸಲು ಅಪೇಕ್ಷಿಸುತ್ತೇನೆ.

ಮಳೆ ಇಲ್ಲದೆ ಅಭಾವಕಾಲ ಬಂದಾಗ್ಗೆ ಯಾವ ಯಾವ ಊರಿನಲ್ಲಿ ಯಾವ ಯಾವ ಬೆಳೆ ಬರುತ್ತದೆ, ಎಂಥಭೂಮಿ ಇದೆ ಎಂಬುದನ್ನು ಕಂಡುಹಿಡಿಯುವುದಕ್ಕೆ soil survey ಕೆಲಸ ಮಾಡುವುದು ಬಹಳ ಅಗತ್ಯವಾಗಿದೆ. ತಜ್ಞರಾದ ಮನುಷ್ಯರನ್ನು ನೇಮಕಮಾಡಿ, ಭೂಮಿಯಲ್ಲಿ ಏನುಸಾರ ಇದೆ, ಯಾವಬೆಳೆ ಬೆಳೆದರೆ ಪ್ರಯೋಜನವಾಗುತ್ತದೆ, ಯಾವರೀತಿ ಬೆಳೆದರೆ ಹೆಚ್ಚು ಪ್ರಯೋಜನಕಾರಿಯಾಗುತ್ತದೆ ಎಂಬುದಕ್ಕೆ ರೈತನಿಗೆ ತಿಳುವಳಿಕೆ ಕೊಡಬೇಕಾದುದು ಅಗತ್ಯವಾಗಿದೆ ಎಂದು ತಿಳಿಸಲು ಬಯಸುತ್ತೇನೆ. ನೀರಾವರಿ ಕಾಮಗಾರಿ ಬಗ್ಗೆ ಒಂದು ಸರ್ವೆ ಪಾರ್ಟಿ ಕಳಿಸಿ ಎಲ್ಲಿ ಸಣ್ಣಪುಟ್ಟ ಕೆರೆ ಮಾಡಬಹುದು ಎಂಬುದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಬೇಕು. ಯಾವ ನದಿಗೆ ಎಲ್ಲಿ ಕಟ್ಟೆ ಕಟ್ಟಬೇಕು ಎಂಬುದಕ್ಕೆ ಒಂದು ಮಾಸ್ಟರ್ ಪ್ಲ್ಯಾನ್ ಮಾಡಲು ಒಂದು ಸರ್ವೇಪಾರ್ಟಿ ಇರಬೇಕು. ಈಗ ಇರತಕ್ಕಂಥ ಸಿಬ್ಬಂದಿ ಸಾಕಾಗದು. ಒಬ್ಬ ಅಸಿಸ್ಟೆಂಟ ಎಂಜಿನಿಯರ್ ಐದಾರು ಜನ ಸರ್ವೇಯರುಗಳು ಇರುತ್ತಾರೆ ಅವರು ಎಷ್ಟು ದಿವಸ ಕೆಲಸಮಾಡಿದರೂ ಇಂಥ ಒಂದು ಪ್ಲ್ಯಾನ್

ಮಾಡಲು ಆಗುವುದಿಲ್ಲ. ಆದುದರಿಂದ ಈ ಸರ್ವೇಪಾರ್ಟಿ ಜಾಸ್ತಿಮಾಡಿ ಅವರಿಗೆ ಬೇಕಾಗುವ ಸಲಕರಣೆ ಒದಗಿಸಿಕೊಡಬೇಕು. ಅವರಿಗೆ ಒಂದು ಜೀಪ್ಪ ಕೂಡ ಕೊಟ್ಟಿಲ್ಲ. ಜೀಪು ಇಲ್ಲದ್ದರಿಂದ ಎರಡು ಮೂರು ಕಡೆ ಹೋಗಲು ತೊಂದರೆಯಾಗುತ್ತದೆ. ಅವರಿಗೆ ಒಂದು ಜೀಪುಕೊಟ್ಟು ಅನುಕೂಲಮಾಡಿಕೊಡಬೇಕಾದುದು ಅಗತ್ಯ. ತಾತ್ಕಾಲಿಕ ಕಷ್ಟನಿವಾರಣೆಗೆ ಮಳೆಯಾಗಿದೆ ಎಂದು ಭಾವಿಸಬಾರದು. ಮಳೆಯಾಗದೆ ಇದ್ದರೂ ಕೂಡ ರೈತನಿಗೆ ಏನುತೊಂದರೆ ಇದೆ ಅವನ್ನು ಕಾಯಂ ಆಗಿ ಹೇಗೆನಿವಾರಣೆ ಮಾಡಬೇಕು ಎಂಬ ದನ್ನು ಯೋಚನೆ ಮಾಡಬೇಕಾದುದು ಅಗತ್ಯ. ಬಡವನಿಗೆ ಸರಿಯಾದ ಪ್ರತಿಫಲ ದೊರೆಯುವ ಹಾಗೆ ಏನು ಪರಿಹಾರಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಿ ರೈತನಿಗೆ ಪರಿಹಾರಕೊಟ್ಟು ಅವನ ಕಷ್ಟ ಹೋಗಲಾಡಿಸುತ್ತಾರೆಂದು ನಂಬಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಶಿ (ಗುಲಬರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈಗ ಸಭೆಯಮುಂದೆ ಚರ್ಚೆಗೆ ಬಂದಿರುವ ಈ ನಿರ್ಣಯದ ಬಗ್ಗೆ ಮಾತನಾಡುತ್ತಾ ನಮ್ಮ ಹೈದರಾಬಾದ ಕರ್ನಾಟಕದ ಜಿಲ್ಲೆಗಳ ಬಗ್ಗೆ ಎರಡು ಮಾತು ಹೇಳಲು ಬಯಸುತ್ತೇನೆ. ಗುಲಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಯಾವದೊಡ್ಡ ಅಣೆಕಟ್ಟು ಇಲ್ಲ, ಕೆರೆಗಳನ್ನು ಎಷ್ಟು ಕಟ್ಟಬೇಕೋ ಅಷ್ಟು ಕಟ್ಟಿಸಿಲ್ಲ. ಹೈದರಾಬಾದ ಸಂಸ್ಥಾನದಲ್ಲಿದ್ದಾಗ್ಗೆ ನಮ್ಮ ಜಿಲ್ಲೆಗಳಿಗೆ ಅನ್ಯಾಯವಾಯಿತು. ಮೈಸೂರು ರಾಜ್ಯಕ್ಕೆ ಬಂದಮೇಲೆ ನಮ್ಮ ಕಷ್ಟ ಪರಿಹಾರವಾಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಬೀದರ್ ಜಿಲ್ಲೆಯಲ್ಲಿ ಯಾವ ದೊಡ್ಡಯೋಜನೆ ಮಾಡಿಲ್ಲ. ಈ ವರ್ಷ ಮಳೆಯಾಗದೇ ಇರುವುದರಿಂದ ಬಿತ್ತನೆ ಕೆಲಸ ಸರಿಯಾಗಿ ಆಗಿಲ್ಲ. ನಮ್ಮ ಜಿಲ್ಲೆ ಮಳೆಯ ಮೇಲೆಯೇ ಆಧಾರಿಸಿಕೊಂಡಿರುತ್ತದೆ. ವ್ಯವಸಾಯ ಇಲಾಖೆಯು ಯಾವರೀತಿ ನೋಡಿಕೊಳ್ಳಬೇಕೋ ಆ ರೀತಿ ನೋಡಿಕೊಳ್ಳುವುದಿಲ್ಲ. ಮಳೆ ಇಲ್ಲ ಎಂದಕೂಡಲೇ ಬರಗಾಲ ಪ್ರದೇಶವಾಗುತ್ತದೆ. ಫ್ಯಾಮಿನ್ ರಿಲೀಫ್ ವರ್ಕ್ಸ್ ಪ್ರಾರಂಭಿಸುತ್ತೀರಿ. ಮಣ್ಣಿನರಸ್ತೆ ಕೆಲಸ ಮಾಡಲಾಗುವುದು. ಈ ವರ್ಷ ಮಣ್ಣು ಹಾಕಿಸಿದ ಕೆಲಸ ಮುಂದಿನವರ್ಷ ಮಳೆಯಾಗಲು ಎಲ್ಲಾಮಣ್ಣು ಹರಿದು ಹೋಗುತ್ತದೆ. ಈ ಮಣ್ಣಿನ ಕೆಲಸದಿಂದ ಏನೂ ಪ್ರಯೋಜನ ವಾಗುವುದಿಲ್ಲ. ಇಂಥ ಕೆಲಸಗಳಿಗೆ ದುಡ್ಡುಕೊಡುತ್ತೀರಿ. ಇಲ್ಲ ಎನ್ನುವುದಿಲ್ಲ. ಆದರೆ ಕೊಡುವ ದುಡ್ಡನ್ನು ಯಾರೂ ಇನ್‌ಫ್ಲುಯೆನ್ಸ್ ಇರತಕ್ಕ ದೊಡ್ಡ ದೊಡ್ಡ ಜನ ಎಮ್ಮೆಲ್ಲೇಗಳನ್ನು ಹಿಡಕೊಂಡು ಮಿನಿಸ್ಟರ ಹತ್ತಿರಹೋಗಿ ಡಿ. ಸಿ. ಹತ್ತಿರಹೋಗಿ ದುಡ್ಡನ್ನು ತೆಗೆದುಕೊಂಡು ಹೋಗುತ್ತಾರೆ. ಬಾವಿಕೆಲಸಕ್ಕೆ ಸಹ ಅಂಥವರಿಗೇ ದುಡ್ಡು ಸಿಕ್ಕುತ್ತದೆ. ಅಂಥವರ ಹತ್ತಿರ ಬೇಕಾದಷ್ಟು ದುಡ್ಡು ಇದೆ. ಈ ದುಡ್ಡು ತಂದು ಬಡ್ಡೀ ವ್ಯವಹಾರ ಮಾಡುತ್ತಾರೆ. ಭಾವಿ ವಂಡ ಹಾಕಲುಸಹ ಇಂಥವರಿಗೇ ದುಡ್ಡು ಸಿಕ್ಕುತ್ತದೆ. ಬಂಡ್ ಹಾಕಿಸುವುದಕ್ಕೆ ಮೊದಲು ಸರ್ವೆ ಮಾಡುವ ಕೆಲಸ ಸರಕಾರ ತೆಗೆದುಕೊಳ್ಳಬೇಕು. ಹೊಲಗಳಿಗೆ ಬಂಡ್ ಹಾಕಿಸಿ ನೀರು ನಿಲ್ಲುವಂತೆ ಮಾಡಿ ಅನ್ನ ಹೆಚ್ಚು ಬೆಳಸಬೇಕು. ಒಂದು ಪ್ಲಾನ್‌ಮಾಡಿ ನಾಲ್ಕೈದು ಹಳ್ಳಿಗಳಿಗೆ ಬಾವಿಗಾಗಿ ಕೊಡುವ ಹಣವನ್ನು ಒಟ್ಟುಗೂಡಿಸಿ ಸಹಕಾರ ಪದ್ಧತಿಯ ಮೇಲೆ ಒಂದು ಬಾವಿಯನ್ನು ಮಧ್ಯದಲ್ಲಿ ಮಾಡಿಸಿಕೊಟ್ಟು ಸುತ್ತುಮುತ್ತು ಇರುವ ನಾಲ್ಕು ಹೊಲಗಳಿಗೆ ನೀರು ದೊರೆಯುವ ಹಾಗೆ ಮಾಡಬೇಕು. ಏಕೆಂದರೆ 3,000 ರೂಪಾಯಿಯಲ್ಲಿ ಒಂದುಭಾವಿ ನಮ್ಮ ಕಡೆ ಆಗುವುದಿಲ್ಲ. ನಾಲ್ಕು ಭಾವಿಗಳ ಹಣ ಒಟ್ಟುಗೂಡಿಸಿ 12,000 ರೂಪಾಯಿಗಳಲ್ಲಿ ಒಂದು ಒಳ್ಳೇಭಾವಿ ಆಗುತ್ತದೆ. ಇಂಥ ಭಾವಿಯನ್ನು ಸರ್ಕಾರದವರೇ ಕಟ್ಟಿಸಿ ಕೊಡಬೇಕು. ಯಾಕೆಂದರೆ ಕೆಲವರು ದುಡ್ಡು ತೆಗೆದುಕೊಂಡು ಬೇರೆ ವ್ಯವಹಾರದಲ್ಲಿ ಉಪಯೋಗಿಸುತ್ತಾರೆ. ಆದುದರಿಂದ ಮಾನ್ಯ ಮಂತ್ರಿಗಳಿಗೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನುಮುಂದೆ ಬರಗಾಲ ಕಾಮಗಾರಿ ಕೆಲಸ ಅಂದರೆ ರಿಲೀಫ್ ವರ್ಕ್ಸ್ ಮಾಡಿಸುವಾಗ್ಗೆ ಅರ್ಥವರ್ಕ ಅಂದರೆ ಈ ಮಣ್ಣಿನಕೆಲಸ ಮಾತ್ರ ಮಾಡಿಸಬಾರದು ಬಾವಿ ತೆಗೆಯಿಸುವುದು ವಂಡ ಹಾಕುವ ಕೆಲಸ ಮಾಡಿಸಬೇಕು.

ಸರಕಾರ ಪ್ರತಿವರ್ಷಮಾಡುವ ಕ್ಷಾಮ ನಿವಾರಣೆ ಕೆಲಸ ಅಂದರೆ ನೀರಡಿಕೆಯಾದಾಗ್ಗೆ ಭಾವಿ ತೋಡಿಸಿದ ಹಾಗೆ ಆಗುತ್ತದೆ. ಆದ್ದರಿಂದ ಒಂದುಪ್ಲಾನ್ ಹಾಕಬೇಕು. ಲ್ಯಾಂಡ್ ರಿಫಾರ್ಮ್ಸ್ ಬಿಲ್ ಜಾರಿಗೆ ಬರುವುದರಿಂದ ಹಳ್ಳಿಗಳಲ್ಲಿ ಕೂಲಿಜನ ಸಿಕ್ಕುವುದಿಲ್ಲ ಎಂದು ಒಬ್ಬರು ಮಾತನಾಡುತ್ತಾ ಹೇಳಿದರು. ಕೂಲಿ ಸಿಕ್ಕುವುದಿಲ್ಲ, ವ್ಯವಸಾಯ ಮಾಡುವ ಯೋಗ್ಯತೆ ಇಲ್ಲದಿದ್ದರೆ ಭೂಮಿಯನ್ನು ಭೂದಾನ ಮಾಡಿಬಿಡಬೇಕು. ಯಾರು ಭೂಮಿ ಉಳುತ್ತಾರೆಯೋ ಅವರಿಗೆ ಭೂಮಿಕೊಟ್ಟು ಬಿಡಬೇಕು.

4–00 P.M

ಅದು ಆಗುವವರೆಗೂ ಈ ದೇಶದ ಅನ್ನದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ ರೆವಿನ್ಯೂಮಂತ್ರಿಗಳಲ್ಲಿ ಲ್ಯಾಂಡ್ ರಿಫಾರಂಸನ್ನು ಒಂದು ಒಳ್ಳೆಯ ರೂಪದಲ್ಲಿ ತರ

(ಶ್ರೀ ಗಂಗಾಧರ ನಾಮೋಷಿ)

ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಚೈನಾದವರು ನಮ್ಮ ಮೇಲೆ ಆಕ್ರಮಣ ಮಾಡಿದ ವೇಳೆಗೆ ನಮಗೆ ಒಳ್ಳೆಯ ಸಂದರ್ಭ ಬಂದಿತ್ತು ಅದೇನೆಂದರೆ ಜನರಲ್ಲಿ ಜಾಗ್ರತಿ ಬಂದು ಅವರು ಯಾವ ಕೆಲಸ ಮಾಡುವುದಕ್ಕೂ ತಯಾರಾಗಿದ್ದರು. ಯಾವ ಒಂದು ಒಳ್ಳೆಯ ಕೆಲಸ ಮಾಡಬೇಕಾಗಿದ್ದರೂ ಪೊಲಿಟಿಕಲ್‌ಪಾರ್ಟಿ ಮತ್ತು ಸರ್ಕಾರ ಎರಡೂಕೂಡ ಸೇರಿ ಕೆಲಸ ಮಾಡಬೇಕು, ಸರ್ಕಾರದವರು ಅಷ್ಟೇಮಾಡಿದರೆ ಸಾಕಾಗುವುದಿಲ್ಲ. ಬಾವಿಕಟ್ಟುವ ಪ್ರೋಗ್ರಾಂ, ಗೊಬ್ಬರ ಹೇಗೆ ಮಾಡಬೇಕೆನ್ನುವ ಪ್ರೋಗ್ರಾಂ, ಪಾಲಿಸಿ ರೆಕಾರ್ಡ್‌ನಲ್ಲಿರಬಹುದು. ಆದರೆ ಹಳ್ಳಿ ಹಳ್ಳಿಗಳಿಗೆ ಹೋದಾಗ ಸರ್ಕಾರದವರನ್ನು ಟೀಕೆಮಾಡುವುದಲ್ಲ ಗೊಬ್ಬರ ಹೇಗೆಮಾಡಬೇಕೆನ್ನುವ ಸಲಹೆ ಕೊಡಬೇಕು. ಚುನಾವಣೆಯ ಕಾಲದಲ್ಲಿ ನಮಗೆ ಓಟುಕೊಡಿ ಅದು ಮಾಡಿದ್ದೇವೆ ಇದುಮಾಡಿದ್ದೇವೆ ಎಂದು ಹೇಳುತ್ತಾ ಇದ್ದರೇ ಹೊರತು ತಾವು ಏನು ಕಾರ್ಯತಹ ಮಾಡುತ್ತಾ ಇದ್ದೀರಿ ಎಂಬುದು ಎಷ್ಟೋಜನರಿಗೆ ಗೊತ್ತಿಲ್ಲ. ಸಗಣಿಯನ್ನು ಹಳ್ಳಿಕಡೆ ಕುರುಳು ಅಂತ ನೆಲದಮೇಲೆತಟ್ಟಿ ಅದನ್ನು ಒಣಗಿಸಿ ಒಲೆಗೆ ಹಚ್ಚಿ ಉರಿಸುತ್ತಾರೆ. ಅದು ಒಳ್ಳೆಯಗೊಬ್ಬರ ಮಾಡುವುದಕ್ಕೆ ಉಪಯೋಗವಾಗುತ್ತದೆ. ಸಗಣಿ ಗೊಬ್ಬರ ಮಾಡುವುದರ ಬಗ್ಗೆ ಪ್ರಚಾರಕಾರ್ಯ ಮಾಡಬೇಕಾಗುತ್ತದೆ. ಸರ್ಕಾರ ಮತ್ತು ಪೊಲಿಟಿಕಲ್ ಆರ್ಗನೈಜೇಷನ್ ಎರಡೂಕೂಡ ಈ ಕೆಲಸ ಮಾಡಬೇಕಾದದ್ದು ಅವಶ್ಯಕ ಎಂಬುದನ್ನು ನಾನು ತಮ್ಮಲ್ಲಿ ಹೇಳುತ್ತಾ ಇದ್ದೇನೆ. ವ್ಯವಸಾಯದ ಇಲಾಖೆಯವರು ಬಾವಿಯ ವಿಷಯದಲ್ಲಿ ಒಂದುರೀತಿ ಹೇಳುತ್ತಾ ಇದ್ದಾರೆ ಕೆಲವುಕಡೆ ಮಳೆ ಆಗುವುದಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಒಳ್ಳೆಯ ಜಮೀನು ಉಂಟು. ಈ ಕಡೆ ಗುಡ್ಡಗಾಡು ಬಹಳ ಹೆಚ್ಚಾಗಿದೆ ನಮ್ಮಕಡೆ ಎಲ್ಲಾ ಬಯಲು ಪ್ರದೇಶ ಇದೆ. ಬೇಕಾದಷ್ಟು ಜಮೀನೂ ಇದೆ ಆದರೆ ಇದಕ್ಕೆ ಬೇಕಾದ ಗೊಬ್ಬರ ಮತ್ತು ನೀರು ಇಲ್ಲ. ವ್ಯವಸಾಯದ ಇಲಾಖೆಯವರು ನೀವು ಎಷ್ಟು ನಿಮ್ಮಭಾಗದ ಕಾಂಟ್ರಿಬ್ಯೂಷನ್ ಬರಬೇಕೋ ಅದು ಬರುವವರೆಗೂ ಚಾನಲ್ ನಿಮ್ಮ ಭಾಗಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ ನಮ್ಮಲ್ಲಿ ಪವರ್ ಇಲ್ಲ, ನೀರಿನ ಸೌಕರ್ಯವಿಲ್ಲ ಆದಕಾರಣ ಆ ಜಮೀನುಗಳಲ್ಲಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಅಂಶಗಳನ್ನೆಲ್ಲಾ ಗಮನಿಸಿ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು) —ಮಾನ್ಯ ಸಭಾಪತಿಯವರೇ ಈ ದಿವಸ ದೇಶದಲ್ಲಿ ಉಂಟಾಗಿರತಕ್ಕ ಅನಾವೃಷ್ಟಿಯಿಂದ ಆಹಾರಧಾನ್ಯಗಳ ಬೆಳೆ ಇಲ್ಲದೇ ರೈತರು ಅನುಭವಿಸುತ್ತಾ ಇರತಕ್ಕ ಕಷ್ಟ, ದನಕರುಗಳು ಮನುಷ್ಯರು ಪಡುತ್ತಾ ಇರತಕ್ಕ ತೊಂದರೆ ಮತ್ತು ರೈತರಿಗೆ ಬೇಕಾದ ಪರಿಹಾರದ ವಿಷಯದಲ್ಲಿ ಮೊದಲು ಮಾತನಾಡಿದ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಮತ್ತು ಉಳಿದವರು ಕೆಲವರು ವಿಸ್ತಾರವಾಗಿ ಮಾತನಾಡಿದ್ದಾರೆ. ಇವುಗಳ ಪರಿಹಾರ ಮತ್ತು ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಬವಣೆಯಿಂದ ಪೂರ್ಣವಾಗಿ ಹೇಗೆ ಪಾರಾಗಬೇಕೆಂಬ ಪ್ರಶ್ನೆ ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ಮಳೆನೀರು ಬಹಳ ಅಗಾಧವಾಗಿ ಬೀಳುತ್ತದೆ ಅದರಲ್ಲೂ ಮಲೆನಾಡು ಪ್ರದೇಶದಲ್ಲಿ—ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಅನೇಕ ದೊಡ್ಡ ದೊಡ್ಡ ನದಿಗಳು ಹುಟ್ಟಿ ಕೆಳಗೆ ಹರಿದು ಅನೇಕ ಭಾಗಗಳಿಗೆ ನೀರನ್ನು ಒದಗಿಸುತ್ತವೆ. ಹಾಗೆಯೇ ಹಿಂದಿನಕಾಲದಲ್ಲಿ ಕಟ್ಟಿದ ಕೆರೆಗಳುಸಹ ರೈತರಿಗೆ ಅನುಕೂಲವಾಗಿವೆ. ಆದರೆ ಈ ದಿವಸದ ಪರಿಸ್ಥಿತಿಯಲ್ಲಿ ಮಲೆನಾಡಿನಿಂದ ಬಂದಂಥ ನಾವು ದೇಶದಲ್ಲಿ ಈ ವರ್ಷ ಮಳೆ ಇಲ್ಲ ಎಂದು ಹೇಳುತ್ತಿರುವಾಗ ಅದು ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ವರ್ಷಕ್ಕೆ 250-300 ಇಂಚು ಮಳೆ ಬರತಕ್ಕ ಕಡೆ 60-70 ಇಂಚು ಮಳೆ ಆಗಿಲ್ಲ ಎಂದರೆ ಎಷ್ಟುತೊಂದರೆಯಾಗಿದೆ ರೈತರಿಗೆ ಎಂಬುದನ್ನು ತಾವು ಊಹಿಸಿಕೊಳ್ಳಬಹುದು. ಹೀಗಿರುವಾಗ ದೇಶದಲ್ಲಿರತಕ್ಕ ಎಲ್ಲಾಜಿಲ್ಲೆಗಳ ಪರಿಸ್ಥಿತಿ ಏನೆಂಬುದನ್ನು ಚಿಕ್ಕಮಗಳೂರು ಜಿಲ್ಲೆಯಿಂದ ತಿಳಿದುಕೊಳ್ಳಬಹುದು. ಈ ವರ್ಷ ಮಳೆ ಇಲ್ಲದೇ ಒಂದು ಕೆರೆಸಹ ತುಂಬಿಲ್ಲ ಒಂದು ಹಳ್ಳಹರಿದಿಲ್ಲ. ಪೂರ್ವಕಾಲದಲ್ಲಿ ಕಟ್ಟಿದ ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕ ದೊಡ್ಡ ಕೆರೆಗಳು ಎಂದರೆ ಅಯ್ಯನಕೆರೆ, ಮದಗದ ಕೆರೆ ಮತ್ತು ಬೆಳವಾಡಿ ಕೆರೆಗಳು ಏನಿವೆ ಇವುಗಳ ಕೆಳಗೆ 5 ಸಾವಿರದಿಂದ 6ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದೆ ಈ ಕೆರೆಗಳು ಅರ್ಧಭಾಗ ಸಹನೀರು ತುಂಬದೇ ರೈತರಿಗೆ ವ್ಯವಸಾಯಮಾಡುವುದಕ್ಕೆ ಕಷ್ಟವುಂಟಾಗಿದೆ. ಈ ಕೆರೆಗಳ ದುರಸ್ತಿ ಬಗ್ಗೆ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಹೇಳಿದರು. ಮೆಕ್ಕಲುಮಣ್ಣಿನಿಂದ ಈ ಕೆರೆಗಳು ತುಂಬಿಹೋಗಿ ಬಹಳಮಟ್ಟಿಗೆ ನಿಷ್ಪ್ರಯೋಜನವಾಗಿವೆ. ಪ್ರಾಚೀನಕಾಲದಲ್ಲಿ ಕಟ್ಟಿದಕೆರೆಗಳು ಈ ಹೂಳನ್ನು ತೆಗೆಸದೇ ಹೋದರೆ ಅದರಿಂದ ಸಂಪೂರ್ಣವಾಗಿ ಮುಚ್ಚಿಹೋಗುತ್ತವೆ. ಎಂದು ಹೇಳಿ ಚಿಕ್ಕಮಗಳೂರು ಜಿಲ್ಲೆಯ ಎಕ್ಸಿಕ್ಯೂಟೀವ್ ಇಂಜನಿಯರು ವರದಿಮಾಡಿದ್ದರೂ ಸಹ ಸರ್ಕಾರದವರು ಯಾವಕ್ರಮವನ್ನು ತೆಗೆದುಕೊಂಡಿಲ್ಲ. ಇದೇ ಪರಿ

ಸ್ಥಿತಿ ಮದಗದ ಕೆರೆ ಮತ್ತು, ಅಯ್ಯನಕೆರೆ ಕೆಗೆಗಳಿಗೂ ಉಂಟಾಗಿದೆ. ಈ ಕೆರೆಗಳ ಉಸ್ತುವಾರಿಯನ್ನು ರೆವಿನ್ಯೂ ಇಲಾಖೆಯವರು ನೋಡಿಕೊಳ್ಳುತ್ತಿಲ್ಲ. ಪಿ. ಡಬ್ಲ್ಯೂ. ಡಿ. ಇಲಾಖೆಯವರೂ ಸಹ ನೋಡಿಕೊಳ್ಳದೇ ಇವುಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಇನ್ನು ಕೆಲವಾರು ವರ್ಷಗಳಲ್ಲಿ ಈ ಕೆರೆಗಳು ಹೂಳಿನಿಂದ ಮುಚ್ಚಿಹೋಗಿ ರೈತರಿಗೆ ವ್ಯವಸಾಯ ಮಾಡುವುದಕ್ಕೆ ನೀರು ಇಲ್ಲದೇ ದನಕರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದೇ ಹೋಗುವ ಪರಿಸ್ಥಿತಿ ಒದಗಬಹುದು. ಆದ್ದರಿಂದ ಸರ್ಕಾರದವರು ಇದರ ವಿಷಯದಲ್ಲಿ ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾಥನೆ ಮಾಡುತ್ತೇನೆ.

ಸರ್ಕಾರದವರು ಸಣ್ಣನೀರಾವರಿ ಕೆಲಸಕ್ಕೆ ಹೆಚ್ಚಿನ ಹಣವನ್ನು ಒದಗಿಸುತ್ತಾ ಇದ್ದೇವೆ ಮತ್ತು ಯೋಜನೆಯನ್ನೂ ಸಹ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಈಗ ಎರಡುವರ್ಷದ ಹಿಂದೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕ್ಕರಾಯಪಟ್ಟಣದ ಹತ್ತಿರ ಜೋಡಿಲಿಂಗದಹಳ್ಳಿ ಕೆರೆ ಒಡೆದು ಹೋಯಿತು, ಚೀಫ್‌ಇಂಜಿನಿಯರನ್ನು ನೋಡಿ ಅವರಲ್ಲಿ ಪ್ರಾರ್ಥನೆಮಾಡಿದ ಮೇಲೆ ಖಂಡಿತವಾಗಿಯೂ ಅದನ್ನು ಸರಿಪಡಿಸಿಕೊಡುತ್ತೇವೆ ಎಂದು ಹೇಳಿದರು ಇದುವರೆಗೂ ಆಗಿಲ್ಲ. ಇದೇರೀತಿ ಇನ್ನೂ ಎಷ್ಟು ಕೆರೆಗಳು ಒಡೆದು ಹೋಗಿವೆ, ಯಾವುದು ಉಪಯುಕ್ತವಾಗುವಂತಹ ಪರಿಸ್ಥಿತಿಯಲ್ಲಿಲ್ಲ ಎಂಬುದರ ಬಗ್ಗೆ ಸರ್ಕಾರದವರು ವರದಿಯನ್ನು ತರಿಸಿಕೊಂಡು ಅವುಗಳನ್ನು ರಿಪೇರಿ ಮಾಡಿಸದಿದ್ದರೆ ವ್ಯವಸಾಯವನ್ನೇ ಅವಲಂಬಿಸಿರತಕ್ಕ ರೈತನಸ್ಥಿತಿ ತುಂಬಾಕಷ್ಟವಾಗುತ್ತದೆ ಎಂದು ತಿಳಿಸಲು ಬಯಸುತ್ತೇನೆ. ಮಳೆ ಬಾರದೇ ಇರುವುದಕ್ಕೆ ಕಾಡು ನಷ್ಟವಾಗಿರುವುದೇ ಮುಖ್ಯಕಾರಣ ಎಂದು ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಹೇಳಿದರು ನಿಜವಾಗಿಯೂ ಕೂಡ ಅದು ಸತ್ಯವಾದ ಮಾತು ಎಂದು ನಾನು ಹೇಳುತ್ತಾ ಇದ್ದೇನೆ. ಚಿಕ್ಕಮಗಳೂರಿಗೆ ಹೋಗುವಾಗ ಚಾರಮಡಿ ಘಾಟಿನಲ್ಲಿ ನೋಡಬೇಕು ನೂರಾರು ಮರಗಳನ್ನು ಕಡಿದು ಕೇರಳ ಮತ್ತು ತಿರುವಾಂಕೂರು ಪ್ರದೇಶದವರು ಅಲ್ಲಿಗೆ ಸಾಗಿಸುತ್ತಾ ಇದ್ದಾರೆ. ಕಾಫಿತೋಟ ಮಾಡಬೇಕು ಜಮೀನು ಕೊಡಿ ಎಂದರೆ ಅದು ಕಾಡು, ಹಾಳಾಗುತ್ತದೆ ಎಂದು ಹೇಳುತ್ತೀರಿ. ಅದೇ ಬೇರೆ ರೀತಿಯಲ್ಲಿ ಸಾವಿರಾರು ಎಕರೆ ಕಾಡು ಪ್ರದೇಶ ನಷ್ಟವಾಗಿ ಹೋಗುತ್ತ ಇದೆ. ಇದರಮೇಲೆ ಅರಣ್ಯಇಲಾಖೆಯವರು ಯಾವ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ ಅದನ್ನು ರಕ್ಷಣೆ ಮಾಡುತ್ತಾ ಇದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕಾದ್ದು ಬಹಳ ಅವಶ್ಯಕವಾದ ವಿಷಯವಾಗಿದೆ. ಅದರಲ್ಲೂ ಹೋದವರ್ಷ ಸ್ವಲ್ಪಮಟ್ಟಿಗೆ ಸುಧಾರಿಸಿದ್ದರು. ಈ ವರ್ಷ ಅವರಿಗೆ ಸರ್ಕಾರಕ್ಕೆ ಕಂದಾಯ ಕೊಡುವುದಕ್ಕೂ ಮಾರ್ಗವಿಲ್ಲದೆ ಅವರು ಎತ್ತುಕರಗಳನ್ನು ಮಾರಾಟ ಮಾಡಿ ಕಂದಾಯ ಕೊಟ್ಟಿದ್ದಾರೆ. ಈ ದಿವಸ ಅವರಿಗೆ ಅವರು ತೆಗೆದುಕೊಂಡದ್ದ ಅಲ್ಪಕಾಲವಧಿ ಮತ್ತು ಮೀಡಿಯಂ ಟರ್ಮಿನ ಸಾಲಗಳನ್ನು ತೀರಿಸಲು ಯತ್ನವಿಲ್ಲದೆ ಬಹಳ ತೊಂದರೆಗೊಳಗಾಗಿದ್ದಾರೆ. ಹಿಂದಿನ ಸಾಲಿನಲ್ಲಿ ಕಂದಾಯವನ್ನು ಕೊಡತಕ್ಕ ಬಗ್ಗೆ ಹೇಗೆ ಒತ್ತಾಯಮಾಡುತ್ತಿರಲಿಲ್ಲವೋ ಹಾಗೇ ಈ ವರ್ಷವೂ ಸರ್ಕಾರದವರು ರಿಯಾಯಿತಿಯನ್ನು ತೋರಿಸದೆ ಹೋದರೆ, ಆ ರೈತರ ಕಷ್ಟ ನಿವಾರಣೆ ಮಾಡದಿದ್ದರೆ ಅವರು ಖಂಡಿತವಾಗಿಯೂ ಬಹಳ ತೊಂದರೆಗೊಳಗಾಗುತ್ತಾರೆ. ಈ ಹಿಂದೆ ರೈತರ ಕಷ್ಟ ನಿವಾರಣೆ ಮಾಡುತ್ತೇವೆಂದು ಟಿನೆನ್ಸಿ ಕಾನೂನು ತಂದರು. ಆದರೆ ಈ ದಿವಸ ಆ ರೈತರಿಗಾಗುತ್ತಿರುವ ಕಿರುಕುಳ ಅಷ್ಟಿಷ್ಟಲ್ಲ. ಹಾಗೇ ಇನಾಂ ರದ್ದಿಯಾತಿ ಕಾನೂನನ್ನು ತಂದರು. ಅದರಿಂದಲೂ ರೈತರಿಗೆ ತುಂಬಾ ತೊಂದರೆಯುಂಟಾಯಿತು. ಈಗಲೂ ಆ ಕನ್ನಾಪುರ, ನಾಗಲಾಪುರ ಈ ಗ್ರಾಮಗಳ ಜನರಿಗೆ ಆಗುತ್ತಿರುವ ತೊಂದರೆ ಬಹಳ ಭಯಂಕರವಾಗಿದೆ. ಈ ವಿಚಾರದಲ್ಲಿ ಕೂಡಲೇ ಸರ್ಕಾರದವರು ನಿಗಾತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಕೂಡಲೇ ಸೂಕ್ತ ಕಾರ್ಯಕ್ರಮವನ್ನು ಕೈಗೊಳುತ್ತಾರೆಂದು ನಂಬಿದ್ದೇನೆ.

ಆದರೆ ಈ ಹಿಂದೆ ಮಾತನಾಡಿದ ಶ್ರೀ ಗಂಗಾಧರ ನಾಮೋಷಿಯವರು ನಮ್ಮಲ್ಲಿ ಆಳುಗಳ ತೊಂದರೆಯೇನೂ ಅಷ್ಟಿರಿವುದಿಲ್ಲ ಎಂದು ಹೇಳಿದ್ದಾರೆ. ಆದರೆ ಅವರಿಗೆ ನಮ್ಮ ಮಲೆನಾಡಿನ ವಿಚಾರ ಗೊತ್ತಿಲ್ಲ. ಅವರು ಈ ದಿವಸ ನಮ್ಮ ಮಲೆನಾಡಿಗೆ ಬಂದು ವ್ಯವಸಾಯಮಾಡುವುದಾಗಿದ್ದರೆ ಅವರಿಗೆ ಹಾಗೆ ಸಾವಿರಾರು ಎಕರೆ ಭೂಮಿಯನ್ನು ಕೊಡಲು ನಾವು ಸಿದ್ಧರಾಗಿರುತ್ತೇವೆ. ನಮ್ಮಲ್ಲಿ ಜನರಿಗೆ ತಿರುಗಾಡುವುದಕ್ಕೆ ರಸ್ತೆಗಳಿಲ್ಲ, ಹಳ್ಳಗಳಿಗೆ ಸೇತುವೆಗಳಿಲ್ಲ. ವ್ಯವಸಾಯಮಾಡತಕ್ಕವರಿಗೆ ಒಳ್ಳೆಯ ಭೂಮಿ ಬೇಕಾದಷ್ಟಿದೆ. ಆದರೆ ಅದನ್ನೆಲ್ಲ ಉಳುವುದಕ್ಕೆ ಆಳುಕಾಳುಗಳೇ ಸಿಕ್ಕುವುದಿಲ್ಲ. ಅಲ್ಲಿಯ ವ್ಯವಸಾಯ ಬಹಳ ಕಷ್ಟ. ಹಿಂದೆ ನಮ್ಮ ಕಡೆ ಬತ್ತದರೇಟು ಪಲ್ಲಾಕ್ಕೆ 30 ರೂಪಾಯಿ ಆಗಿ ರೈತನಿಗೆ ಬಹಳ ತೊಂದರೆ ಆಯಿತು. ಆಗ ನಾವು ಧಾನ್ಯಗಳ ದರವನ್ನು ಏರಿಸಬೇಕೆಂದು ಕೇಳಿಕೊಂಡಾಗ ಕೊಳ್ಳತಕ್ಕವರಿಗೆ ತೊಂದರೆ ಆಗುತ್ತದೆ ಎಂದು ದರವನ್ನು ಏರಿಸಲಿಲ್ಲ. ಪಲ್ಲಾಕ್ಕೆ 30 ರೂಪಾಯಿಗಳನ್ನು ಮಾಡಿದರೆ ಕೊಳ್ಳತಕ್ಕವರಿಗೆ ಕಷ್ಟ, ಪಲ್ಲಾಕ್ಕೆ 15 ರೂಪಾಯಿಗಳಾದರೆ ಬೆಳೆಯತಕ್ಕವನಿಗೆ ಕಷ್ಟ. ಈ ಎರಡಕ್ಕೂ ಒಂದು ಮಧ್ಯವರ್ತಿಬೆಲೆಯನ್ನು ಸರ್ಕಾರದವರು ನಿರ್ಧರಿಸಲೇಬೇಕು. ಇಲ್ಲ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ವಾದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಈ ದಿವಸ ಧಾನ್ಯದ ಬೆಲೆಗಳು ಬಿದ್ದು ಹೋಗಿ ರೈತರು ತುಂಬಾ ಸಾಲವಂಡಿಗರಾಗಿದ್ದಾರೆ. ಸರ್ಕಾರದಿಂದ ರೈತರಿಗೆ ಸಕಾಲಕ್ಕೆ ಸಹಾಯ ಸಿಗದೆ ಅವರು ಮಧ್ಯವರ್ತಿ ಜನರ ಕೈಗೆ ಸಿಕ್ಕಿ ನರಳುತ್ತಿದ್ದಾರೆ. ಇದರ ಮಧ್ಯ ಅತಿವೃಷ್ಟಿ—ಅನಾವೃಷ್ಟಿಗಳ ಕಾಟಬೇರೆ. ಈ ವಿಚಾರದಲ್ಲಿ ರೈತರಿಗೊಂದು ಸರಿಯಾದ ಮಾರ್ಗದರ್ಶನಕೊಡುವುದಕ್ಕೆ ಸರಿಯಾದ ಅಧಿಕಾರಿಗಳಿಲ್ಲದೆ ಈ ದಿವಸ ರೈತರು ಬಹಳ ಕಷ್ಟನಷ್ಟ ಹಾಗೂ ನಾನಾ ತೊಂದರೆಗಳಿಗೊಳಗಾಗಿ ದ್ದಾರೆ. ಸರ್ಕಾರದವರು ಕೂಡಲೆ ರೈತನಿಗುಂಟಾಗಿರುವ ಈ ತೊಂದರೆಗಳನ್ನು ನಿವಾರಣೆ ಮಾಡಲು ಪ್ರಯತ್ನಮಾಡಲೇಬೇಕು. ನಮ್ಮ ಮಲೆನಾಡಿನಲ್ಲ ಬೇಕಾದಷ್ಟು ಜಲಾಶ್ರಯವಿದೆ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಇದು ಸರಿಯಲ್ಲ. ಅಲ್ಲಿ 150 ಅಡಿ ಆಳ ತೆಗೆದರೂ ಬಾವಿಯಲ್ಲಿ ನೀರು ಸಿಕ್ಕುತ್ತಿಲ್ಲ. ಪರಿಸ್ಥಿತಿ ಹೀಗಿದೆ ಎಂದು ಹೇಳಿದರೆ ಜನರು ನಂಬುವುದಿಲ್ಲ. ಚಿತ್ರದುರ್ಗ ಜಿಲ್ಲೆ ಯಲ್ಲಿ ಮಳೆಕಡಮೆಯಾದರೂ ಅಲ್ಲಿ ಬಾವಿಗಳಲ್ಲಿ ನೀರು ಮೇಲೆ ಸಿಕ್ಕುತ್ತದೆ. ಆದುದರಿಂದ ಮಲೆ ನಾಡಿನಲ್ಲಿ ರೈತರಿಗೆ ಮಳೆ ನೀರನ್ನು ಶೇಖರಣೆಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳು ತ್ತೇನೆ. ಆದರೆ ಮಲೆನಾಡಿನಲ್ಲಿರತಕ್ಕವರೆಲ್ಲ ಬರೀ ಕಾಫಿ, ಏಲಕ್ಕಿ, ಅಡಕೆ ತೋಟಗಳನ್ನು ಮಾತ್ರ ಇಟ್ಟುಕೊಂಡಿರುತ್ತಾರೆಂಬ ಭಾವನೆ ಜನರಲ್ಲಿರುತ್ತೆ. ಆದರೆ ಅವರೂ ಸಹಾ ಈ ಬತ್ತ ರಾಗಿ ಇತ್ಯಾದಿ ಗಳನ್ನು ಬೆಳೆಯುತ್ತಾರೆ ಹಾಗೂ ಬಳೆಸುತ್ತಾರೆ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು. ನಮ್ಮ ಮಲೆನಾಡಿನಲ್ಲಿರತಕ್ಕ ರೈತನು ಉದ್ಧಾರವಾಗಬೇಕಾಗಿದ್ದರೆ ಅಲ್ಲಿ ಹರಿಯುತಕ್ಕ ಹಳ್ಳಗಳಿಗೆ ಅಡ್ಡಗಟ್ಟೆಗಳನ್ನು ಹಾಕಿ ಹೊಸಕೆರೆಗಳನ್ನು ನಿರ್ಮಾಣ ಮಾಡುವುದರಜೊತೆಗೆ ಅಲ್ಲಿರತಕ್ಕ ಹಳೆಯ ಕೆರೆಗಳನ್ನೂ ಕೂಡ ಜೀರ್ಣೋದ್ಧಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಅಲ್ಲಿ ಮಳೆ ಯಿಂದ ಸುರಿಯತಕ್ಕ ನೀರೆಲ್ಲ ವೃಥಾ ಹರಿದು ಸಮುದ್ರದ ಪಾಲಾಗುತ್ತದೆ. ಈ ಸಾರಿ ಮಲೆನಾಡಿ ನಲ್ಲಿ ಮಳೆ ಸಂಪೂರ್ಣವಾಗಿ ಹೋಗಿ ರೈತರೆಲ್ಲ ಬಹಳ ಕಳವಳಪರಿಸ್ಥಿತಿಯಲ್ಲಿದ್ದಾರೆ. ದನಕರುಗಳಿಗೆ ತಿನ್ನುವುದಕ್ಕೆ ಹುಲ್ಲಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ರಾಸುಗಳೆಲ್ಲ ಸಾಯುತ್ತಿವೆ. ವರ್ಷಕ್ಕೆ 300 ಇಂಚು ಮಳೆಯಾಗುತ್ತಿದ್ದ ಕಡೆ ಈಗ 70 ಇಂಚು ಮಳೆಯಾಗಿದೆ. ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಮತ್ತು ಕೊಡಗು ಈ ಜಿಲ್ಲೆಗಳಲ್ಲಿರತಕ್ಕ ರೈತರೆಲ್ಲ ಬಹಳ ಕಂಗಾಲಾಗಿದ್ದಾರೆ. ಇಂಥ ಮಳೇ ಬೀಳತಕ್ಕ ಪ್ರದೇಶದಲ್ಲಿರುವ ರೈತರ ಪಾಡೇಹೀಗಾಗಿರುವಾಗ ಇನ್ನು ಕೇವಲ ಖುಷ್ಕಿ ಜಮೀನನ್ನೇ ನಂಬಿಕೊಂಡಿರತಕ್ಕ ಜನರ ಪಾಡೇನಾಗಿರಬೇಕು ಎನ್ನುವುದನ್ನು ತಾವುಗಳೇ ಊಹಿಸಬಹುದು. ಯಾವತ್ತೂ ಸಮೃದ್ಧಿಯಾಗಿರುತ್ತಿದ್ದ ಮಲೆನಾಡಿನ ಪರಿಸ್ಥಿತಿ ಇಂದು ಹೀಗೆ ಭೀಕರವಾಗಿದೆ. ಜನರೆಲ್ಲ ಬಹಳ ಕಂಗಾಲಾಗಿದ್ದಾರೆ. ಆದುದರಿಂದ ಸರ್ಕಾರದವರು ಕೂಡಲೆ ಅಲ್ಲಿಂದ ಒಂದು ನಿಜ ಪರಿಸ್ಥಿತಿಯ ವರದಿಯನ್ನು ತರಿಸಿಕೊಂಡು ರೈತರಿಗೆ ಆದಷ್ಟು ಬೇಗ ನೆರವನ್ನು ನೀಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿ ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆ ಗಳನ್ನರ್ಪಿಸಿ ನಾನು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಸಭಾಪತಿಗಳೆ. ಇಂದು ದೇಶದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯಬಗ್ಗೆ ಒಂದು ಚರ್ಚೆ ನಡೆಸಿ ಈ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡಲು ಒಂದು ಸೂಚನೆಯನ್ನು ಶ್ರೀ ಹುಚ್ಚಮಾಸ್ತಿಗೌಡರು ಏನು ಈಗ ಸಭೆಯಮುಂದಿಟ್ಟಿದ್ದಾರೆ ಅದನ್ನು ಸ್ವಾಗತಿ ಸುತ್ತ ನಾನು ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಆದರೆ ಈಗತಾನೆ ಮಾತನಾಡಿದ ಶ್ರೀ ಮತಿ ಸುಬ್ಬಮ್ಮನವರು ಅವರ ಪ್ರದೇಶದಲ್ಲಿ 60—70 ಇಂಚು ಮಳೆ ಬಿದ್ದಿರುವುದಾಗಿ ಹೇಳಿದರು. ಆದರೆ ಅಂಥ ಹೆಚ್ಚು ಮಳೆ ಬೀಳತಕ್ಕ ಬೇರೆ ಪ್ರದೇಶಗಳ ಪರಿಸ್ಥಿತಿಯೇನಾಗಿದೆ ಎಂಬುದನ್ನು ಪರಿ ಶೀಲನೆ ಮಾಡುವುದಾದರೆ: ನಮ್ಮ ಕಡೆ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಈ ತಾಲ್ಲೂಕುಗಳಲ್ಲಿ 6 ಇಂಚು ಕೂಡ ಮಳೆಯಾಗಿಲ್ಲ ಎಂತ ಹೇಳಿದರೆ ಅಲ್ಲಿಯಪರಿಸ್ಥಿತಿ ಹೇಗಿರಬಹು ದೆಂಬುದನ್ನು ಸರ್ಕಾರದವರೇ ಊಹಿಸಿಕೊಳ್ಳಬಹುದು. ನನ್ನ ಪ್ರಾಂತ್ಯಕ್ಕೆ ಮಂತ್ರಿಗಳು ಬಂದಿ ದ್ದಾಗ್ಗೆ ನನ್ನ ಜೊತೆಯಲ್ಲಿ ಅವರು ಅನೇಕ ಸ್ಥಳಗಳನ್ನು ಸಂಚರಣೆ ಮಾಡಿನೋಡಿದ್ದಾರೆ. ಅಲ್ಲಿ ಈವರೆಗೆ ಇನ್ನೂ ಮುಕ್ಕಾಲುಭಾಗ ಜಮೀನು ಕೂಡ ಉಳುಮೆಯಾಗಿಲ್ಲ. ಇನ್ನು ಕಾಲುಭಾಗ ಮಾತ್ರ ಉತ್ತಿದ್ದಾರೆ. ಕೆಲವು ಕಡೆ ಮೊಳಕೆ ಒಡೆದಿದೆ, ಇನ್ನು ಕೆಲವು ಕಡೆ ಇಲ್ಲ. ಆದಾಗ್ಗೂ ಅಲ್ಲಿ ಈ ವರ್ಷ ಯಾವ ಬೆಳೆಯು ಆಗುವುದಿಲ್ಲವೆಂಬ ಅಂಶ ನಿರ್ವಿವಾದವಾದುದು. ಸರ್ಕಾರದವರು ಈಗ ಅಲ್ಲಿ ಪರಿಹಾರಕಾರ್ಯವನ್ನು ಕೈಗೊಳ್ಳಲು 40-50 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಇದು ಏತಕ್ಕೂ ಸಾಲದು. ಇಷ್ಟು ಹಣದಲ್ಲಿ ಏನು ಪರಿಹಾರ ಕಾರ್ಯಕೈಗೊಳ್ಳಲು ಅವಕಾಶವಿದೆ ಎಂಬುದನ್ನು ಸರ್ಕಾರದವರೇ ಪರಿಶೀಲಿಸಬೇಕಾಗಿದೆ. ಇಷ್ಟು ನಿರ್ದಯವಾಗಿರುವುದು ಬಹಳ ವಿಷಾದಕರ. ಈ ಅಭಾವ ಪರಿಸ್ಥಿತಿಯನ್ನು ತಾತ್ಕಾಲಿಕವಾಗಿ ಆದರೂ ಬಗೆಹರಿಸಲು ತಾಲ್ಲೂಕಾ

ಮಳೆ ಇರತಕ್ಕ ಗೋವು ಕಟ್ಟೆಗಳನ್ನು ರಿಪೇರಿ ಮಾಡಿಸುವುದು, ಅತಿ ಮುಖ್ಯವಾದದೆಂದು ಸರ್ಕಾರಕ್ಕೆ ಕೇಳಿಕೊಂಡೆವು. ಅವರು ಒದಗಿಸಿರತಕ್ಕ ಹಣ ಒಂದು ವಾರಕ್ಕೂ ಕೂಡ ಸಾಲುವುದಿಲ್ಲ, ಜನ ಅಷ್ಟು ಅಧಿಕ ಸಂಖ್ಯೆಯಲ್ಲಿ ಕೆಲಸಕ್ಕೆ ಬರುತ್ತಿದ್ದಾರೆ. ಅಲ್ಲಿ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಕುಡಿಯುದಕ್ಕೆ ನೀರಿಲ್ಲ, ಹೀಗಾಗಿದೆ ಅಲ್ಲಿಯ ಜನರ ಪರಿಸ್ಥಿತಿ. ನಮ್ಮ ಕೊಳ್ಳೇಗಾಲ ತಾಲ್ಲೂಕು ಬಾರ್ಡರಿನಲ್ಲಿದ್ದು ತುಂಬಾ ಆರಣ್ಯ ಪ್ರದೇಶದಲ್ಲಿರುತ್ತದೆ. ಅಲ್ಲಿ ಯಾವಾಗಲು ವರ್ಷಕ್ಕೆ 68-70 ಇಂಚು ಮಳೆಯಾಗುತ್ತಿತ್ತು. ಅಲ್ಲಿಯ ಜನ ಜೀವನ ಯಾವಾಗಲೂ ಸಂಪದ್ಭರಿತವಾಗೇ ಇತ್ತು. ಇತ್ತೀಚೆಗೆ ಏಕೋ ಏನೋ ಅಲ್ಲಿ ಕರೆ ಬಾವಿಗಳಲ್ಲಿ ನೀರೆಲ್ಲ ಇಲ್ಲದೆ ಬಹಳ ತೊಂದರೆಯುಂಟಾಗಿದೆ. ಕಾಡಿನಲ್ಲಿರತಕ್ಕ ಪ್ರಾಣಿಗಳೆಲ್ಲ ಊರಿನೊಳಕ್ಕೆ ಬರುತ್ತಿವೆ. ಹೀಗಾಗಿರುವಾಗ ಅಲ್ಲಿಯ ಜನರ ಪರಿಸ್ಥಿತಿ ಎಷ್ಟರಮಟ್ಟಿಗೆ ಬಿಗಡಾಯಿಸಿದೆ ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕು. ಅಲ್ಲಿ ಈ ದಿವಸ ಉಂಟಾಗಿರತಕ್ಕ ಪರಿಸ್ಥಿತಿಯನ್ನು ಹತೋಟಿಗೆ ತರಲು ಎಷ್ಟು ಸಹಾಯ ಬೇಕೆಂಬುದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿ ಅಷ್ಟನ್ನು ಕೊಡಬೇಕಾದ್ದು ತೀರಾ ಅನಿವಾರ್ಯ. ಇಲ್ಲಿಯವರೆಗೂ ಅಲ್ಲಿ ವರ್ಷಕ್ಕೆ 35-36 ಇಂಚು ಮಳೆಯಾಗುತ್ತಿತು. ಈ ವರ್ಷ ಕೇವಲ 6 ಇಂಚು ಮಾತ್ರ ಮಳೆ ಬಿದ್ದಿದೆ. ಆದರೆ ಇಲ್ಲಿಯವರೆಗೂ ಸರ್ಕಾರದವರು ಅಲ್ಲಿ ಸಾಕಷ್ಟು ಪರಿಹಾರ ಕಾಂಗಾರಿಗಳನ್ನು ಕೈಗೊಂಡಿಲ್ಲ ; ಇಡೀ ರಾಜ್ಯದಲ್ಲಿ 30 ಸಾವಿರ ಎಕರೆಗಳ ಕಾಂಟೂರ್ ಬಂಡಿಂಗ್ ಆಗುವಕಡೆ ಕೇವಲ 20 ಸಾವಿರ ಎಕರೆಗಳ ಕಾಂಟೂರ್ ಬಂಡಿಂಗ್ ಆಗಿದೆ. ಇದೇ ರೀತಿ ಸುಮಾರು 5-6 ವರ್ಷಗಳಿಂದಲೂ ನೀರು ಸಿಗದೇ ಇರುವುದರಿಂದ ವ್ಯವಸಾಯವನ್ನು ಸಂಪೂರ್ಣವಾಗಿ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಸಾಯಿಲ್ ಕನ್‌ಸರ್‌ವೇಷನ್, ಕಾಂಟೂರ್ ಬಂಡಿಂಗ್‌ಗಾಗಿ ಹೆಚ್ಚಿನ ಹಣ ಕೊಟ್ಟು ಇದಕ್ಕೆ ಪ್ರಾಶಸ್ತ್ಯ ಕೊಡಬೇಕು. ಇದಕ್ಕನುಗುಣವಾಗಿ ಯಾವ ಯಾವ ಪ್ರದೇಶಗಳಲ್ಲಿ ನೀರಿನ ಕೊರತೆ ಇದೆಯೋ ಅಂತಹ ಪ್ರದೇಶಗಳಲ್ಲಿ ಕಾಂಟೂರು ಬಂಡಿಂಗ್ ವರ್ಕ್ಸ್‌ಗಳನ್ನು ಜಾಸ್ತಿ ಮಾಡಲು ಸಾಕಷ್ಟು ಹಣವನ್ನು ಒದಗಿಸಿದ್ದೇ ಆದರೆ, ಹೆಚ್ಚಿನ ಬೆಳೆ ಬೆಳೆಯಲು ಅನುಕೂಲವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಋಣ ತಪ್ಪಿಸಲು ಸಾಧ್ಯವೇ ಹೊರತು ಇಲ್ಲದಿದ್ದರೆ ಏನು ಆಗುವುದಿಲ್ಲ. ಈಗಿರುವ ಯೋಜನೆಗಳಂತೆ ಈ ತರಹ ಕೆಲಸಗಳೇನೂ ನಡೆದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. Rural Credit Survery Report ನ್ನು ನೋಡವುದಾದರೆ ನಮ್ಮ ದೇಶದ ರೈತರು ವರ್ಷೇ ವರ್ಷೇ ಅರವತ್ತು ಕೋಟಿ ರೂಪಾಯಿಗಳಷ್ಟನ್ನು ಬಡ್ಡಿಯ ರೂಪದಲ್ಲಿ ಸಲ್ಲಿಸುತ್ತಿದ್ದಾರೆ. ತಾವೇನೋ ರೈತರಿಗೆ ಸಹಾಯಕವಾಗಲಿ ಎಂದು ಬೇಕಾದಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದರೂ ಅದು ನಿಷ್ಫಲವಾಗುತಿದೆ, ಮತ್ತು ನಿಮ್ಮ ಯೋಜನೆಯೂ ವಿಫಲವಾಗಿದೆ. ಇದರಿಂದ ರೈತರ ಋಣಬಾಧೆಯನ್ನೂ ಪರಿಹಾರ ಮಾಡಿದಂತಾಗಲಿಲ್ಲ. ವರ್ಷೇ ವರ್ಷೇ ಅದನ್ನೇ ಉತ್ಪತ್ತಿಮಾಡುತ್ತಿದ್ದರೂ ಕೂಡ ಅದು ಆವನ ಜೀವನಕ್ಕೆ ಸಾಲದೇ, ಅದರಿಂದಾಗಿ ತನ್ನ ಋಣಬಾಧೆಯನ್ನು ತೀರಿಸಲು ಸಾಧ್ಯವಿಲ್ಲದಂತಾಗಿದೆ; ಅಲ್ಲದೆ, ಅವನು ಮೇಲಿಂದ ಮೇಲೆ ಸಾಲಗಳನ್ನು ಪಡೆದರೂ ಸಾಲಗಳೂ ಹಾಗೇ ಉಳಿದಿವೆ.

ಇನ್ನು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನ ವಿಚಾರದಲ್ಲಿ ಹೇಳುವುದಾದರೆ ಅದರ ಯೋಜನೆಗಳೆಲ್ಲಾ ವಿಫಲವಾಗಿದೆ ಎನ್ನುವ ಒಂದು ಮಾತನ್ನು ಮಾತ್ರ ಹೇಳಿ ನಾನು ಇನ್ನುಮುಂದೆ ಹೋಗಲಿಕ್ಕೆ ಇಚ್ಛೆಪಡುತ್ತೇನೆ.

ತಾತ್ಕಾಲಿಕವಾದ ಪರಿಹಾರ ಎಂದು ವರ್ಷೇ ವರ್ಷೇ ಬರುತ್ತಲೇ ಇದೆ ಎಂದು ನಾವೂ ಪ್ರಸ್ತಾಪ ಮಾಡುತ್ತಿದ್ದೇವೆ. ಅದಕ್ಕೆ ತಕ್ಕಂತೆ ಸರಕಾರವೇನೋ ಸ್ವಾಭಾವಿಕವಾಗಿ ಇಷ್ಟು ದುಡ್ಡು ಖರ್ಚುಮಾಡಿದ್ದೇವೆ, ಇಷ್ಟು ಜನಗಳಿಗೆ ಅನುಕೂಲವಾಗಲೆಂದು ಜರೂರು ಕೆಲಸಗಳನ್ನು ಅವರ ಹಿತದೃಷ್ಟಿಯಿಂದ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಯಾವ ದೃಷ್ಟಿಯಿಂದ ನೋಡಿದರೂ ಕೂಡ ಸಮರ್ಪಕವಾಗಿ ಕೆಲಸ ನಡೆದಿಲ್ಲ. ಮತ್ತು ಈ ಬಗ್ಗೆ ಶಾಶ್ವತವಾದ ಯಾವ ಪರಿಹಾರ ಕಾರ್ಯಕ್ರಮವನ್ನೂ ತೆಗೆದುಕೊಳ್ಳದಿದ್ದರೆ ಬಹಳ ಅನ್ಯಾಯವಾಗುತ್ತದ ಎಂದು ನಾನಿಲ್ಲಿ ತಿಳಿಸುತ್ತೇನೆ. ಗಡಿ ಪ್ರದೇಶಗಳಲ್ಲಿ, ಅದರಲ್ಲೂ ಹಿಂದುಳಿದಿರುವ ಗಡಿ ಪ್ರದೇಶಗಳನ್ನು ಇತರ ಪ್ರದೇಶಗಳಂತೆ ಸರಿಸಮಾನವಾಗಿ ವಾಸ್ತವವಾಗಿ ಅದರ ಮಟ್ಟಕ್ಕೇರಿಸಬೇಕೆಂದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆದರಂತೆ ಎಲ್ಲ ಪ್ರದೇಶಗಳನ್ನೂ ಆದಷ್ಟು ಬೇಗ ಪ್ರಯೋಜನ ಪಡೆಯುವಂತಹ ಒಂದು ಶಾಶ್ವತವಾದ ಮತ್ತು ಕಡ್ಡಾಯವಾದ ಯೋಜನೆ ಹಾಕಬೇಕೆನ್ನುವುದು ಸರಕಾರದ ಧ್ಯೇಯವಾಗಿರಬೇಕು. ಇದಕ್ಕಾಗಿಯೇ ಸರಕಾರದಲ್ಲಿ ಒಂದು ಪ್ರತ್ಯೇಕವಾದ ಇಲಾಖೆಯಿರಬೇಕು. ಇದರ ಬಗ್ಗೆ ಸರಕಾರಕ್ಕೆ ಸೂಚನೆ ಕೊಟ್ಟಿದ್ದರೂ ಇಲ್ಲಿಯವರೆಗೂ ಏನೂ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿಯೇ ಬೇಕಾದಷ್ಟು ಶಾಶ್ವತವಾಗಿ ಯಾವತ್ತಿಗೂ ನೀರು ಹರಿಯುವಂತಹ ಹಳ್ಳಿಗಳು ಮತ್ತು ನದಿಗಳಿವೆಯಾದರೂ, ಅವುಗಳ ಪೂರ್ಣವಾದ ಪ್ರಯೋಜನವನ್ನು ಪಡೆಯುದಕ್ಕಾಗಲಿಲ್ಲ. ನಾವು ಹಿಂದೆ ಮದರಾಸು ಸರಕಾರಕ್ಕೆ ಸೇರಿದ್ದರೂ ಆಗಲೂ ಆ-

(ಶ್ರೀ ಜಿ. ವಿ. ಗೌಡ)

ಸರಕಾರ ಏನೂ ಮಾಡಲಿಲ್ಲ. ಈಗ ಮೈಸೂರು ಸರಕಾರಕ್ಕೆ ಬಂದಮೇಲೆ ಇದನ್ನೆಲ್ಲ ತನಿಖೆ ಮಾಡಬೇಕೆಂದು ಪ್ರತ್ಯೇಕವಾದ ಒಂದು ಸಬ್‌ಡಿವಿಜನ್ನನ್ನು ಮಂಜೂರು ಮಾಡಿದ್ದರು ಮತ್ತು ಆ ಸಬ್‌ಡಿವಿಜನ್ನಿನವರು 31-3-1963 ರೊಳಗೇನೇ ಸರ್ವೆ ಮಾಡಿ ಇಲ್ಲಿ ಯಾವ ಯಾವ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡಬಹುದು, ಯಾವ ರೀತಿಯಲ್ಲಾಗಬೇಕು ಎನ್ನುವುದನ್ನು ತಿಳಿಸುವ ಆದೇಶವನ್ನು ಸರಕಾರ ಕೊಟ್ಟಿದ್ದಾಗ್ಯೂ ಕೂಡ ಇಲ್ಲಿಯವರೆಗೂ ಯಾವ ರಿಪೋರ್ಟು ಕೂಡಾ ಬರಲಿಲ್ಲ. ಅವರ ರಿಪೋರ್ಟಾದರೂ ಬಂದಿದ್ದರೆ, ಯಾವ ಯಾವ ಜಲಾಶಯವನ್ನು ಮಾಡಿದರೆ ಎಷ್ಟು ಮಟ್ಟಿನ ಕೆಲಸ ಮಾಡಬಹುದು ಎನ್ನುವುದನ್ನಾದರೂ ಯೋಚನೆ ಮಾಡಬಹುದಾಗಿತ್ತು. ನಮ್ಮ ಭಾಗದ ಉಡುದೊರೆ ಜಲಾಶಯಕ್ಕಾಗಿ ಸುಮಾರು ಎರಡೂಕಾಲು ಕೋಟಿ ರೂಪಾಯಿಗಳಷ್ಟಾಗಬಹುದು ಎಂದು ಹಿಂದೆ ಹೇಳಿದ್ದುದನ್ನು ಮಾಡಿವರೆ ಸಾವಿರಾರು ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ದೊರೆಯುತ್ತಿತ್ತು. ಹಾಗೇ ಗುಂಡಲ್ ಕೆರೆಯ ಕೆಲಸ ಮಾಡಿದರೆ ಸುಮಾರು ಐದು ಸಾವಿರ ಎಕರೆಗಳಷ್ಟು ಭೂಮಿಗೆ ನೀರಿನ ಆಸರೆ ಸಿಗುತ್ತದೆ. ಇದಲ್ಲದೆ ಇನ್ನೂ ಕೆಲವು ಹಳ್ಳಿಗಳಿಗಾಗಿ ಸುಮಾರು 1.3 ಕೋಟಿಯಷ್ಟು ಖರ್ಚುಮಾಡಿದರೆ ಸುಮಾರು ಹತ್ತು ಸಾವಿರ ಎಕರೆಗಳಷ್ಟು ಭೂಮಿಗೆ ನೀರಿನ ಸೌಕರ್ಯ ಸಿಗುತ್ತದೆ. ಹೀಗೆ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಅವಶ್ಯವಾಗಿದೆ. ನಮ್ಮ ಭಾಗದಲ್ಲಿರುವ ದಡ್ಡನಹಳ್ಳಿ, ದುಡ್ಡನಹಳ್ಳಿ ಮತ್ತು ಹೆಬ್ಬಹಳ್ಳಿ ಇವುಗಳಿಂದಲೇ ಈಗ ಸುಮಾರು ಹದಿನೈದು ಸಾವಿರ ಎಕರೆಗಳಷ್ಟು ನೀರು ಬರಲು ಅವಕಾಶವಿದೆ. ಇಲ್ಲಿ ಜಲಾಶಯವನ್ನು ನಿರ್ಮಾಣ ಮಾಡುವುದಾದರೆ ಇನ್ನೂ ಸುಮಾರು ಹತ್ತು ಸಾವಿರ ಎಕರೆಗಳಷ್ಟು ಭೂಮಿಗೆ ನೀರು ಸಿಕ್ಕಿ ಪ್ರಯೋಜನ ಪಡೆಯಲು ಅವಕಾಶವಿದೆ. ಸರಕಾರದವರು ಇಲ್ಲಿ ಸುಮಾರು 3.4 ಕೋಟಿ ಯಷ್ಟು ಹಣ ಖರ್ಚುಮಾಡಿದರೂ ಶಾಶ್ವತವಾದ ಪರಿಹಾರವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ.

ಮೊನ್ನೆ ಪ್ರಶ್ನೋತ್ತರ ಕಾಲದಲ್ಲಿ ಖಾದೀ ಬೋರ್ಡಿನಲ್ಲಿ ಸುಮಾರು ಎರಡೂಕಾಲು ಕೋಟಿ ರೂಪಾಯಿಗಳಷ್ಟು ಮೂರು ವರ್ಷದ ಅವಧಿಗಾಗಿ ಖರ್ಚು ಮಾಡಿದ್ದರೂ ಏನೂ ಪ್ರಯೋಜನವಾಗಲಿಲ್ಲ ಎಂದು ಇಲ್ಲಿ ಹೇಳಿದ್ದರು. ಅದೇ ರೀತಿ ಎರಡೂಕಾಲು ಕೋಟಿ ರೂಪಾಯಿಗಳಷ್ಟನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರಂಗದಲ್ಲಿ ಇರಿಗೇಷನ್ನಿಗಾಗಿ ಖರ್ಚು ಮಾಡಿದ್ದರೂ ನಮ್ಮ ಭಾಗದಲ್ಲಿ ಸುಮಾರು 20,000 ಎಕರೆಗಳಷ್ಟು ಭೂಮಿಗಾದರೂ ನೀರಾವರಿ ಸೌಕರ್ಯ ಸಿಗುತ್ತಿತ್ತು. ಶಾಶ್ವತವಾಗಿ ಪರಿಹಾರ ಕೊಡಲು ಪ್ರಾಶಸ್ತ್ಯವನ್ನು ಸರಕಾರ ಯೋಚನೆ ಮಾಡದೆ ಸುಮ್ಮನೆ ಹಣ ಖರ್ಚುಮಾಡುತ್ತಿದ್ದಾರೆಂದು ನನಗನಿಸುತ್ತದೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ನಾಮೋಷಿಯವರು ಕೆಲವು ವಿಚಾರಗಳನ್ನು Lift Irrigation Project ಬಗ್ಗೆ ಹೇಳಿದರು. ಕಾವೇರಿನದಿ ನಾಲಾ ಪ್ರದೇಶಗಳಲ್ಲಿ ಒಂದೊಂದು ಬಾವಿಗಳನ್ನು ತೋಡಿಸಿದರೆ ಸುಮಾರು 400-500 ಎಕರೆಗಳಷ್ಟು ಸಾಗುವಳಿ ಮಾಡಲು ಅನುಕೂಲವಾಗುತ್ತಿತ್ತು. ಅಲ್ಲದೇ ಇಲ್ಲಿರುವ ಕೆರೆಗಳನ್ನು ದುರಸ್ತು ಮಾಡಿದರೆ ಇನ್ನೂ ಕೆಲವು ಎಕರೆಗಳಷ್ಟು ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಒಂದು ಕಾರ್ಯಕ್ರಮವನ್ನು ನಮ್ಮ ಸರಕಾರದವರು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮದರಾಸು ಸರಕಾರದವರು "ಟ್ಯೂಬ್-ವೆಲ್ಸ್" ಯೋಜನೆ ತರಬೇಕೆಂದು, 37 ನ್ನು ಮಾಡಬೇಕೆಂದಿದ್ದುದರಲ್ಲಿ 27 ಟ್ಯೂಬ್-ವೆಲ್ಸ್‌ಗಳನ್ನು ಪೂರೈಸಿದ್ದರು. ಇನ್ನೂ ಎರಡು ಮೂರು ಜಿಲ್ಲೆಗಳಿಗೂ ಪೂರೈಸಬೇಕೆಂದಿದ್ದರು, ಆದರೆ ನಮ್ಮ ಸರಕಾರ ಈ ಟ್ಯೂಬ್ ವೆಲ್ಸ್ ಯೋಜನೆ ಬಿಜಾಪುರದಲ್ಲಿ ಎಲ್ಲೋ ಫೇಲ್ ಆಯಿತೆಂದು ಅದರ ಫಲವಾಗಿ ಬೇರೆಕಡೆ ಇದರ ಪ್ರಯೋಗ ಮಾಡಬಾರದೆಂದು ಹೇಳಿರುವುದನ್ನು ನೋಡಿದರೆ ನಿಜವಾಗಿಯೂ ಕೂಡ ಮುಂದೆ ಇದು ನಡೆಯುವುದಕ್ಕೆ ಸಾಧ್ಯವಿಲ್ಲ ಎಂದು ತೋರುತ್ತೆ. ಅದಕ್ಕಾಗಿ ನಾನು ಸೂಚಿಸುವುದು, Lift Irrigation Scheme, Tube Wells Scheme, ಎನ್ನುವುದನ್ನು ಪರಿಣಾಮಕಾರಿಯಾಗಿ ಮಾಡಲು ಪರಿಶೀಲನೆ ಮಾಡಿ ಯಾವ ಯಾವ ಯೋಜನೆಗಳನ್ನು ಮಾಡಿ ರೈತರನ್ನು ಸುಧಾರಣೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡುವುದು ಅಗತ್ಯ. ಅನೇಕ ಮಾನ್ಯ ಸದಸ್ಯರುಗಳು ಹೇಳಿದಂತೆ ಸಣ್ಣ ನೀರಾವರಿ ಯೋಜನೆಗಳಿಗಾಗಿ ಸಾಕಷ್ಟು ಬಾವಿಗಳನ್ನು ತೋಡಿಸುವ ಕೆಲಸವನ್ನು ಸರಕಾರ ಮಾಡುವುದರಿಂದ ಬಹಳ ಉತ್ತಮವಾದ ಫಲ ಸಿಗುತ್ತದೆ. ನನಗಾದರೂ ಕೂಡ ಅನಿಸುವುದು ಸ್ವಲ್ಪ ಇನ್‌ಫ್ಲೂಯನ್ಸ್ ಇದ್ದರೆ, ಬಾವಿಗಾಗಿ ಬೇಕಾದಷ್ಟು ಸಾಲ ಪಡೆಯಬಹುದು, ಆದರೆ ಯಾವ ಒಂದು ಒಳ್ಳೆಯ ಉದ್ದೇಶಕ್ಕಾಗಿ ಸರಕಾರ ಸಾಲ ಕೊಟ್ಟರೂ ಬಡವರಾಗಿರುವ ಅನೇಕಜನರಿಗೆ ಒಂದು ಎಕರೆಯಷ್ಟು ಭೂಮಿಯುಳ್ಳವರಿಗೆ 400-500 ರೂಪಾಯಿಗಳಷ್ಟು ಸಾಲ ಸಿಗುತ್ತಿರುವುದರಿಂದ ಅಂತಹವರಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ. ಇದಕ್ಕೆ ಬದಲಾಗಿ ಸರಕಾರದವರು

ಎಲ್ಲೆಲ್ಲಿ ನೀರಿನ ಆಸರೆ ಇರುವ ಜಮೀನಿದೆಯೋ ಅಲ್ಲಿ ಬಾವಿಗಳನ್ನು ತೋಡಲು ನಾವು ಸಾಧ್ಯವೇ ಎನ್ನುವುದನ್ನು ನೋಡಿ ಅದರ ಮೇಲೆ ಇಷ್ಟು ಹಣ ಎಂದು ಖರ್ಚು ಮಾಡಿ ಅದನ್ನು ಪೂರೈಸಿ ಅದನ್ನು ರೈತರಿಗೆ ಕೊಟ್ಟರೆ ಸರಕಾರದ ಹಣಕ್ಕೆ ಸೆಕ್ಯುರಿಟಿ ಇರುತ್ತದೆ ಮತ್ತು ಆ ಹಣವನ್ನು ವಾಪಸ್ಸು ಪಡೆಯಲಿಕ್ಕೆ ಯಾವ ಒಂದು ಅಭ್ಯಂತರವೂ ಇರುವುದಿಲ್ಲ. ರೈತನಿಗೂ ಕೂಡ ನಾಲ್ಕೈದು ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ದೊರೆತು ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನೀರಾವರಿಗೂ ಅನುಕೂಲವಾಗುತ್ತದೆ ಮತ್ತು ಶಾಶ್ವತವಾದ ಪರಿಹಾರ ಮಾಡಬೇಕು ಎಂದು ಸರಕಾರಕ್ಕೆ ಆಗಾಗ್ಗೆ ಹೇಳುತ್ತಲಿದ್ದೇವೆ. ಇದಕ್ಕಾಗಿ ಮಧ್ಯಮ ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿದರೆ ಅದರಿಂದ ಪೂರ್ಣ ಪ್ರಯೋಜನ ಪಡೆಯಬಹುದು ನಮ್ಮಲ್ಲಿ ಹತ್ತು ಮಾಧ್ಯಮ ಎಂದರೆ Medium Type Irrigation Works ಇವೆ. ಇವನ್ನು ತೆಗೆದುಕೊಳ್ಳಬೇಕೆಂದು ಒಂದು ಪ್ಲಾನಿನಲ್ಲಿ ಸೇರಿದ್ದರೂ ಕೂಡ ಮೊದಲನೆ ಯೋಜನೆಯಾಯಿತು, ಎರಡನೆ ಯೋಜನೆಯಾದರೂ ಅದರ ಪ್ರಕಾರ ಒಂದೂ ಸಫಲವಾಗಲಿಲ್ಲ. ಮೂರನೆ ಯೋಜನೆಗಳಾದರೂ ಕೂಡ ಇನ್ನೂ ಯಾವ ಕೆಲಸ ಮಾಡಬೇಕು ಅಥವಾ ಬೇಡವೋ ಎನ್ನುವ ಪರಿಶೀಲನೆಯಲ್ಲೇ ಇದ್ದಾರೆ. ಇದು ಬಹಳ ಮುಖ್ಯವಾಗಿ ಆಗಬೇಕಾದ ಕೆಲಸ. ದೊಡ್ಡ ದೊಡ್ಡ ಯೋಜನೆಗಳಿಗಾಗಿ ಹೆಚ್ಚಿನ ದುಡ್ಡು ಬೇಕು-ಇದರಿಂದ ರೈತನಿಗೆ ಪ್ರಯೋಜನ ದೊರಕಬೇಕಾದರೆ ಹೆಚ್ಚಿನ ಸಮಯ ಬೇಕಾಗುತ್ತದೆ. ಮಧ್ಯಮ ರೀತಿಯ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಿದರೆ ನಾಲ್ಕೈದು ವರ್ಷಗಲ್ಲೇ ರೈತ ಅದರ ಉಪಯೋಗಪಡೆಯಲು ಸಹಾಯವಾಗುತ್ತದೆ. ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು Medium Type of Irrigation Works ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಸರಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಏಕೆಂದರೆ ತಮಗೇ ಗೊತ್ತಿರುವ ಹಾಗೆ ನಾಲ್ಕಾರು ವರ್ಷಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ಜಲಾಶಯ ನಿರ್ಮಾಣವಾಗಲು ಸುಮಾರು ಒಂದೂಕಾಲು ಅಥವಾ ಎರಡೂ ಕಾಲು ಕೋಟಿಯಷ್ಟು ಖರ್ಚು ಮಾಡಿದರೂ ಶಾಶ್ವತವಾದ ಪರಿಹಾರ ಮಾಡುವಂತಾಗುತ್ತದೆ, ಅಭಾವವೂ ಕಡಿಮೆಯಾಗಿ ಹೆಚ್ಚಿನ ಉತ್ಪತ್ತಿಯನ್ನು ಪಡೆಯಲೂ ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಬಗ್ಗೆ ಸರಕಾರ ಹೆಚ್ಚಿನ ಸಹಾನುಭೂತಿಯಿಂದ ಪರಿಶೀಲಿಸಿದರೆ ಇದರಿಂದ ಹೆಚ್ಚಿನ ಪ್ರಯೋಜನ ಪಡೆಯಲನುಕೂಲವಾಗುತ್ತದೆ. ಇದನ್ನು ಕಾರ್ಯತಃ ದಾರಿಗೆ ಬರುವ ರೀತಿಯಲ್ಲಿ ಮಾಡುವುದರ ಮೂಲಕ ರೈತನ ಸ್ಥಿತಿಯನ್ನೂ ಸುಧಾರಿಸಲಿಕ್ಕೆ ಯೋಚನೆ ಮಾಡಬೇಕೇ ಹೊರತು ಬರೀ ಮಾತನಾಡುವುದರ ಮೂಲಕ ವೇದಿಕೆಯ ಮೇಲೆ ಈ ರೀತಿ ಭಾಷಣ ಮಾಡುವುದರ ಮೂಲಕ ಇದನ್ನು ಸಾಧಿಸಿದಂತಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಈ ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕಂಥ ವಿಚಾರದಲ್ಲಿಯೂ ಕೂಡ ಬಹಳ ತಡವಾಗುತ್ತಿದೆ, ರೈತನಿಗೆ ಸುಲಲಿತವಾಗಿ ಸಹಾಯ ದೊರಕುತ್ತಾ ಇಲ್ಲ. ನಮ್ಮ ತಾಲ್ಲೂಕಿನಲ್ಲಿ 500 ಬಾವಿಗಳಿಗೆ, 5 ಎಚ್. ಪಿ. ಕೊಡಬೇಕೆಂದು, ಇಲಾಖೆಗೆ ರೈತರು ದುಡ್ಡು ಕಟ್ಟಿದ್ದಾರೆ. ಎಸ್ಟಿಮೇಟು ಕಳುಹಿಸಿ ಆರೇಳು ತಿಂಗಳಾದರೂ ನೀರಾವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ಕೆಲಸ ಕಾರ್ಯ ಏನೂ ಆಗಿಲ್ಲ. ಹೀಗಾದರೆ ರೈತರ ಗತಿಏನು, ಅವರ ಹಿತಸಾಧನೆಯಾಗುತ್ತದೆಯೆ ಅನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

4-30 P.M.

ಇನ್ನು ಈ ಪಂಪುಸೆಟ್ಟು ಒದಗಿಸತಕ್ಕಂಥ ವಿಚಾರದ ಮೇಲೆ ಹೇಳಬೇಕಾಗಿದೆ. ಯಾರಾದರೂ ಮಾನ್ಯ ಸದಸ್ಯರು ಆಫೀಸಿನಿಂದ ಆಫೀಸಿಗೆ ಕಾಗದದ ಜೊತೆಗೆ ಅಲೆದಾಡಿದರೆ, ಪಂಪುಸೆಟ್ಟು ಒದಗುತ್ತದೆಂದರೆ ಸರಕಾರದವರ ಭಾವನೆಗಳೇ ನನಗೆ ಅರ್ಥವಾಗುವುದಿಲ್ಲ. ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ನಮ್ಮ ತಾಲ್ಲೂಕಿನಲ್ಲಿ ಸುಮಾರು 200 ಜನ ರೈತರು ಅರ್ಜಿ ಹಾಕಿದ್ದಾರೆ. ಆರು ತಿಂಗಳಾದರೂ ಒಬ್ಬರಿಗೂ ಪಂಪುಸೆಟ್ಟು ಬಂದಿಲ್ಲ ತಪ್ಪು ಎಲ್ಲಿದೆ ? ನಮ್ಮ ವ್ಯವಸಾಯ ಮಂತ್ರಿಗಳು ಬಹಳ ಮಾತನಾಡುತ್ತಾರೆ, ಅವರು ಒಳ್ಳೆಯವರೇನೋ ಹೌದು ಆದರೆ ಅವರ ಬರೀ ಒಳ್ಳೆಯತನದಿಂದಲೇ ಕಾರ್ಯರೂಪದಲ್ಲಿ ಕೆಲಸವಾಗುವುದಿಲ್ಲ, ರೈತರ ಹಿತಸಾಧನೆಯಾಗುವುದಿಲ್ಲವೆಂದು ನಾನು ವಿಷಾದಪಡಬೇಕಾಗಿದೆ. ಸರಕಾರ ಮಾಡತಕ್ಕಂಥ ಉಪಕಾರ ನೇರವಾಗಿ, ಬಹಳ ಬೇಗನೆ ಜನರಿಗೆ ಸಿಕ್ಕಿದರೆ ಸಮಾಜವಾದ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಸುಮಾರು 5 ಸಾವಿರ ಪಂಪುಸೆಟ್ಟುಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯೊಳಗೆ ಕೊಡುತ್ತೇವೆಂದು ಹೇಳುತ್ತಾರೇ ಹೊರತು, ಈ ದಿಕ್ಕಿನಲ್ಲಿ ಕೃಷಿಗಾರನಿಗೆ ಏನೂ ದೊರೆತಿಲ್ಲ, ಯಾರ್ಯಾರು ಅಲ್ಲಲ್ಲಿ ಸ್ವಲ್ಪ ಒತ್ತಾಯ, ಒತ್ತಡ ಹಾಕಿ ತೆಗೆದುಕೊಳ್ಳುತ್ತಿದ್ದಾರೋ, ಅಂಥವರಿಗೆ ಅದು ಸಿಗುತ್ತಿದೆಯೇ ಹೊರತು

(ಶ್ರೀ ಜಿ. ವಿ. ಗೌಡ)

ರೈತರು ಮನವಿ ಸಲ್ಲಿಸಿ ತಾನೇ ತಾನಾಗಿ ಸಲೀಸಾಗಿ ಸಿಗುತ್ತದೆಯೆಂದು ಕುಳಿತಿದ್ದರೆ, ಏನೊಂದೂ ಪರಿಹಾರ ಸಿಗುತ್ತಾ ಇಲ್ಲವೆಂದು ತಿಳಿಸಬಯಸುತ್ತೇನೆ.

ಬರಗಾಲದ ಪರಿಸ್ಥಿತಿಗೆ ಆಗಾಗ್ಗೆ ತುತ್ತಾಗತಕ್ಕಂಥ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ಪುನಃ ಪುನಃ ಮಾಡಿ, ಅಲ್ಲಿ ವ್ಯವಸಾಯಕ್ಕೆ ಹೆಚ್ಚು ಪ್ರಾಶಸ್ತ್ಯ ಸರಕಾರ ಕೊಟ್ಟರೆತಾನೆ, ಆ ಪರಿಸ್ಥಿತಿ ತಪ್ಪಿಸುವುದಕ್ಕೆ ಸಾಧ್ಯ? ಏನೋ ಇವತ್ತಿನ ದಿವಸ ಪರಿಹಾರ ಕೊಟ್ಟೆವು, ನಾಳೆ ದಿವಸ ಮಳೆ ಬಂದುಬಿಟ್ಟಿತು, ಎಲ್ಲ ಪರಿಸ್ಥಿತಿಯೂ ಆಗಿ ಹೋಯಿತು ಎಂಬ ಭಾವನೆಯಿಂದ ಕೆಲಸ ಮಾಡಿದರೆ ಈ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವೇ ಇಲ್ಲ. ಇಷ್ಟೊಂದು 40 ಕೋಟಿ ರೂಪಾಯಿಯ ಒಂದು ಯೋಜನೆಯನ್ನು ಹಾಕಿದೆ. ಕೇಂದ್ರ ಸರ್ಕಾರದವರು 40 ಕೋಟಿ ರೂಪಾಯಿವರೆಗೆ ಪರಿಹಾರ ಕಾರ್ಯಗಳಿಗಾಗಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಈಗಾಗಲೇ ಮನವಿ ಕೊಟ್ಟಿದ್ದಾರೆ. 40 ಕೋಟಿ ರೂಪಾಯಿಯೇ ಅಲ್ಲದೆ ಎಷ್ಟು ಬೇಕಾದರೂ ಕೇಂದ್ರ ಸರಕಾರ ಕೊಡಲು ಮುಂದೆ ಬಂದಿದೆ ಎಂದು ಪ್ರಚಾರ ನಡೆದಿದೆ. ಆದ್ದರಿಂದ ರೈತರಿಗೆ ಇಂಥ ಒಂದು ಕಷ್ಟಕಾಲ ಒದಗಿರುವಾಗ ಆ ಸಹಾಯವನ್ನು ಪೂರ್ಣವಾಗಿ ಪಡೆದು ರೈತರಿಗೆ ಪರಿಹಾರ ಕೊಡಲು ಒಂದು ವ್ಯವಸ್ಥೆ ಮಾಡಬೇಕು. ಕೇಂದ್ರ ಸರ್ಕಾರದವರು ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ, ಇನ್ನು ಮೂರು ಕೋಟಿ ರೂಪಾಯಿ ಕೊಡುವುದರಲ್ಲಿದ್ದಾರೆ, ಹೀಗೆ 5 ಕೋಟಿ ರೂಪಾಯಿ ಈಗಾಗಲೇ ಸಿಕ್ಕಿದೆ ಅಂತ ಪ್ರಚಾರವಾಗಿದೆ. ಈ 5 ಕೋಟಿ ರೂಪಾಯಿಗಳಿಗೆ ಯಾವ ಯಾವ ಪರಿಹಾರ ಕಾರ್ಯ ಎಲ್ಲೆಲ್ಲಿ ತೆಗೆದುಕೊಳ್ಳಬೇಕು ಅನ್ನುವುದನ್ನು ಬೇಗ ನಿರ್ಧರಿಸಿ, ಅದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಮಾಡಿ, ರೈತರ ಕಷ್ಟ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಪ್ರಯತ್ನ ಪಡಬೇಕು. ಇವತ್ತಿನ ದಿವಸ ಏನೊಂದು 25 ಸಾವಿರ ರೂಪಾಯಿಯನ್ನು ತಾಲ್ಲೂಕುಗಳಿಗೆ ಹಂಚಿದ್ದೀರೋ ಅವರಿಂದ ಏನೂ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲಿ ತಾಲ್ಲೂಕು ಬೋರ್ಡಿನವರು ಅಥವಾ ರೆವಿನ್ಯೂ ಇಲಾಖೆಯವರು ಎಷ್ಟೊಂದು ಉತ್ಪತ್ತಿ ಮಾಡಲಿಕ್ಕೆ ಎಷ್ಟು ಹಣ ಬೇಕೆಂದು ಅಂದಾಜು ಮಾಡಿದ್ದಾರೋ, ಅದಕ್ಕೂ ಈಗ ಕೊಟ್ಟಿರುವುದಕ್ಕೂ ಏನೂ ಸಂಬಂಧವಿಲ್ಲ. ಹೀಗಾದರೆ ಆಹಾರ ಉತ್ಪತ್ತಿ ಪರಿಸ್ಥಿತಿ ಹೇಗೆ ಉತ್ತಮಗೊಳ್ಳುತ್ತದೆ?

ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ರಿಸೋರ್ಸಸ್‌ಗಳನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಕಾಪರ್ ಸಿಗುತ್ತದೆಂದು ಪರಿಣತರಿಂದ ತಿಳಿದುಬಂದಿದೆ. ಅದನ್ನು ಎಕ್ಸ್‌ಪ್ಲಾಯಿಟ್ ಮಾಡಲು ಸರ್ಕಾರ ಏನೊಂದೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅವರು ಹೇಳಿ ಒಂದು ವರ್ಷದ ಮೇಲಾದರೂ, ಹೀಗೆ ನಿಧಾನಿಸುತ್ತಿರುವುದು ಬಹಳ ಶೋಚನೀಯವಾದ ಸಂಗತಿ. ನಮಗೆ 4 ಸಾವಿರ ಟನ್ ಕಾಪರ್ ಸಿಗಬಹುದೆಂದು ಅಂದಾಜು ಮಾಡಲಾಗಿದೆ.

Mr. SPEAKER.—The Hon'member has to deal with famine.

Sri G. V. GOWDA.—When establishing a factory in a certain area where you get raw materials, you provide employment. ಕಾಪರ್ ನಮ್ಮ ದೇಶದಲ್ಲಿ ಎಲ್ಲಿಯೂ ಸಿಗುತ್ತಿಲ್ಲ. ಅದು ನಮ್ಮ ಪ್ರಾಂತ್ಯದಲ್ಲಿ ಸಿಗುತ್ತದೆಂದು ಪರಿಣತರು ತಿಳಿಸಿದ್ದಾರೆ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ, ಬಹಳ ಜನಕ್ಕೆ ಕೆಲಸ ಸಿಗುತ್ತದೆ, ರಾ ಮೆಟೀರಿಯಲ್ ಸಿಗುತ್ತದೆ, ಅನೇಕ ಜನಕ್ಕೆ ಕೂಲಿ ಸಿಕ್ಕಿ, ವ್ಯವಸಾಯದಲ್ಲಿ ಕೆಲಸ ಮಾಡುವವರಿಗೆ ದುಡ್ಡು ಸಿಗುತ್ತದೆ. ಆದರಿಂದ ಅಕ್ಕಿ, ರಾಗಿ ತೆಗೆದುಕೊಳ್ಳುವುದಕ್ಕೆ ಹಣ ದೊರೆಯುವಂತಾಗುವುದು. ತಾತ್ಕಾಲಿಕ ಪರಿಹಾರದಲ್ಲಿ ಆಹಾರ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಕೃಷಿಗಾರನು ಹಣ ಸಂಪಾದಿಸುವುದಕ್ಕೆ ಆ ಫ್ಯಾಕ್ಟರಿ ಒಂದು ಅವಕಾಶ ಕಲ್ಪಿಸಿಕೊಟ್ಟು, ಅವರ ಆಹಾರ ಸಾಮಗ್ರಿಗಳನ್ನು ಕೊಳ್ಳಲು ಸಾಮರ್ಥ್ಯ ಕೊಡುತ್ತದೆ. ಅವರ ನಿತ್ಯಜೀವನವನ್ನು ಸಾಗಿಸಲಿಕ್ಕೆ ಅದು ಒಂದ ಅವಕಾಶ ಕಲ್ಪಿಸುತ್ತದೆ ತಾತ್ಕಾಲಿಕ ಪರಿಹಾರ ಕೊಡಬೇಕು ಎಂದು ಕೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ನಮಗೆ 20-30 ಸಾವಿರ ರೂಪಾಯಿ ಹಣ ಕೊಡುವುದರ ಮೂಲಕ ಏನೂ ಮಾಡುವುದಕ್ಕಾಗುವುದಿಲ್ಲ. ದೊಡ್ಡ ಮನಸ್ಸುಮಾಡಿ ಕಾಪರ್ ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥ ಪರಿಹಾರ ಕಾರ್ಯವನ್ನು ತೆಗೆದುಕೊಳ್ಳುವ ನಿರ್ಧಾರಕ್ಕೆ ಬಂದು, ಅದಕ್ಕೆ ತಕ್ಕ ವ್ಯವಸ್ಥೆಮಾಡಿ, ಜನರ ಕಷ್ಟ ನೀಗಿಸಬೇಕು.

ಗುಂಡ್ಲುಪೇಟೆ, ಎಳಂದೂರು, ಕೊಳ್ಳೇಗಾಲ ಒಂದು ಬೆಲ್ಟ್ ಆಗಿದೆ. ಅಲ್ಲಿನ ಒಂದು ಕಷ್ಟ ಪರಿಸ್ಥಿತಿಯನ್ನು ವಿವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಅಲ್ಲಿನ ಪರಿಸ್ಥಿತಿ ಗೊತ್ತಿದೆ. ಮೂರನೆಯ ಯೋಜನೆಯೊಳಗೇ ಗುಂಡಲ್ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕು.

ಆ ಪ್ರಾಜೆಕ್ಟಿನ ವಿವರಗಳನ್ನು ಎಕ್ಸಿಕ್ಯೂಟೀವ್ ಇಂಜನಿಯರಿಂದ ತರಿಸಿಕೊಂಡು ಮಂಜೂರಾತಿ ಕೊಡಬೇಕು. ಆ ಕೆಲಸ ಪ್ರಾರಂಭಮಾಡುವುದರಿಂದ ತಾತ್ಕಾಲಿಕ ಪರಿಹಾರವನ್ನು ಕೊಟ್ಟಂತೆ ಆಗುತ್ತದೆ. ಮೂರನೆಯ ಯೋಜನೆಯೊಳಗೆ ಆಗದಿದ್ದರೂ, 4ನೆಯ ಯೋಜನೆಯೊಳಗೆ ಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನಮ್ಮ ರೈತರುಗಳಿಗೆ ಲಾಂಗ್‌ಟರ್ಮ್‌ಲೋನು ಸರಿಯಾದ ರೀತಿಯಲ್ಲಿ ಸಿಗುತ್ತಾ ಇಲ್ಲ. ಅದೇನಾದರೂ ಮದ್ರಾಸಿನಲ್ಲಿದ್ದಂಥ ನೀತಿ ನಿಯಮಗಳ ದೆಸೆಯಿಂದಲೋ ಏನೋ, ಅನೇಕ ಕಡೆ ಸಿಗಲು ಕಷ್ಟವಾಗುತ್ತಿದೆ. ಬೇರೆ ಬೇರೆ ತಾಲ್ಲೂಕುಗಳಿಗೆ 15 ಲಕ್ಷ ರೂಪಾಯಿ ಲಾಂಗ್‌ಟರ್ಮ್ ಲೋನ್ ಸಿಕ್ಕಿದ್ದರೂ, ನಮ್ಮ ತಾಲ್ಲೂಕಿಗೆ 6–7 ವರ್ಷಗಳಿಂದ 50 ಸಾವಿರ ರೂಪಾಯಿ ಸಿಕ್ಕಿರ ಬಹುದು. ಇದಕ್ಕೆ ಏನು ಕಾರಣವೋ ಗೊತ್ತಾಗಿಲ್ಲ. ಅನೇಕ ಸಲ ಈ ಸಂಸ್ಥೆಗೆ ಸಂಬಂಧಪಟ್ಟ ಅಧ್ಯಕ್ಷರನ್ನೂ ಕೇಳಿದ್ದೇನೆ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಅಧ್ಯಕ್ಷರು ಎಲ್ಲಾ ಕಡೆಯೂ ಸರಿಯಾದ ರೀತಿಯಲ್ಲಿ ಮಾಡುತ್ತೇವೆಂದು ಹೇಳಿದರು. ಹೀಗಿದ್ದೂ, ಇದು ಏನು ಕಾಂಪ್ಲಿಕೇಶನ್ ಆಗಿದೆಯೋ, ನನಗೆ ಅರ್ಥವಾಗುತ್ತಿಲ್ಲ. ರೈತರಿಗಂತೂ ನಮ್ಮ ಕಡೆ ಇದರ ಪ್ರಯೋಜನ ಸಿಗುತ್ತಾ ಇಲ್ಲ. ಅಲ್ಲಿರತಕ್ಕಂಥ ರೈತರು ತಮ್ಮ ಋಣಬಾಧೆ ನೀಗಲಿಕ್ಕೆ ಲಾಂಗ್‌ಟರ್ಮ್ ಮಂಜೂರುಮಾಡುವ ಒಂದು ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಸರ್ಕಾರ ಮಾಡಬೇಕು.

ಜಮೀನುದಾರಿ ಅಬಾಲಿಷನ್, ಇನಾಮುಗಳ ಅಬಾಲಿಷನ್ ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಶಿವನ ಸಮುದ್ರ ಜಹಗೀರ್ ಅಂತ ಇನ್ನೂ ಒಂದು ಜಹಗೀರಿ ಇದೆ. ಬೇಕಾದಷ್ಟು ಎಕರೆ ಕಾಡು ಅಲ್ಲಿಗೆ ಸೇರಿದೆ. ನಾಲ್ಕಾರು ಸಾವಿರ ಎಕರೆ ಜಮೀನೂ ಇನ್ನೂ ಆ ಜಹಗೀರುದಾರರ ವಶದಲ್ಲಿಯೇ ಇದೆ. ಆ ಜಹಗೀರುದಾರರು ಎರಡು ಗ್ರಾಮಗಳ ಕಂದಾಯವನ್ನೂ ವಸೂಲು ಮಾಡುತ್ತಾ ಇದ್ದಾರೆ ಅದನ್ನು ನಿರ್ಮೂಲ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಇನ್ನೂ ಮಾಡಿಲ್ಲ. ಅಲ್ಲಿರತಕ್ಕಂಥ ರೈತರಿಗೆ ಸರ್ಕಾರ ನೇರವಾದ ಆಶ್ರಯ ಕೊಡಬೇಕು. ಬೇರೆ ಕಡೆ ಇರುವಂಥ ರೈತರು ಪಡೆದುಕೊಂಡು ಹಕ್ಕನ್ನೂ, ಸೌಕರ್ಯ, ಸೌಲಭ್ಯ, ಪ್ರಯೋಜನವನ್ನೂ ಆ ಜಹಗೀರಿ ರೈತರೂ ಪಡೆದುಕೊಳ್ಳಬೇಕು, ಅವರಿಗೆ ಆ ಪ್ರಯೋಜನ ಸಿಗುತ್ತಿಲ್ಲ, ಅದನ್ನು ಕೇಳುವ ಹಕ್ಕೂ ಇಲ್ಲ. ಈ ರೈತರ ಸ್ಥಿತಿ ಎಷ್ಟು ಶೋಚನೀಯವಾಗಿದೆ ಅನ್ನುವುದನ್ನು ತಾವು ಯೋಚನೆ ಮಾಡಬೇಕು. ಶಿವನ ಸಮುದ್ರ ಜಹಗೀರಿಯನ್ನು ನಿರ್ಮೂಲ ಮಾಡತಕ್ಕ ಕೆಲಸವನ್ನು ಆದಷ್ಟು ಬೇಗ ಮಾಡಬೇಕು. ಭೂ ಸುಧಾರಣೆಯನ್ನು ಕಾರ್ಯಗತ ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಇಂಥ ಒಂದು ಕಾಲದಲ್ಲಿ ಇನ್ನೂ ಒಂದು ಜಹಗೀರಿಯನ್ನು ಇಟ್ಟುಕೊಂಡಿದ್ದೀರ ಅಂದರೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಈ ಜಹಗೀರಿಯನ್ನು ಆದಷ್ಟು ಬೇಗ ರದ್ದು ಮಾಡಬೇಕು.

ಮೊದಲೇ ಹೇಳಿದ ರೀತಿಯಲ್ಲಿ ಹೆಚ್ಚು ಹೆಚ್ಚು lift irrigation works ಕಾವೇರಿ ದಂಡೆಯ ಕೆಳಗಿರುವ ಜನಗಳಿಗೋಸ್ಕರ ಮಾಡುವುದಕ್ಕೆ ಸಾಧ್ಯ. ಹೊಗೇನಕಲ್ ಪ್ರಾಜೆಕ್ಟ್ ವಿಷಯ ಏನಾಗಿದೆಯೋ ಗೊತ್ತಿಲ್ಲ. ಮೈಸೂರು ಸರ್ಕಾರ ಬೇರೆ ಪ್ರಪೋಸಲ್ ಕಳಿಸಿದ್ದು ಅದನ್ನು ಮದ್ರಾಸ್ ಸರ್ಕಾರ ಒಪ್ಪುವುದಾದರೆ ಅದನ್ನು ತೆಗೆದುಕೊಳ್ಳಬಹುದು. ಆದಷ್ಟು ಬೇಗ ಈ ಕೆಲಸವನ್ನಾಗಲೀ ಅಥವಾ ಮೇಕೆದಾಟು ಯೋಜನೆ ಅಲ್ಲಿ ಸುಮಾರು 12 ಲಕ್ಷ ಕಿಲೊವಾಟ್ ವಿದ್ಯುತ್ತು ಉತ್ಪಾದನೆ ಮಾಡಬಹುದೆಂದು ಪರಿಣತರು ಅಂದಾಜು ಮಾಡಿದ್ದಾರೆ—ಇದನ್ನಾದರೂ ತೆಗೆದುಕೊಂಡರೆ ಆ ಪ್ರದೇಶ ಅಭಿವೃದ್ಧಿಯಾಗುವುದರ ಜೊತೆಗೆ ನಮ್ಮ ರಾಜ್ಯಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನೂ ತಯಾರು ಮಾಡುವುದಕ್ಕೆ ಅವಕಾಶ ಸಿಕ್ಕುತ್ತದೆ. ಈ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದರಿಂದ ರಿವರ್ ಒಪ್ಪಂದಕ್ಕೆ ಯಾವ ವಿಧದಲ್ಲಿಯೂ ಧಕ್ಕೆ ಬರುವುದಿಲ್ಲ. ನಮಗೆ ಸಾಕಷ್ಟು ನೀರನ್ನು ಮೇಲುಗಡೆ ಉಪಯೋಗಿಸುವುದಕ್ಕೆ ಅವಕಾಶವಾಗಿ ಪೂರ್ತಿ ನೀರಿನ ಉಪಯೋಗ ಸಿಕ್ಕುತ್ತದೆಂದು ತಿಳಿಸುತ್ತೇನೆ. ಹೈಡೆಲ್ ಪ್ರಾಜೆಕ್ಟ್ ತೆಗೆದುಕೊಂಡರೆ upper region ನಲ್ಲಿ ಉಪಯೋಗಿಸತಕ್ಕ ನೀರಿನ ಪ್ರಮಾಣಕ್ಕೆ ಧಕ್ಕೆ ಬರುತ್ತದೆಂಬ ಅನುಮಾನ ಇರಬಹುದು. ಆ ಅನುಮಾನ ಬೇಕಾಗಿಲ್ಲ, ಹೆಚ್ಚಿಗೆ ನೀರನ್ನು ಉಪಯೋಗಿಸುವುದಕ್ಕೆ ಅವಕಾಶವಿದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ನಮ್ಮ ತಾಲ್ಲೂಕಿನಲ್ಲಿ ಬಹಳ ಕಡಮೆ ವೆಚ್ಚದಲ್ಲಿ ಬಹಳ ಶೀಘ್ರವಾಗಿ ಆಗತಕ್ಕ ನಾಲ್ಕಾರು ಯೋಜನೆಗಳು ಇವೆ, ಈ ಜಲಾಶಯಗಳ ನಿರ್ಮಾಣ ಆದಷ್ಟು ಬೇಗ ಆಗುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ, ಕೊನೆಯ ಪಕ್ಷ ಒಂದನ್ನಾದರೂ ತುರ್ತಾಗಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗಿನ ಅಭಾವ ಪರಿಸ್ಥಿತಿಯಲ್ಲಿ ರೈತರನ್ನು ಕಂಟ್ರಿಬ್ಯೂಷನ್ ಕೊಡಿ ಎಂದು ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. Preliminary works ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡಿ, ಮುಂದುವರೆಸಿದರೆ ಆಗ ರೈತರಿಂದ ಕಂಟ್ರಿಬ್ಯೂಷನ್ ವಸೂಲ್ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸಿ, ಆದಷ್ಟು ಬೇಗ......

ಶ್ರೀ ಎಸ್. ನಿಜಲಿಂಗಪ್ಪ.—ಕೆಲಸ ಷುರು ಮಾಡಿದರೆ ಕಂಟ್ರಿಬ್ಯೂಷನ್ ಕೊಡಿಸುವುದಾಗಿ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಜಿ. ವಿ. ಗೌಡ.—ಕೊನೆಯ ಪಕ್ಷ ಎಂಟು ಹತ್ತು ಎಕರೆ ಇರುವ ದೊಡ್ಡ ದೊಡ್ಡ ರೈತರಾದರೂ ಕೊಡುತ್ತಾರೆ. ಹೊಸದಾಗಿ ಅಚ್ಚುಕಟ್ಟು ಮಾಡಿಕೊಳ್ಳುವವರಿಂದ ವಸೂಲ್ಮಾಡುವುದು ಕಷ್ಟವಾಗಬಹುದು. ಏಳು ಕೆರೆಗಳಿಂದ ಐದು ಸಾವಿರ ಎಕರೆ ಅಚ್ಚುಕಟ್ಟಿದೆ. ಅದರಿಂದ ಕಂಟ್ರಿಬ್ಯೂಷನ್ ವಸೂಲ್ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡಬಹುದು. ಹೊಸದಾಗಿ ಬಂಜರು ಭೂಮಿಯನ್ನು ಸಾಗುವಳಿಗೆ ತರುವುದಕ್ಕೆ ಬಹಳ ಖರ್ಚಾಗುವುದರಿಂದ ಅಂಥವರು ಕೊಡಲು ಸಾಧ್ಯವಾಗಲಾರದು. ಪ್ರಾಜೆಕ್ಟನ್ನು ಕಟ್ಟಿ ಕಾಲುವೆಗಳ ಮೂಲಕ ನೀರನ್ನು ಹರಿಸುವುದಾದರೆ ಕೆರೆ ಬಯಲಿನಲ್ಲಿ ಬರುವ ಜಮೀನನ್ನು ಸಾಗುವಳಿಗೆ ಕೊಡಬಹುದು. ಸರ್ಕಾರ ಇದನ್ನು ಹರಾಜು ಮಾಡಬಹುದು. ಇದರಿಂದ ಸುಮಾರು 50 ಲಕ್ಷ ರೂಪಾಯಿ ಬರಬಹುದು. ಇದರಿಂದ ಸರ್ಕಾರಕ್ಕೆ ವೆಚ್ಚ ಕಡಮೆಯಾಗಿ ಲಾಭದಾಯಕವಾಗಿ ಆಗುವ ಪರಿಸ್ಥಿತಿ ಇದೆ. ಇದನ್ನು ಸ್ವಲ್ಪ ಯೋಚನೆ ಮಾಡಿ ಈ ಕೆಲಸ ಕಾರ್ಯಗಳನ್ನು ಮಾಡುವುದರ ಮೂಲಕ ಹೆಚ್ಚಿನ ಸುಧಾರಣೆಯನ್ನು ಮಾಡಲಿಕ್ಕೆ ಸಾಧ್ಯವೆಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ನಮ್ಮ ಕಡೆ ಸುಮಾರು ಒಂದು ಲಕ್ಷ ಎಕರೆಗೆ ಮೇಲ್ಪಟ್ಟು ಜಮೀನಿನಲ್ಲಿ ರಾಗಿ ಹಾಕುತ್ತಾರೆ. ಅಲ್ಲಿ ರಾಗಿಯೇ ಮುಖ್ಯ ಬೆಳೆ. 35 ಸಾವಿರ ಎಕರೆಯಲ್ಲಿ ಹಿಪ್ಪನೇರಳೆ ಹಾಕುತ್ತಾರೆ. ಮಳೆ ಬಾರದೆ ಈ ಎರಡು ಬೆಳೆಗಳೂ ಆಗುವುದಿಲ್ಲ. ಇನ್ನೂ ಇರತಕ್ಕ 5 ಸಾವಿರ 10 ಸಾವಿರ ಎಕರೆ ನೀರಾವರಿ ಜಮೀನಿನಲ್ಲಿ ಆಗತಕ್ಕ ಫಸಲು ಕಡಮೆಯಾಗುತ್ತದೆ. ಈ ದೃಷ್ಟಿಯಿಂದ ಹೆಚ್ಚಿನ ಪರಿಹಾರಕ್ಕೆ ನಮ್ಮ ಪ್ರದೇಶ ಅರ್ಹತೆಯನ್ನು ಪಡೆದಿದೆ ಎಂದು ತಿಳಿಸುತ್ತಿದ್ದೇನೆ.

ಜಾನುವಾರುಗಳಿಗೆ ಕುಡಿಯುವ ನೀರಿಗೆ ಕಷ್ಟವಾಗುವುದಾದರೆ, ಪರಿಸ್ಥಿತಿ ಹೇಗಿದೆ ಎಂದು ಊಹಿಸಿಕೊಳ್ಳಬಹುದು. ಮೇವಿನ ಅಭಾವ ಬಹಳವಾಗಿದೆ. ಹೊಸ ಮೇವು ಮಳೆ ಬಾರದ್ದರಿಂದ ಬೆಳೆದಿಲ್ಲ. ರೈತರ ಹತ್ತಿರ ಹುಲ್ಲು ಇಲ್ಲ. ಹೋದ ವರ್ಷವೂ ಚೆನ್ನಾಗಿ ಫಸಲಾಗದೆ ಹುಲ್ಲು ಇಲ್ಲ, ಇದರಿಂದ ರೈತರಿಗೆ ಜಾನುವಾರುಗಳನ್ನು ಕಾಪಾಡಲಿಕ್ಕೆ ಆಹಾರವನ್ನು ಒದಗಿಸಲಿಕ್ಕೆ ಕಷ್ಟ ಬಂದಿದೆ. ಹುಲ್ಲನ್ನು ಒದಗಿಸತಕ್ಕ ವ್ಯವಸ್ಥೆ ಕೂಡ ಈ ಪ್ರದೇಶದಲ್ಲಿ ಆಗಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಗಡಿಯಲ್ಲಿರುವ ಗ್ರಾಮಗಳು ಬಹಳ ಹಿಂದುಳಿದಿವೆ. ಇವುಗಳ ಅಭಿವೃದ್ಧಿಗೆ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಯೋಜನಾ ಕಾರ್ಯಗಳಲ್ಲಿ ಬಹು ಭಾಗವನ್ನು ಈ ಪ್ರದೇಶಗಳಿಗೆ ಉಪಯೋಗಿಸಿ ಅವೂ ಪ್ರಗತಿಯಾಗುವಂತೆ ಮಾಡಬೇಕೆಂದೂ ಅದಕ್ಕೆ ಒಂದು ಯೋಜನೆಯನ್ನೂ ಹಾಕಬೇಕೆಂದೂ ಸೂಚಿಸುತ್ತೇನೆ. ಇಲ್ಲದೆ ಇದ್ದರೆ ಆ ಪ್ರದೇಶಗಳ ಸುಧಾರಣೆ ಆಗಲಿಕ್ಕೆ ಸಾಧ್ಯವಿಲ್ಲ.

ಈ ಕೆಲಸಗಳೆಲ್ಲವನ್ನೂ ಸರ್ಕಾರ ಸಾಧ್ಯವಾದಮಟ್ಟಿಗೂ ರೈತರ ಹಿತ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ತೆಗೆದುಕೊಳ್ಳುತ್ತಾರೆಂಬ ಆಶಾಭಾವನೆಯನ್ನಿಟ್ಟುಕೊಂಡು, ನನ್ನ ಮಾತನ್ನು ಮುಗಿಸುತ್ತೇವೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ) ಮಾನ್ಯ ಸಭಾಪತಿಗಳೇ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ದೇಶಕ್ಕೆ ಒದಗಿರುವ, ದೇಶದಲ್ಲಿರುವ ಪರಿಸ್ಥಿತಿಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ ಮತ್ತು ಏನೇನು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎನುವುದನ್ನು ಕೂಡ ಮಾನ್ಯ ಸಭೆಗೆ ಸಲಹೆ ಮಾಡಿದ್ದಾರೆ. ಮುಖ್ಯವಾಗಿ ಮಳೆ ಈ ವರ್ಷ ಬಾರದೆ ಇದ್ದುದು ಬಹಳ ಆಶ್ಚರ್ಯವಾಗಿದೆ. ಏಕೆಂದರೆ ಋತು ನಿಯಮಗಳು ಬದಲಾಯಿಸುತ್ತಿವೆ. ಯಾವ ಕಾಲದಲ್ಲಿ ಯಥೇಚ್ಛವಾಗಿ ಮಳೆ ಬರಬೇಕೋ ಆ ಕಾಲದಲ್ಲಿ ನಾವು ಬೇಸಿಗೆಯ ತಾಪವನ್ನನುಭವಿಸುತ್ತಿದ್ದೇವೆ. ಮಳೆ ಬಾರದೆ ಇರುವುದಕ್ಕೆ ಕಾಡುಗಳನ್ನು ಕಡಿದು ಸಾಗುವಳಿಗೆ ಕೊಟ್ಟದ್ದು ಕಾರಣವೋ ಅಥವಾ ಇನ್ನು ಯಾವ ಕಾರಣವೋ ಗೊತ್ತಿಲ್ಲ. ಒಟ್ಟಿನಲ್ಲಿ ಇಡೀ ಸಂಸ್ಥಾನದಲ್ಲಿ ಎಷ್ಟು ತೊಂದರೆ ಯಾಗಿದೆ ಎಂದರೆ ಎಷ್ಟು ಹೇಳಿದರೂ ಸಾಲದು. ದೇಶದಲ್ಲಿ ಕ್ಷಾಮ ನಿವಾರಣೆಗೋಸ್ಕರ ಸರ್ಕಾರದವರು ಕೈಕೊಳ್ಳಬೇಕಾದ ಕಾರ್ಯಗಳನ್ನು ಸೂಚನೆಯನ್ನು ಮಂಡಿಸಿದಂಥ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ತಿಳಿಸಿದ್ದಾರೆ. ಆದರೆ ತಾತ್ಕಾಲಿಕವಾಗಿ ನಾವು ಮಾಡತಕ್ಕ ಕೆಲಸಗಳನ್ನು ಒಂದು ಗುಂಪಿಗೆ ಸೇರಿಸಿ ಶಾಶ್ವತವಾದ ಪರಿಹಾರವನ್ನು ಕಲ್ಪಿಸತಕ್ಕ ಕೆಲಸಗಳನ್ನೂ ಕೂಡ ಮಾಡತಕ್ಕದ್ದು ಬಹಳ ಮುಖ್ಯವಾದ ವಿಷಯ. ತಾತ್ಕಾಲಿಕವಾಗಿ ಸರ್ಕಾರದವರು ಈ ಕ್ಷಾಮ ಇರತಕ್ಕ ಕಡೆಗಳಲ್ಲಿ ಏನು ಕಾಮಗಾರಿ ಕೆಲಸಗಳನ್ನು ಕೈಕೊಳ್ಳುತ್ತಾರೆಯೋ ಮತ್ತು ಯಾವ ಕೆಲಸ ಕಾರ್ಯಗಳನ್ನು ಮಾಡುತ್ತಾರೆಯೋ ಅದು ಬಹಳ ಮುಖ್ಯವಾದುದು. ಅನೇಕ ಜನ ಇವತ್ತಿನ ದಿವಸ ಹೊಟ್ಟೆಗಿಲ್ಲದೆ ಕಷ್ಟಪಡುವುದಕ್ಕಿಂತಲೂ ಹೆಚ್ಚಾಗಿ ಜಾನುವಾರುಗಳಿಗೆ

ಹುಲ್ಲು ಇಲ್ಲದೆ ಕಷ್ಟ ಬಹಳ. ಕೆರೆಕಟ್ಟೆಗಳಲ್ಲಿ ನೀರಿಲ್ಲದೆ ದನ ಕರುಗಳಿಗೆ ನೀರನ್ನು ಪಡೆಯುವುದಕ್ಕೆ ಅಸಾಧ್ಯವಾಗಿ ಅವೆಲ್ಲ ಬತ್ತಿ ಹೋಗಿವೆ. ಜನತೆಯ ಮುಂದೆ ಬಹಳ ಕಠಿಣವಾದ ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿಯನ್ನು ಪಾರುಗಾಣಿಸುವುದಕ್ಕೆ ಸರ್ಕಾರದವರು ತೀವ್ರವಾಗಿ ಆಲೋಚಿಸಿ ತಾತ್ಕಾಲಿಕ ವಾಗಿ ಹೆಚ್ಚು ರೀತಿಯಲ್ಲಿ ಸಹಾಯವನ್ನು ಮಾಡತಕ್ಕದ್ದು ಬಹಳ ಮುಖ್ಯವಾದ ವಿಚಾರ. ಒಂದು ತಾಲ್ಲೂಕಿಗೆ 15-20 ಸಾವಿರ ರೂಪಾಯಿಗಳ ಟೋಕನ್ ಗ್ರ್ಯಾಂಟ್ ಕೊಡುವುದರಿಂದ ಸಮಸ್ಯೆ ಪರಿ ಹಾರವಾಗಲಾರದು ಎನ್ನುವ ಮಾತನ್ನು ನಾನು ಇಲ್ಲಿ ಒತ್ತಿ ಹೇಳುತ್ತೇನೆ. ನಾನು ರೆವೆನ್ಯೂ ಮಂತ್ರಿಗಳ ಕೂಡ ಮಾತನಾಡಿದಾಗ ಅವರು ಹೇಳಿದರು. ಡೆಪ್ಯುಟಿ ಕಮಿಷನರುಗಳ ಸಭೆಯನ್ನು ಕರೆದು, ಅಲ್ಲಿ ಈ ವಿಷಯವನ್ನು ಚರ್ಚೆ ಮಾಡಿ ಪ್ರತಿಯೊಂದು ಜಿಲ್ಲೆಯ ಪರಿಸ್ಥಿತಿಯನ್ನು ಅವರಿಂದ ತಿಳಿದು, ಮಂತ್ರಿಮಂಡಲ ಅದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಷಯವನ್ನು ಆಲೋಚನೆ ಮಾಡುತ್ತಿದ್ದೇನೆಂದು ಭರವಸೆಕೊಟ್ಟರು. ತಾತ್ಕಾಲಿಕವಾಗಿ ಮಾಡತಕ್ಕ ಪರಿಹಾರ ಕಾರ್ಯಗಳಲ್ಲಿ ಹಣವನ್ನು ವೆಚ್ಚಮಾಡಿ ಕಾಮಗಾರಿ ಕೆಲಸವನ್ನು ಮಾಡಿ ಜನಗಳಿಗೆ ದುಡ್ಡು ಸಿಕ್ಕುವಂತೆ ಮಾಡಿ, ಅದರಿಂದ ಜನ ಆಹಾರ ಧಾನ್ಯಗಳನ್ನು ಕೊಂಡು ಜೀವನ ಸಾಗಿಸುವುದಕ್ಕೆ ವ್ಯವಸ್ಥೆ ಮಾಡುವುದಲ್ಲದೆ ಆಹಾರ ಧಾನ್ಯಗಳನ್ನು ಕೊಡತಕ್ಕ ವಿಷಯದಲ್ಲಿ ಸೊಸೈಟಿಗಳನ್ನು ಪ್ರಾರಂಭ ಮಾಡಿ ಆಹಾರ ಧಾನ್ಯಗಳು ಸರಿಯಾದ ಬೆಲೆಗೆ ಸರಿಯಾಗಿ ಸಿಕ್ಕುವಂತೆ ಕೆಲಸ ಮಾಡ ತಕ್ಕದ್ದೂ ಬಹಳ ಮುಖ್ಯವಾದುದು.

ಎರಡನೆಯದಾಗಿ ಜಮೀನಿರತಕ್ಕವರಿಗೆ, ಯಾರು ವ್ಯವಸಾಯದ ಬಾವಿಗಳನ್ನು ತೆಗೆದಿರು ತ್ತಾರೋ ಅವರು ವಿದ್ಯುಚ್ಛಕ್ತಿ ಪಂಪುಗಳ ಮೂಲಕ ನೀರು ಸರಬರಾಜು ಮಾಡಿಕೊಳ್ಳುವಂಥ ಕೆಲಸ ವನ್ನೂ ಬಹಳ ತುರ್ತಾಗಿ, ಬಹಳ ಹೆಚ್ಚಿನ ಶ್ರದ್ಧೆಯಿಂದ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಅಪೇಕ್ಷೆ ಪಡುತ್ತೇನೆ. ನಂಜನಗೂಡು ತಾಲ್ಲೂಕಿನಲ್ಲಿ ಉದಾಹರಣೆ ಹೇಳುವುದಾದರೆ 60-70 ಜನ I.P. sets ಬೇಕೆಂದು ಕೇಳಿದರೆ ಇಬ್ಬರಿಗೆ ಮಾತ್ರ ಸಿಕ್ಕಿದೆ. ಇಡೀ ಸಬ್ ಡಿವಿಷನ್ ತೆಗೆದುಕೊಂಡರೆ. ಕೊಳ್ಳೆಗಾಲ ತಾಲ್ಲೂಕಿಗೆ ಒಂದು, ಗುಂಡ್ಲು ಪೇಟೆ ತಾಲ್ಲೂಕಿಗೆ ಎರಡು, ನಂಜನಗೂಡು ತಾಲ್ಲೂಕಿಗೆ ಎರಡು, ಯಳಂದೂರು ತಾಲ್ಲೂಕಿಗೆ ಹತ್ತು ಹೀಗೆ ಕೊಟ್ಟಿದ್ದಾರೆ. ಅನೇಕ ವರ್ಷಗಳಿಂದಲೂ ಜನ ಅರ್ಜಿ ಹಾಕಿದರೂ, ಹಣ ಡಿಪಾಜಿಟ್ ಮಾಡಿದ್ದರೂ ಏಕೆ ವಿದ್ಯುತ್ತನ್ನು ಕೊಟ್ಟಿಲ್ಲವೆಂದು ವ್ಯವಸಾಯ ಮಂತ್ರಿಗಳನ್ನು ಕೇಳಿವೆ ಮತ್ತು ವಿದ್ಯುಚ್ಛಕ್ತಿ ಶಾಖೆಯ ಉಪ ಮಂತ್ರಿಗಳಿಗೂ ಈ ವಿಷಯವನ್ನು ತಿಳಿಸಿದಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇವೆಂದು ಹೇಳಿದರು. I.P. sets ಬೇಗ ಕೊಟ್ಟರೆ ರೈತರು ಸಾಕಾದಷ್ಟು ಶ್ರದ್ಧೆವಹಿಸಿ- ಇಂಥ ಕ್ಷಾಮ ಪರಿಸ್ಥಿತಿಯಲ್ಲಿ ಕೂಡ ಆಹಾರವನ್ನು ಬೆಳೆದು ಜನಗಳಿಗೆ ಮತ್ತು ಜಾನುವಾರುಗಳಿಗೆ ಅನುಕೂಲ ಮಾಡತಕ್ಕಂಥ ಪರಿಸ್ಥಿತಿಯನ್ನುಂಟು ಮಾಡುವುದು ಮುಖ್ಯವಾದ ವಿಚಾರವಾಗಿದೆ. I.P. Sets ಆದಷ್ಟು ಜಾಗ್ರತೆ ರೈತರಿಗೆ ಒದಗಿಸ ತಕ್ಕ ಕೆಲಸವನ್ನು ಸರ್ಕಾರ ತುರ್ತಾಗಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಎರಡನೇಯದಾಗಿ ದುಡ್ಡಿನ ಅನುಕೂಲತೆ ಒದಗಿಸಿಕೊಟ್ಟು ತನ್ಮೂಲಕ ಸಣ್ಣ ಸಣ್ಣ ಕೆರೆಗಳ ಜೀರ್ಣೋದ್ಧಾರ ಕೆಲಸ ತೀವ್ರವಾಗಿ ಮಾಡಿಸಬೇಕು. ಇದರಿಂದ ರೈತರಿಗೆ ಬಹಳ ಅನುಕೂಲ ವಾಗುತ್ತದೆ. ಮೀಡಿಯಂ ಇರಿಗೇಷನ್ ಬಗ್ಗೆ ಸರಕಾರದ ಒಂದು ಸ್ಕೀಂ ಏನು ಇದೆಯೋ ಅದರಿಂದ ಶಾಶ್ವತವಾಗಿ ಕ್ಷಾಮ ನಿವಾರಣೆ ಕೆಲಸ ಮಾಡತಕ್ಕದ್ದು ಒಳ್ಳೆಯದು ಎಂದು ಅನಿಸುತ್ತದೆ. ಸುವರ್ಣಾವತಿ ಪ್ರಾಜೆಕ್ಟ್ ಎಸ್ಟಿಮೇಟು ಆಗಿದ್ದರೂ ಕೂಡ ಅದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲ ಅದನ್ನು ಸೇರಿಸಬೇಕಾಗಿತ್ತು. ಈ ಸುವರ್ಣಾವತಿ ಯೋಜನೆಯಿಂದ ಹತ್ತಾರು ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ. ಮತ್ತು ಶಾಶ್ವತವಾದ ಪರಿಹಾರ ದೊರೆಯುತ್ತದೆ. ಇದಲ್ಲದೆ ದೊಡ್ಡ ನೀರಾವರಿ ಯೋಜನೆಯಾಗಿರುವ ಕಪಿಲಾ ಪ್ರಾಜೆಕ್ಟಿನಿಂದ ಅರವತ್ತು ಸಾವಿರ ಎಕರೆ ಜಮೀನು ನೀರಾವರಿಗೆ ಅನುಕೂಲವಾಗುತ್ತದೆ. ಅಲ್ಲದೆ ಶಾಶ್ವತವಾಗಿ ಪರಿಹಾರ ಕೊಡತಕ್ಕಂಥಾದ್ದಾಗಿದೆ. ಇಂಥ ದೊಡ್ಡದೊಡ್ಡ ಪ್ರಾಜೆಕ್ಟುಗಳ ಬಗ್ಗೆ ಕಾಲ ವಿಳಂಬ ಮಾಡದೆ ತೀವ್ರವಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಬರಬೇಕು. ಕ್ಷಾಮ ಬಂದು ತೊಂದರೆಯಾಗು ವುದನ್ನು ತಪ್ಪಿಸುವುದಕ್ಕೆ ಇವು ಶಾಶ್ವತವಾದ ಪರಿಹಾರೋಪಾಯಗಳಿವೆ. ಹೆಚ್ಚು ಮುತವರ್ಜಿ ವಹಿಸುವುದು ಅಗತ್ಯವಾಗಿದೆ. ಇವುಗಳ ಸರ್ವೆ ನಡೆಸಿ ಜನಗಳ ಹಿತದೃಷ್ಟಿಯಿಂದ ಜಾಗ್ರತೆ ಕೆಲಸ ಕಾರ್ಯಗಳನ್ನು ಮಾಡಿಸಬೇಕಾದುದು ಬಹಳ ಮುಖ್ಯವಾಗಿದೆ. ಕ್ಷಾಮ ದೇಶದಲ್ಲಿ ಆಗಿಂದಾಗ್ಗೆ ಬರುತ್ತಲೇ ಇದೆ. ಅದರ ನಿವಾರಣೆಗೆ ತಾತ್ಕಾಲಿಕ ಪರಿಹಾರ ಮಾಡುವುದಕ್ಕಿಂತ ಶಾಶ್ವತವಾಗಿ ತಲೆಯೆತ್ತಬಾರದ ಹಾಗೆ ಮಾಡಲು ಯೋಚನೆ ಮಾಡಬೇಕು. ನಮ್ಮ ಸರಕಾರ ಕೇಂದ್ರದಿಂದ ಹೆಚ್ಚಿನ ಹಣ ಸಹಾಯ ಪಡೆದು ನೀರಾವರಿ ಯೋಜನೆಗಳನ್ನು ಮಾಡಬೇಕು. ಇವತ್ತಿನ ದಿವಸ ದೇಶದಲ್ಲಿ ರೈತ ಬಹಳ ಕಷ್ಟಪಟ್ಟು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿಯಿಂದಲೇ ವ್ಯವಸಾಯ ಮಾಡುತ್ತಿದ್ದಾನೆ. ಆಧುನಿಕ ಪರಿಸ್ಥಿತಿಗೆ ಬದಲಾಯಿಸಿಕೊಂಡು

(ಶ್ರೀ ಡಿ. ಎಂ. ಸಿದ್ದಯ್ಯ)

ನೂತನ ಪದ್ಧತಿಯಿಂದೆ ವ್ಯವಸಾಯ ಮಾಡುವ ಹಾಗೆ ಮಾಡಬೇಕು. ರೈತನಿಗೆ ಒಂದು ವರ್ಷದಲ್ಲಿ 365 ದಿವಸ ಕೆಲಸವಿರುವುದಿಲ್ಲ. ನವ ನಾಗರೀಕತೆಯಿಂದ ಮನುಷ್ಯನ ಬೇಡಿಕೆಗಳು ಹೆಚ್ಚುತ್ತಲೇ ಇವೆ. ಆದರೆ ಅದೇ ಪ್ರಕಾರ ಉತ್ಪತ್ತಿ ಹೆಚ್ಚಿಲ್ಲ. ಬೇರೆ ಕ್ಷೇತ್ರದಲ್ಲಿ ಫ್ಯಾಕ್ಟರಿ, ವ್ಯಾಪಾರ ಇಟ್ಟುಕೊಂಡ ವರಿಗೆ ಉತ್ಪತ್ತಿ ಹೆಚ್ಚುತ್ತಿದೆ. ಆದರೆ ರೈತನ ಜೀವನಮಟ್ಟ ಎಲ್ಲಿ ಇದ್ದಿತೋ ಅಲ್ಲಿಯೇ ಇದೆ. ನವ ನಾಗರೀಕತೆಗೆ ಹೊಂದಿಕೊಂಡು ಹೋಗಲು ಅವನಿಗೆ ಬಹಳ ಕಷ್ಟವಾಗುತ್ತಿದೆ. ಜಾನುವಾರುಗಳಿಗೆ ಹುಲ್ಲು ಹಾಕಿ ಸಾಕುವುದು ಕಷ್ಟವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನವ ನಾಗರೀಕತೆಯ ಸೌಕರ್ಯ ಅನುಭವಿಸುವುದಂತೂ ದೂರವಾಗಿದೆ. ಇಂಥ ಪರಿಸ್ಥಿತಿಯಲ್ಲಿ ರೈತನಿಗೆ ಬೇಕಾಗುವ ವ್ಯವಸಾಯ ಉಪಕರಣಗಳನ್ನು ಒದಗಿಸಿಕೊಡತಕ್ಕಂಥಾದ್ದು ಅವಶ್ಯಕ. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ವ್ಯವಸಾಯವನ್ನೇ ಅವರು ಅವಲಂಬಿಸಿರುತ್ತಾರೆ. ವರ್ಷದಲ್ಲಿ ಎಲ್ಲಾ ದಿನಗಳಲ್ಲಿ ಕೆಲಸವಿರುವದಿಲ್ಲವಾದ್ದರಿಂದ ಅವರಿಗೆ ಯಾವದಾದರೂ ಒಂದು ಉಪ ಕಸಬು ತೋರಿಸಿ ಕೊಡಬೇಕು. ಗ್ರಾಮ ಕೈಗಾರಿಕೆ ಮೂಲಕ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಿ ಅವರ ಜೀವನ ಸುಗಮವಾಗಬೇಕು. ಈ ರೀತಿ ಮಾಡಿದರೆ ಪ್ರಜಾಪ್ರಭುತ್ವಕ್ಕೆ ಹಿರಿಮೆ, ಗೌರವ ತರತಕ್ಕಂಥಾದ್ದು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕ್ಷಾಮದಿಂದ ನೊಂದಂಥ ಜನ ನೋಡಿದರೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಮಳೆಯ ಅನುಕೂಲವಾದ ಪರಿಸ್ಥಿತಿಯಲ್ಲಿಯೂ ಕೂಡ ಹಳ್ಳಿಗಾಡಿನಲ್ಲಿ ರೈತನಿಗೆ ಎರಡು ಊಟ ಸರಿಯಾಗಿ ಸಿಕ್ಕುವುದಿಲ್ಲ. ಸರಿಯಾದ ಬಟ್ಟೆ ಇರುವುದಿಲ್ಲ. ಸ್ನಾನ ಮಾಡಲು ನೀರು ದೊರೆಯುವುದಿಲ್ಲ. ಇಂಥ ದೊಡ್ಡ ಸಮಸ್ಯೆ ಇದೆ. ಅದರ ಲ್ಲಿಯೂ ಪ್ರಕೃತಿ ವಿಕೋಪಕ್ಕೆ ಸಿಕ್ಕಿಕೊಂಡಾಗ್ಗೆ ಅವನ ಕಷ್ಟ ಹೇಳತೀರದು. ಆತನ ಕಷ್ಟಸ್ಥಿತಿ ಯನ್ನು ವರ್ಣಿಸಲು ಸಾಧ್ಯವಿಲ್ಲ. ಅಂಥ ದಾರುಣ ಚಿತ್ರ ಚಿತ್ರಿಸಲು ಅಸಮರ್ಥರಾಗಿದ್ದೇವೆ ಎಂದು ಹೇಳಿದರೆ ಆತಿಶಯೋಕ್ತಿಯಾಗಲಾರದು.

ನಾನು ಒಂದು ಸೂಚನೆ ಮಾಡಲು ಬಯಸುತ್ತೇನೆ. ಈ ಅಧಿವೇಶನ ಮುಗಿದ ಕೂಡಲೇ ರೆವೆನ್ಯೂ ಸಚಿವರು, ವ್ಯವಸಾಯ ಇಲಾಖೆ ಸಚಿವರು ಮುಖ್ಯ ಮಂತ್ರಿಗಳು ಕ್ಷಾಮ ಪೀಡಿತ ಪ್ರದೇಶ ದಲ್ಲಿ ಪ್ರವಾಸ ಮಾಡಿ ಜನರ ಕಷ್ಟ ಸುಖ ನೇರವಾಗಿ ಮನಸ್ಸಿಗೆ ತಂದುಕೊಂಡು ಪರಿಹಾರ ಒದಗಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನವೀಯತೆ ದೃಷ್ಟಿಯಿಂದ ವಿಶಾಲ ಮನಸ್ಸಿನಿಂದ ಈ ಸಮಸ್ಯೆ ಪರಿಹರಿಸಬೇಕು ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ತಾತ್ಕಾಲಿಕ ಪರಿಹಾರಕ್ಕಿಂತ ಶಾಶ್ವತವಾದ ಪರಿಹಾರ ಒದಗಿಸಲು ದೀರ್ಘವಾಗಿ ಯೋಚನೆ ಮಾಡಿ ಒಂದು ವ್ಯವಸ್ಥೆ ಮಾಡಬೇಕು. ಶ್ರೀ ವೆಂಕಟೇಗೌಡರು ಸಲಹೆ ಕೊಟ್ಟ ಹಾಗೆ ಕೋಟಿ ಗಟ್ಟಲೆ ರೂಪಾಯಿಯ ಯೋಜನೆ ಮಾಡಿದ ಪಕ್ಷದಲ್ಲಿ ಆ ತಾಲ್ಲೂಕಿನಲ್ಲಿ ಬಹಳ ಅನುಕೂಲ ವಾಗುತ್ತದೆ. ಸುವರ್ಣಾವತಿ ಯೋಜನೆಯನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದರೆ ಬಹಳ ಉಪಯೋಗವಾಗುತ್ತದೆ. ಎಲ್ಲ ಭಾಗದಲ್ಲಿಯೂ ಶಾಶ್ವತ ಪರಿಹಾರ ಒದಗಿಸಿ ಕೊಡುತ್ತದೆ. ಕ್ಷಾಮಡಾಮರುಗಳಿಂದ ಕಷ್ಟಪಡುವವರು ನೆಮ್ಮದಿಯಿಂದ ಸುಖೀ ಜೀವನ ಸಾಗಿ ಸಲು ಅನುಕೂಲವಾಗುತ್ತದೆ. ಆದುದರಿಂದ ಶಾಶ್ವತ ಪರಿಹಾರಕ್ಕೆ ಪ್ರಾಧಾನ್ಯತೆ ಕೊಟ್ಟು, ದೇಶಕ್ಕೆ ಒದಗಿದ ದುಸ್ಥಿತಿಯಿಂದ ಜನತೆಯನ್ನು ಪಾರು ಮಾಡಿ, ಬಡವನಿಗೆ ಅನ್ನ ಬಟ್ಟೆ ಒದಗಿಸಿ, ತನ್ಮೂಲಕ ಸುಖೀ ರಾಜ್ಯ ಕಟ್ಟಿ ಜನತೆಯನ್ನು ಸುಖೀ ರಾಜ್ಯದ ಕಡೆ ಒಯ್ಯೋಣ ಎಂದು ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದಾರೆ. ಈ ನಿರ್ಣಯದ ಮೂಲಕ ದೇಶದಲ್ಲಿರತಕ್ಕಂಥ ಕ್ಷಾಮಡಾಮರ ಪರಿಸ್ಥಿತಿ ವಿವರಿಸುವುದಕ್ಕೂ ಈ ಸಂದರ್ಭದಲ್ಲಿ ಸೂಕ್ತ ಸಲಹೆ ಕೊಡಲು ಅವಕಾಶ ಒದಗಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಕ್ಷಾಮ ಪರಿಹಾರ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಇದುವರೆಗೆ ಮಾತ ನಾಡಿದ ಸ್ನೇಹಿತರು ಕ್ಷಾಮ ಪರಿಹಾರ ಕ್ರಮಗಳನ್ನು ಕಾರ್ಯಗತಗೊಳಿಸಲು ಸರಕಾರ ವಿಫಲ ಹೊಂದಿದೆ ಎಂದು ಏನು ಹೇಳಿದರೋ ಅದನ್ನು ನಾನು ಅನುಮೋದಿಸುತ್ತೇನೆ. ರಾಜ್ಯದಲ್ಲಿ ಇರತ ಕ್ಕಂಥ ಯೋಜನೆಗಳನ್ನು ಕಾರ್ಯಗತ ಮಾಡಲು ಸರಕಾರ ವಿಫಲ ಹೊಂದಿದೆ. ನಾನು ಈಗ ಧಾರವಾಡ ಜಿಲ್ಲೆಯ ಶಿರಹಟ್ಟಿ, ಹಾವೇರಿ ತಾಲ್ಲೂಕುಗಳ ಬಗ್ಗೆ ಕೆಲವು ವಿಷಯ ತಮ್ಮ ಮುಂದೆ ಇಡುತ್ತೇನೆ. ಶಿರಹಟ್ಟಿ ಮತ್ತು ಹಾವೇರಿ ತಾಲ್ಲೂಕುಗಳಲ್ಲಿ ಕಳೆದ ಐದಾರು ವರ್ಷಗಳಿಂದ ಬರಗಾಲ ಇದ್ದೇ ಇದೆ ಎಂಬುದು ಸರಕಾರಕ್ಕೆ ಗೊತ್ತಿದೆ. ಹೋದ ವರುಷ ವರದಾ ನದಿಗೆ ಮಹಾಪೂರ ಬಂದು ಅಕ್ಕಪಕ್ಕದಲ್ಲಿರುವ ಹಳ್ಳಿಗಳು ಮನೆಗಳು ದನಕರುಗಳು ನಾಶವಾಗಿವೆ.

ಇದಲ್ಲದೆ ಈ ವರ್ಷ ಜೋಳದ ಪೀಕಿಗೆ ಜಿಟ್ಟಿಹಿಡಿದು ಬೆಳೆ ನಾಶವಾಗಿದೆ. ಜಿಟ್ಟಿ ನಾಶದ ಬಗ್ಗೆ ಯೋಜನೆ ಕೈಕೊಂಡಿದ್ದರೂ ಕೂಡ ಸುತ್ತು ಮುತ್ತಲಿನ ಪ್ರದೇಶದಲ್ಲಿ ಜಿಟ್ಟಿ ನಿರ್ಮೂಲವಾಗಿಲ್ಲ. ಪೌಡರ್ ಹೊಡೆದರೂ ಕೂಡ ಜಿಟ್ಟಿ ನಾಶವಾಗುವದಿಲ್ಲ. ಆದ್ದರಿಂದ ಈ ಎರಡು ತಾಲ್ಲೂಕುಗಳ ಕುಂದು ಕೊರತೆಗಳನ್ನು ಗಮನಿಸಿ ಜಿಟ್ಟಿಹಾವಳಿಯನ್ನು ಪೂರ್ಣವಾಗಿ ನಿರ್ಮೂಲ ಮಾಡಲು ವ್ಯವಸ್ಥೆ ಮಾಡಬೇಕು.

5-00 P.M.

ಅದನ್ನು ಪೂರ್ಣವಾಗಿ ನಿರ್ಮೂಲನ ಮಾಡಬೇಕು. ಇನ್ನು 5-6 ವರ್ಷ ಹಾಗೆ ನಡೆದರೆ ರೈತರು ಯಾವ ತರಹ ಬದುಕಬೇಕೆಂಬ ಚಿತ್ರ ಕಾಣುತ್ತದೆ. ಇವತ್ತು ತಿನ್ನಲಿಕ್ಕೆ ಆಹಾರವಿಲ್ಲ. ದನಗಳಿಗೆ ಮೇವು ಇಲ್ಲದೇ ಸಾಯುತಕ್ಕ ಪರಿಸ್ಥಿತಿ ಬಂದಿದೆ. ನೀವೇನೋ ರೈತರಿಗೆ ಅನುಕೂಲ ಮಾಡಿಕೊಡ ಬೇಕೆಂದು ಸೊಸೈಟಿಗಳ ಮೂಲಕ ಬೇಕಾದಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದೀರಿ. ಆದರೆ ಅವರು ತೆಗೆದುಕೊಂಡ ಹಣವನ್ನು ವಾಪಸು ಕೊಡುವುದಕ್ಕೆ ಸಾಧ್ಯವಾಗದೇ ಇವತ್ತಿನ ದಿವಸ ಹೊಸದಾಗಿ ಅವರಿಗೆ ಸಾಲ ದೊರಕದಂತಾಗಿದೆ. ರೈತಾಪಿ ಜನರು ಯಾವ ರೀತಿ ಅವರಿಗೆ ಬೇಕಾದ ಉಪಕರಣಗಳನ್ನು ಕೊಳ್ಳಬೇಕು, ಯಾವ ರೀತಿ ಬೀಜಗಳನ್ನು ಕೊಳ್ಳಬೇಕು ಎನ್ನುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಹೀಗಿರುವಾಗ ಅವರನ್ನು ಈ ಕಷ್ಟ ಪರಿಸ್ಥಿತಿಯಲ್ಲಿ ಬದುಕಿಸ ಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇವತ್ತಿನ ದಿವಸ ನೀರಾವರಿಗೆ ಪ್ರೋತ್ಸಾಹ ಕೊಡತಕ್ಕ ಅನೇಕ ಕಾರ್ಯಚಟುವಟಿಕೆಗಳು ಕಂಡುಬರುತ್ತಿವೆ. ನಮ್ಮಲ್ಲಿ 7-8 ಹಳ್ಳಗಳು ಇವೆ, ಅವಕ್ಕೆ ಒಡ್ಡು ಹಾಕಿ ನೀರಾವರಿಗೆ ಪ್ರೋತ್ಸಾಹ ಕೊಟ್ಟರೆ ಆಹಾರಧಾನ್ಯವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ವರದಾ ನದಿ ಹರಿಯುತ್ತದೆ, ಅದು ಹೋಗಿ ತಂಗಭದ್ರಾ ನದಿಗೆ ಸೇರುತ್ತದೆ, ಒಂದು ತೊಟ್ಟು ನೀರೂ ಸಹ ಆಹಾರ ಸಾಮಗ್ರಿ ಬೆಳೆಯುವುದಕ್ಕೆ ಉಪಯೋಗವಾಗು ತ್ತಿಲ್ಲ. ಪಂಪ್ ಸೆಟ್ಟು ಮುಖಾಂತರ ಹೊಳೆಯ ನೀರನ್ನು ತೆಗೆದುಕೊಂಡು ಉಪಯೋಗ ಮಾಡಿಕೊಳ್ಳ ತಕ್ಕ ಸೌಕರ್ಯವಿದೆ ಅದನ್ನು ಮಾಡಬಹುದು. ಹಿಂದೆ ಕೂಡ ನಮ್ಮಲ್ಲಿ ಧಾರವಾಡ ಜಿಲ್ಲೆಯ ಎಲ್ಲ ಜನಗೂ ವರದಾ ನದಿಗೆ ಒಂದು ಯೋಜನೆ ಮಾಡಿದ್ದೀರಿ ಅದಕ್ಕೆ ಒಂದು ಅಣೆಕಟ್ಟು ಕಟ್ಟಿ ಆದರ ಮುಖಾಂತರ ಒಂದು ಲಕ್ಷ ಎಕರೆ ಜಮೀನು ನೀರು ಹಾಯಿಸಲಿಕ್ಕೆ ಸಾಧ್ಯ ಎಂದು ಮನವಿ ಮಾಡಿಕೊಂಡಿದ್ದಾರೆ. ಈಗಲಾದರೂ ಅದರ ಬಗ್ಗೆ ಹೆಚ್ಚು ಆಸ್ತೆ ವಹಿಸಿ ವರದಾ ನದಿಗೆ ಅಣೆಕಟ್ಟಿ ನೀರಾವರಿ ಮಾಡಿದ್ದೇ ಆದರೆ ಸಾಕಷ್ಟು ಎಕರೆ ಜಮೀನಿಗೆ ನೀರಾವರಿಯಾಗಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಚಿಕ್ಕ ನೀರಾವರಿ ಯೋಜನೆಗೆ ನಮ್ಮ ಭಾಗದಲ್ಲಿ ಹೆಚ್ಚು ಹೆಚ್ಚು ಭಾವಿ ಗಳನ್ನು ತೋಡಿಸಲಿಕ್ಕೆ ಜನರು ಮುಂದೆ ಬಂದರೂ ಕೂಡ ಸರ್ಕಾರದವರು ಸಾಕಾದಷ್ಟು ಹಣ ಒದಗಿಸದೇ ಇನ್ನು ನೂರಾರು ಭಾವಿಗಳಿಗೆ ಸಲ್ಲಿಸಿದ ಅರ್ಜಿಗಳು ಹಾಗೆಯೇ ಉಳಿದಿವೆ. ಇವಕ್ಕೆ ಹೆಚ್ಚು ಹಣ ಆದಷ್ಟು ಜಾಗ್ರತೆ ಒದಗಿಸಿಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಕೆಲವು ಕೆರೆಗಳು ಇವೆ, ಶಿರಹಟ್ಟಿ, ಕುಂದರ ಹಳ್ಳಿ, ಚದರ ಹಳ್ಳಿ ಈ ಕೆರೆಗಳು ದೂಳಿನಿಂದ ತುಂಬಿ ನೀರಾವರಿ ಕೆಲಸಗಳಿಗೆ ಉಪಯೋಗವಿಲ್ಲದಂತಾಗಿವೆ. 10-15 ವರ್ಷಗಳ ಹಿಂದೆ ಅವುಗಳಿಂದ ನೀರಾವರಿ ತೆಗೆದುಕೊಳ್ಳುತ್ತಿದ್ದೆವು, ಇವತ್ತಿನ ದಿವಸ ಆ ಪರಿಸ್ಥಿತಿ ಇಲ್ಲ, ಹಿಂದೆ ಅನೇಕಸಾರಿ ಈ ಅಸೆಂಬ್ಲಿಯಲ್ಲಿ ಹೇಳಿದ್ದಕ್ಕೆ ಹೂಳನ್ನು ತೆಗೆಸುತ್ತೇವೆ ಎಂದು ಭರವಸೆಯನ್ನೂ ಕೂಡ ಕೊಟ್ಟಿದ್ದರು ಇಲ್ಲಿಯವರೆಗೂ ಯಾವ ತರಹದ ಕೆಲಸವೂ ಕೂಡ ಆಗಿಲ್ಲ, ನಾನು ಈ ಮೊದಲೇ ಹೇಳಿದ ಕೆರೆಗಳು ಬಹಳ ದೊಡ್ಡ ಕೆರೆಗಳಾಗಿವೆ ಸಾವಿರಾರು ಎಕರೆಗಳಿಗೆ ನೀರಾವರಿ ಮಾಡಬಹುದು. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡಿಸಬೇಕೆಂದು ಮತ್ತೊಮ್ಮೆ ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಮಚ್ಚೂರು ಡ್ಯಾಂ ಎಂದು ಇದೆ. ಆದು 16 ಲಕ್ಷ ರೂಪಾಯಿನ ಸ್ಕೀಮು. ಇದೇ ಅಸೆಂಬ್ಲಿಯಲ್ಲಿ ಪ್ರಶ್ನೆ ಹಾಕಿದಾಗ ಮಾನ್ಯ ಮಂತ್ರಿಗಳು ಅವನ್ನು ಶುರು ಮಾಡು ತ್ತೇವೆ ಎಂದು ಭರವಸೆ ಕೊಟ್ಟರು, ನಮ್ಮ ತಾಲ್ಲೂಕಿಗೆ ಯಾವುದೇ ಮಂತ್ರಿಗಳು ಬಂದರೂ ಕೂಡ ಅಲ್ಲಿಗೆ ಬರುತ್ತಾರೆ. ಆ ಪ್ರದೇಶದಲ್ಲಿ 2,500 ಎಕರೆ ಪ್ರದೇಶಕ್ಕೆ ಅದರಿಂದ ನೀರಾವರಿಯಾಗುತ್ತದೆ, ಇದು ಬಹಳ ಮುಖ್ಯವಾದ ವಿಷಯ ಎಂದು ಹೇಳುತ್ತೇನೆ. ಇನ್ನೊಂದು ಅಂಶವನ್ನು ಹೇಳಬಯಸು ತ್ತೇನೆ ಅನೇಕರು ಈಗಾಗಲೇ ಬಾವಿಗಳನ್ನು ತೆಗೆಸಿರುವುದರಿಂದ ಹೆಚ್ಚು ಆಹಾರ ಬೆಳೆಯುವುದಕ್ಕೆ ಎಲ್ಲರಿಗೂ ಆಸಕ್ತಿ ಇದೆ. ಇನ್ನೂ ಹೆಚ್ಚು ಜನರು ಬಾವಿ ತೆಗೆಸುತ್ತೇವೆ ಎಂದು ಹೇಳಿ ಅರ್ಜಿ ಕೊಟ್ಟಿದ್ದಾರೆ, ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡಿದ್ದೇನೆ ಇವತ್ತೂ ಕೂಡ ಹೇಳುತ್ತಾ ಇದ್ದೇನೆ. ಅನೇಕ ಜನರು ಬಹಳ ಕಷ್ಟದಲ್ಲಿದ್ದಾರೆ ಅವರಿಗೆ ಯಾವುದಾದರೂ ರೀತಿಯಲ್ಲಿ ತಾವು

(ಶ್ರೀ ಸಿದ್ದಯ್ಯ ಕಾಶಿಮಠ)

ಕೊಡಬೇಕು ರಿಲೀಫ್ ಕೊಡಬೇಕು. ಎರಡನೆಯದಾಗಿ ದನಗಳ ಸಂಪತ್ತು. ನಮ್ಮಲ್ಲಿ ಮೂರು ನಾಲ್ಕು ಕಡೆ ಹುಲ್ಲುಗಾವಲುಗಳು ಇವೆ. ಡೈರಿ ಫಾರಂಗಳನ್ನು ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಏರ್ಪಾಡು ಮಾಡಬೇಕು. ಕಪದ ಗುಡ್ಡದಲ್ಲಿ ಒಳ್ಳೆಯ ಹುಲ್ಲುಗಾವಲು ಇದೆ, ಅದನ್ನು ಮೀಸಲಾಗಿಟ್ಟುಕೊಂಡು ಅಲ್ಲಿ ಸಾಕಾದಷ್ಟು ಹೈನು ಅಭಿವೃದ್ಧಿ ಮಾಡಲಿಕ್ಕೆ ಅವಕಾಶವಿದೆ. ದೇವಿಹಾಳದಲ್ಲೂ ಕೂಡ ಹೈನು ಅಭಿವೃದ್ಧಿ ಮಾಡಲಿಕ್ಕೆ ಒಳ್ಳೆಯ ಅವಕಾಶವಿದೆ. ಅಲ್ಲಿ ಈ ಡೈರಿ ಫಾರಂ ಮಾಡತಕ್ಕ ಯೋಜನೆಯನ್ನು ಕೈಕೊಂಡರೆ ನೂರಾರು ಜನರು ಬದುಕಬಹುದು ಎಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ವರ್ಷ ಮಳೆ ಬಾರದೇ ಬೆಳೆಗಳಿಗೆ ಬಹಳ ಲುಕ್ಸಾನಾಗಿರುವುದರಿಂದ ಆಹಾರ ದಿನಸಿಗಳು ಸಿಕ್ಕುವುದು ಬಹಳ ಕಠಿಣವಾಗಿದೆ ಆದ್ದರಿಂದ ಇನ್ನು 5-6 ತಿಂಗಳಾದರೂ ಕೂಡ ಅಗ್ಗದ ಅಂಗಡಿ ಮುಖಾಂತರ ಆಹಾರ ದಿನಸಿಗಳನ್ನು ಕೊಡದಿದ್ದರೆ ಜನರು ಬಹಳ ಕಷ್ಟ ಪಡುತ್ತಾರೆ.

ಇದಲ್ಲದೇ ಆ ಜನರಿಗೆ ಇನ್ನು ಮೂರು ನಾಲ್ಕು ತಿಂಗಳು ಯಾವ ಕೆಲಸವು ಇಲ್ಲದೇ ಮನೆಯಲ್ಲಿ ಕುಳಿತಿರುತ್ತಾರೆ, ರಸ್ತೆ ಮುಂತಾದ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡದ್ದೇ ಆದರೆ ಅವರಿಗೆ ಕೆಲಸವನ್ನೂ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅವರಿಗೆ ರೇಷನ್ ಅಂಗಡಿಗಳ ಮುಖಾಂತರ ದಿನಸಿಗಳನ್ನೂ ಕೂಡ ಒದಗಿಸಬೇಕು ಎಂದು ಹೇಳಿ ಈ ಸಮಯದಲ್ಲಿ ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ತಕಾವಿ ಸಾಲ, ಮತ್ತು ಇತರ ಸಾಲಗಳನ್ನು ಇನ್ನೂವರೆಗೆ ಕೊಟ್ಟಿಲ್ಲ. ಸಕಾಲದಲ್ಲಿ ಗ್ರಾಂಟ್ ಬಂದಿಲ್ಲ ಎಂದು ಅಲ್ಲಿನ ತಹಸೀಲ್ದಾರರು ಹೇಳುತ್ತಾರೆ. ಈ ವರ್ಷ ಆಯಿತು. ಮುಂದಿನ ವರ್ಷ ವಾದರೂ ಕೂಡ ತಕಾವಿ ಸಾಲ ಮುಂತಾದುವುಗಳನ್ನು ಸಕಾಲದಲ್ಲಿ ಆಯಾ ಕೆಲಸಗಳಿಗೆ ವಿನಿಯೋ ಗಿಸಲು ಅನುಕೂಲವಾಗುವಂತೆ ಕೊಡಲು ಸರಿಯಾದ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಸರ್ಕಾರದವರು ಮೇಲಿಂದಮೇಲೆ ಅನೇಕ ಯೋಜನೆಗಳನ್ನು ಹಾಕುತ್ತಿದ್ದರೂ ಅವುಗಳಿಗೆ ಸಾಕಷ್ಟು ಹಣವನ್ನು ಒದಗಿಸಲಿಲ್ಲ, ದಿನಕಳೆದರೂ ಹೀಗೇ ಕಾಲವನ್ನು ತಳ್ಳುತ್ತಿದ್ದಾರೆಂದು ಜನ ಸರ್ಕಾರವನ್ನು ಟೀಕೆ ಮಾಡಲು ಅವಕಾಶ ಕೊಟ್ಟ ಹಾಗಾಗುತ್ತದೆ. ಆದುದರಿಂದ ಇದಕ್ಕೆ ಆಸ್ಪದ ಕೊಡದಂತೆ ಜನರಿಗೆ ಅನುಕೂಲ ಕಲ್ಪಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೈತನ ಕೆಲಸಕ್ಕೆ ಅತ್ಯಗತ್ಯವಾಗಿ ಬೇಕಾಗಿರುವಂಥ ಕಬ್ಬಿಣದ ಮುಟ್ಟುಗಳನ್ನು ಒದಗಿ ಸಲು ಬ್ಲಾಕ್ ಡವಲಪ್‌ಮೆಂಟ್ ಇಲಾಖೆಯವರು ಆಯಾಯ ಕಂಪೆನಿಗಳಿಗೆ ಆರ್ಡರುಗಳನ್ನು ಕೊಟ್ಟಿ ದ್ದಾರೆ. ಆದರೆ ಆ ಕಂಪೆನಿಗಳವರು ಕಾಲಕ್ಕೆ ಸರಿಯಾಗಿ ಸಾಮಾನುಗಳನ್ನು ಒದಗಿಸುತ್ತಿಲ್ಲ. ಅಲ್ಲಿ ರೈತರಿಗೆ ರಂಟೆ, ಕುಳ ಇತ್ಯಾದಿ ಸಾಮಗ್ರಿಗಳು ಹೆಚ್ಚಿಗೆ ಬೇಕಾಗಿರುತ್ತವೆ. ಅಲ್ಲಿ ಸೇಂಗಾನ ಹೆಚ್ಚಿಗೆ ಬೆಳೆಯುತ್ತಾರೆ. ಅವುಗಳನ್ನು ನೆಲದಿಂದ ಈಚೆಗೆ ತೆಗೆಯಲು ಗುಳಗಳು ಹೆಚ್ಚಿಗೆ ಬೇಕಾಗುತ್ತದೆ. ಈ ಗುಳಗಳು ವೇಳೆಗೆ ಸರಿಯಾಗಿ ಸಿಕ್ಕದಿದ್ದರೆ ಆ ಸೇಂಗಾದಲ್ಲಿ ಬಹುಭಾಗ ನೆಲದಲ್ಲೇನಿಂತು ಹೋಗಿ ರೈತನಿಗೆ ಬಹಳ ಲುಕ್ಸಾನಾಗುತ್ತದೆ. ಆದುದರಿಂದ ಅಲ್ಲಿಯ ರೈತರಿಗೆ ಈ ಗುಳದ ಅವಶ್ಯಕತೆ ಬಹಳವಾಗಿದೆ. ಇವುಗಳನ್ನು ಹೆಚ್ಚುಮಟ್ಟದಲ್ಲಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆ ವರದಾ ನದಿ ನೆರೆಹಾವಳಿಯಿಂದ ಎಲ್ಲೆಲ್ಲಿ ಮನೆಗಳು ಕೊಚ್ಚಿ ಹೋಗಿರುತ್ತವೆಯೋ ಅವುಗಳನ್ನು ಈ ವರೆಗೂ ಇನ್ನೂ ರಿಪೇರಿ ಮಾಡಿಲ್ಲ. ಆದರೆ ಕೆಲವು ಕಡೆ ಮನೆಗಳನ್ನು ಕಟ್ಟಿದ್ದಾರೆ. ಅವುಗಳನ್ನು ಮನೆ ಎಂತ ಕರೆಯುದಕ್ಕಾಗುವುದಿಲ್ಲ. ನಾವು ಇಲ್ಲಿಗೆ ಐದು-ಆರು ವರ್ಷಗಳಿಂದ ಜಿಂಕ್ ಷೀಟುಗಳು ಬೇಕೆಂದು ಕೇಳುತ್ತಿದ್ದೇವೆ. ಆದರೆ ನಮಗೆ ಅವು ಸಿಗುತ್ತಿಲ್ಲ. ನಮಗೆ ಅವು ಗಳನ್ನು ಸರಬರಾಯಿ ಮಾಡುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗಿಲ್ಲ. ಹೀಗೆ ನಮಗೆ ಸಿಮೆಂಟು ಕೂಡ ಸರಿಯಾಗಿ ಸಿಗುತ್ತಿಲ್ಲ. ಇಲ್ಲಿಯವರೆಗೆ ಹಳ್ಳೀಜನರಿಗೆ ಈ ವಿಚಾರದಲ್ಲಿ ಯಾವ ಅನುಕೂಲವೂ ಸಿಕ್ಕಿಲ್ಲ. ಆದುದರಿಂದ ನಮ್ಮ ಪ್ರಾಂತಕ್ಕೆ ಈಗಲಾದರೂ ಹೆಚ್ಚಿನಮಟ್ಟದಲ್ಲಿ ಸಿಮೆಂಟು, ಜಿಂಕ್ ಷೀಟುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಮಳೆಗಾಲದಲ್ಲಿ ಅಲ್ಲಿ ದನಕರು ಗಳನ್ನು ಕಟ್ಟಿಕೊಳ್ಳಲು ಪ್ರತಿಯೊಬ್ಬನಿಗೂ ಹತ್ತು ಜಿಂಕ್ ಷೀಟುಗಳನ್ನು ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಅಲ್ಲಿ ಕೆಲವು ಗ್ರಾಮಗಳಲ್ಲಿ ಅಂದರೆ ಕಿತ್ತೂರು, ಬನ್ನೂರು ಈ ಗ್ರಾಮದ ಜನರಿಗೆ ಸರಿಯಾದ ವಾಸದಮನೆಗಳಿಲ್ಲ. ಅವರಿಗೆ ಡ್ರಾಯಿಂಗ್ ರೂಮುಗಳಿರಬೇಕೆಂದು ನಾನು ಕೇಳುತ್ತಿಲ್ಲ. ಅವರಿಗೆ ಎತ್ತುಗಳನ್ನು ಕಟ್ಟಲು ಒಂದು ಕೋಣೆ, ಅವರಿಗೆ ವಾಸಮಾಡಲು ಒಂದು ಕೋಣೆ ಇಷ್ಟಿದ್ದರೆ ಸಾಕು. ಅವರಿಗೆ ಅತಿ ತ್ವರಿತವಾಗಿ ಜಿಂಕ್ ಷೀಟುಗಳನ್ನು ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಮುಖ್ಯವಾಗಿ ಸರ್ಕಾರದವರು ಮೂರು-ನಾಲ್ಕು ವಿಚಾರಗಳಲ್ಲಿ ಕೂಡಲೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅವು ಯಾವುವೆಂದರೆ ಒಂದು ವರದಾ ನದಿಗೆ ಅಣೆಕಟ್ಟನ್ನು ಕಟ್ಟುವುದು; ಇನ್ನು ಹಳ್ಳಿಗಳಲ್ಲಿ ನೀರಾವರಿ ಸಪ್ತಾಹ ಮಾಡಿ ಜನರಿಂದ ಅರ್ಜಿಗಳನ್ನು ತೆಗೆದುಕೊಳ್ಳಲಾಯಿತು. ಆದರೆ ಅನೇಕರಿಗೆ ಹಣಸಿಕ್ಕಿಲ್ಲ. ಆದುದರಿಂದ ಅಲ್ಲಿಯ ಜನರಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ; ಇನ್ನು ಮೂರನೆಯದಾಗಿ ಬರಗಾಲ ಪರಿಸ್ಥಿತಿಯನ್ನು ತಡೆಗಟ್ಟಲು ಒಂದು ತಜ್ಞರಸಮಿತಿಯನ್ನು ನೇಮಿಸಬೇಕೆಂದು ಹೇಳುತ್ತೇನೆ. ಇನ್ನು ಆ ಸಿರಹಟ್ಟಿ, ಹಾವೇರಿ ಕಡೆ ಬೆಳೆಗಳಿಗೆ ಜಿಟ್ಟೆಹತ್ತಿ ಬೆಳೆ ಹಾಳಾಗುತ್ತಿದೆ. ಇದಕ್ಕೆ ಔಷಧಿಯನ್ನು ಕೂಡಲೆ ಹೊಡೆಸಬೇಕೆಂದು ಹೇಳುತ್ತೇನೆ. ಈ ಅನುಕೂಲಗಳನ್ನೆಲ್ಲ ಒದಗಿಸಿ ರೈತರಿಗೆ ಈಗ ಉಂಟಾಗಿರತಕ್ಕ ವಿಪತ್ತನ್ನು ಪರಿಹರಿಸಬೇಕೆಂದು ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಮಾಗಾವಿ (ಹಾವೇರಿ).—ಸ್ವಾಮಿ ನಮ್ಮ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಅತ್ಯಂತ ದುರ್ಭರವಾದ ಒಂದು ತಾಲ್ಲೂಕೆಂದರೆ ಅದು ನಮ್ಮ ಹಾವೇರಿ ತಾಲ್ಲೂಕು ಇಂದು ಅಲ್ಲಿಯ ಜನರೆಲ್ಲ ಊರು ಬಿಟ್ಟು ಗುಳೆ ಹೋಗುತ್ತಿದ್ದಾರೆ. ಹಾಗೆ ಅವರು ಹೋಗುತ್ತಿರುವುದನ್ನು ಕಣ್ಣು ಮುಟ್ಟ ಒಕ್ಕಲುತನದ ಮಂತ್ರಿಗಳು ನೋಡಿದ್ದಾರೆ ಈಗೆ ಕೆಲವು ದಿನಗಳ ಹಿಂದೆ ಮಳೆ ಬಿತ್ತು. ಆದರೆ ಇತ್ತೀಚೆಗೆ ಅಲ್ಲಿ ಮಳೆಯಿಲ್ಲ. ಹೀಗಾಗಿ ಈ ದಿವಸ ಜನರಿಗೆ ಬೇಕಾದ ಪೀಕು ಅವರ ಕೈಸೇರುವಂತಿಲ್ಲ. ಅವರಿಗೆ ಮುಖ್ಯವಾಗಿ ಬೇಕಾದ ಆಹಾರ ಧಾನ್ಯಗಳೆಂದರೆ—ಬತ್ತ, ಜೋಳ, ನವಣೆ, ಹಾರಕ, ಇತ್ಯಾದಿ ಬೆಳೆಗಳೊಂದೂ ಆಗುವಂತಿಲ್ಲ. ಅವರು ಈ ವರ್ಷ ಜೀವನ ಸಾಗಿಸುವುದು ಬಹಳ ದುರ್ಭರವಾಗಿದೆ. ಈ ಹಿಂದೆ ಬಿದ್ದ ಮಳೆಯಲ್ಲಿ ಬಿತ್ತಿದರಲ್ಲಿ ಕೆಲವು ಕಡೆ ಹುಟ್ಟಿದೆ, ಇನ್ನು ಕಲವು ಕಡೆ ಹುಟ್ಟಿಲ್ಲ. ಹುಟ್ಟಿದ್ದ ಕಡೆ ಅದಕ್ಕೆ ಜಿಟ್ಟೆ ಹತ್ತಿದೆ. ಹೀಗೆ ಬೆಳೆಯೆಲ್ಲ ಅಲ್ಲಿ ಈ ದಿವಸ ಸಂಪೂರ್ಣವಾಗಿ ನಾಶವಾಗಿದೆ. ಈ ವಿಚಾರವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಆದರೆ ಅಲ್ಲಿ ಕೆಲವು ಕಡೆಗಳಲ್ಲ ಬರಗಾಲ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ನಮ್ಮ ತಾಲ್ಲೂಕಿನ ಜನರಿಗೇನೂ ಪ್ರಯೋಜನವಾಗುತ್ತಿಲ್ಲ. ಆದರೆ ಇದೇ ಸಂದರ್ಭದಲ್ಲ ನಾನು ಸರ್ಕಾರದವರ ಗಮನಕ್ಕೆ ತರಬೇಕಾದ ಮತ್ತೊಂದು ವಿಚಾರವೇನೆಂದರೆ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಅನೇಕ ಕಡೆ ಮಳೆಯಿಲ್ಲದೆ ಜನ ಬಹಳ ಕಂಗಾಲಾಗಿದ್ದಾರೆಂಬ ವಿಚಾರವನ್ನು ಅವರ ಗಮನಕ್ಕೆ ತರಬೇಕಾಗಿದೆ. ಅಲ್ಲಿ ಈ ದಿವಸ ಆ ಜನರಿಗೆ ಕೆಲಸ ಒದಗಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅಲ್ಲಿ ಮೂರು-ನಾಲ್ಕು ಮೈಲಿಗಳ ರಸ್ತೆ ಕೆಲಸ ಮಾಡಹಚ್ಚಿದ್ದರೆ ಅಲ್ಲಿ ಜನ ಜಾಸ್ತಿಯಿರುವುದರಿಂದ ಆ ಕೆಲಸವೇನಿದ್ದರೂ ಅದು ಒಂದು ವಾರ ಕೂಡ ಅವರಿಗೆ ತಡೆಯುತ್ತಿಲ್ಲ. ಹೀಗೆ ಒಂದು ವಾರ ಕೆಲಸವಿದ್ದರೆ ಇನ್ನೊಂದು ವಾರ ಕೆಲಸವಿಲ್ಲದೆ ಅವರು ಸುಮ್ಮನೆ ಕೈ ಕಟ್ಟಿ ಕುಳಿತುಕೊಳ್ಳಬೇಕಾಗುತ್ತದೆ. ಅಲ್ಲಿಯ ಅಧಿಕಾರಿಗಳು ಈ ವಿಚಾರವನ್ನು ಸರ್ಕಾರದವರ ನಜರಿಗೆ ಸಕಾಲಕ್ಕೆ ತರದೆ ಜನರಿಗೆ ಬಹಳ ತೊಂದರೆಯಾಗಿದೆ. ಈ ವಿಚಾರವನ್ನು ನಾನು ಧಾರವಾಡದ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಸರ್ಕಾರದವರು ಧಾರವಾಡದ ಪರಿಸ್ಥಿತಿಯ ಬಗ್ಗೆ ಕೂಡಲೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ತಿಂಗಳಲ್ಲಿ ಅಲ್ಲಿ ನೀರಾವರಿ ಸಪ್ತಾಹ ಮಾಡಿ ಜನರಿಂದ ಬಾವಿಗಳಿಗಾಗಿ ಅರ್ಜಿಗಳನ್ನು ಕರೆಯಲಾಯಿತು. 350 ಅರ್ಜಿಗಳು ಬಂದಿವೆ. ಅದರಲ್ಲಿ ಕೇವಲ 150 ಬಾವಿಗಳಿಗೆ ತಕಾವಿ ಸಾಲ ಈಗ ಮಂಜೂರಾಗಿದೆ. ಬಾಕಿ ಜನರಿಗೆ ದುಡ್ಡಿಲ್ಲ ಎಂದು ಹೇಳಿದರೆ ನಾವು ಆ ಸಪ್ತಾಹ ಮಾಡಿದ್ದಕ್ಕೆ ಪ್ರಯೋಜನವಾದರೂ ಏನು ಎಂದು ಕೇಳುತ್ತೇನೆ? ಇದೇ ರೀತಿ ನಾವು ಐ. ಪಿ. ಸೆಟ್ಟುಗಳಿಗೂ ಅರ್ಜಿ ತೆಗೆದುಕೊಂಡಿದ್ದೇವೆ. 350-400 ಅರ್ಜಿಗಳು ಬಂದಿದ್ದರೆ ಈಗ ಕೇವಲ 10-15 ಜನರಿಗೆ ಮಾತ್ರ ಪಂಪ್ ಸೆಟ್‌ಗಳನ್ನು ಕೊಡಲಾಗಿದೆ. ಜನರಿಗೆ ಈ ಭಾಗದಲ್ಲಿ ನಾವು ಹೆಚ್ಚಿನ ಸಹಾಯ ಮಾಡದೆ ಹೋದರೆ ಹೆಚ್ಚು ಬೆಳೆ ತೆಗೆಯಬೇಕೆಂಬ ಮಾತು ಕನಸಾಗುತ್ತದೆ. ಈ ವಿಚಾರದಲ್ಲಿ ನಮ್ಮ ಮಂತ್ರಿಗಳು ಕೇಂದ್ರ ಸರ್ಕಾರಕ್ಕಾದರೂ ಒರೆದು ಅಲ್ಲಿಂದ ಹೆಚ್ಚಿನ ಹಣವನ್ನು ತರಿಸಿ ಜನರಿಗೆ ಪಂಪ್ ಸೆಟ್ಟುಗಳನ್ನು ಹಂಚಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಪದೇ ಪದೇ ನಮ್ಮ ತಾಲ್ಲೂಕು ಕ್ಷಾಮಕ್ಕೆ ತುತ್ತಾಗುತ್ತಿದೆ. ಆದುದರಿಂದ ಸರ್ಕಾರದವರು ಅಲ್ಲಿನ ಅಧಿಕಾರಿಗಳಿಂದ ಒಂದು ರಿಪೋರ್ಟನ್ನು ತರಿಸಿಕೊಂಡ. ಅಲ್ಲಿ 10-12 ಅಣೆಕಟ್ಟುಗಳಾಗಬೇಕಾಗಿದೆ, ಅದನ್ನು ಸರ್ಕಾರದವರು ಕೂಡಲೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಲ್ಲಿರತಕ್ಕ ಅಧಿಕಾರಿಗಳು ಈ ವಿಚಾರದಲ್ಲಿ ಒಂದು ವ್ಯಾಪಾರಿ ಮನೋಭಾವದಿಂದ ಕೆಲಸ ಮಾಡುತ್ತಿದ್ದಾರೆ. ನಾವು ಅಲ್ಲಿ 10-12 ಅಣೆಕಟ್ಟುಗಳಾಗುತ್ತವೆ ಎಂದರೆ, ಅವರು ಇಲ್ಲ, ಅಲ್ಲಿ ಕೇವಲ ಐದಾರು ಅಣೆಕಟ್ಟುಗಳು ಮಾತ್ರ ಆಗುತ್ತವೆಂದು ಹೇಳುತ್ತಿದ್ದಾರೆ. ಈ ಅಧಿಕಾರಿಗಳಲ್ಲ ಈ ಮನೋಭಾವನೆ ಆ ಬ್ರಿಟಿಷರಿದ್ದ ಕಾಲದಿಂದಲೂ ಹಾಗೇ ನಡೆದುಕೊಂಡು ಬಂದಿದೆ. ಎಲ್ಲಿ ಹೆಚ್ಚು ಮಳೆ ಬೆಳೆಗೆ ಅವಕಾಶವಿಲ್ಲವೋ ಅಲ್ಲಿ ನಮಗೆ ಈ ಕಟ್ಟೆಗಳನ್ನು ಕಟ್ಟಿಸಿಕೊಡಿ ಎಂದು ನಾವು ಕೇಳುತ್ತಿಲ್ಲ. ನಾವು

(ಶ್ರೀ ವಿ. ಬಿ. ಮಾಗಾವಿ)

ಜವಾಬ್ದಾರಿಯುತರಾದ ಪ್ರತಿನಿಧಿಗಳಾಗಿರುವುದರಿಂದ ಸರ್ಕಾರದ ಪರಿಸ್ಥಿತಿಯನ್ನು ತಿಳಿದು ಮಾನ್ಯ ಕಂದಾಯ ಮಂತ್ರಿಗಳಿಗೆ ಆಶ್ವಾಸನೆ ಕೊಡುತ್ತಿದ್ದೇವೆ. ಈ ಬಗ್ಗೆ ಒಂದು ವರದಿಯನ್ನು ಅಧಿಕಾರಿಗಳು ಕೂಡಲೇ ಸರಕಾರಕ್ಕೆ ಕಳುಹಿಸಬೇಕು. ಅದರಂತೆ ಯಾವ ಯಾವ ಕಾಮಗಾರಿಗಳಾಗಬೇಕು, ಎಷ್ಟು ಹಣ ಬೇಕಾಗಬಹುದು ಎನ್ನುವುದನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಬರಗಾಲಕ್ಕೆ ಸಹಾಯಕವಾಗುವಂತಹ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಆ ರೀತಿ ಮಾಡದೇ ಹೋದರೆ ಇಲ್ಲಿನ ಜನ ಜೀವನ ಮಾಡಲು ಹೇಗೆ ಸಾಧ್ಯ. ಎನ್ನುವುದನ್ನು ಮನಗಾಣಬೇಕು.

ಇನ್ನು ಕಂದಾಯ ಶಾಖೆಗೂ ಮತ್ತು ಉಳಿದ ಶಾಖೆಯೊಳಗೂ ಒಂದು ರೀತಿಯಾದ ಕೋ-ಆರ್ಡಿನೇಷನ್ ಎಂದರೆ ಸಮನ್ವಯವಾಗುವಂತಹ ಏರ್ಪಾಡು ಆಗಬೇಕು. ನಮ್ಮ ತಾಲ್ಲೂಕಿನ ಕೆಲವು ಬರಗಾಲದ ಪ್ರದೇಶಗಳಲ್ಲಿ ಅನೇಕ ಕಡೆಗಳಲ್ಲಿ ಪಿ.ಡಬ್ಲ್ಯು ಡಿ. ಇಲಾಖೆಯ ಕೆಲಸಗಳು ಆಗಬೇಕೆಂದು ಎಸ್ಟಿಮೇಟುಗಳನ್ನು ಕಳುಹಿಸಿದ್ದಾರೆ. ಅದನ್ನು ಈಗಲೇ ಷುರು ಮಾಡಿದರೆ ನಮ್ಮ ಜನಕ್ಕೆ ಕೆಲಸವೂ ಸಿಕ್ಕಿದಂತಾಗುತ್ತದೆ ಅವರು ದಿನದ ಗಂಜಿಗಾಗಿ ಒಂದು ನಾಲ್ಕಾಣೆ ಕೂಲಿ ಸಿಕ್ಕಿದಂತಾಗುತ್ತದೆ. ನಮ್ಮಲ್ಲಿ ಸುಮಾರು 900 ಜನರು ಕೆಲಸವಿಲ್ಲದೇ ಇದ್ದಾರೆ. ಇಂತಹ ದೊಡ್ಡ ಕೆಲಸಗಳನ್ನು ನಮ್ಮ ಭಾಗದಲ್ಲಿ ಮಾಡುವುದಾದರೆ ಮೂರು ನಾಲ್ಕು ದಿನಗಳಲ್ಲಿ ಮುಗಿಸಬಹುದು. ಹೀಗೆ ದೊಡ್ಡ ದೊಡ್ಡ ಕೆಲಸಗಳು ಯಾವುದಾದರೂ ಇದ್ದರೆ ಬೇಗನೆ ಸ್ಕ್ರೂಟಿನೈಸು ಮಾಡುವ ಪ್ರಪೋಸಲ್ಲು ಇದ್ದರೆ ಅವನ್ನು ಕೂಡಲೇ ಸ್ಯಾಂಕ್ಷನ್ನು ಮಾಡಿಸಿಕೊಟ್ಟರೆ ಈ ಜನಕ್ಕೆ ಕೆಲಸಗಳನ್ನು ಒದಗಿಸಿಕೊಟ್ಟಂತಾಗುದೆಂದು ನಾನು ಹೇಳುತ್ತೇನೆ. ಅನೇಕ ಜನರು ಇಲ್ಲಿ ಒತ್ತಾಯ ಪಡಿಸಿದ ಹಾಗೆ ನಮ್ಮ ಮಾನ್ಯ ಕಂದಾಯ ಶಾಖಾಮಂತ್ರಿಗಳೂ ನಮ್ಮ ತಾಲ್ಲೂಕಿಗೂ ಭೇಟಿ ಕೊಟ್ಟರೆ ಅವರೇ ಕಣ್ಣಾರೆ ಇಲ್ಲಿನ ಸ್ಥಿತಿಯನ್ನು ತಿಳಿಯಬಹುದು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಅಭಾವಕ್ಕೊಳಗಾದ ಪ್ರದೇಶಗಳ ಬಗೆಗೆ ಈ ಕಾಲದಲ್ಲಿ ಒಂದು ಸೂಚನೆಯನ್ನು ಮಂಡಿಸಿರತಕ್ಕ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನಮ್ಮ ಕೃಷ್ಣರಾಜಪೇಟೆಯಲ್ಲಿರುವ ಕೆಲವು ಕುಂದು ಕೊರತೆಗಳನ್ನು ಈ ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

ಮೊದಲನೇದು ಖಾಯಂ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕು. ಮಳೆ ಬೀಳಬೇಕು. ಅದರ ಸಹಾಯದಿಂದ ಬೆಳೆ ಮಾಡಬೇಕು.

ಎರಡನೇದು ಬಿದ್ದ ಮಳೆ ನೀರು ಪೋಲಾಗಿ ಹೇಮಾವತಿ ನದಿಗೆ ಹೋಗದಂತೆ ಕೆರೆಗಳನ್ನು ಕಟ್ಟಿ ತಡೆಗಟ್ಟಬೇಕು.

ಮೂರನೇದು ಕಾಂಟೂರು ಬಂಡಿಂಗ್ ಹಾಕಿ ಖುಷ್ಕಿ ಜಮೀನನ್ನು ತೇವವಿರುವಂತೆ ಮಾಡುವುದು.

ನಾಲ್ಕನೇದು, ಪಂಪುಸೆಟ್ಟುಗಳು, ಎಲ್ಲೆಲ್ಲಿ ಹಳ್ಳಗಳಿವೆಯೋ ಅದರ ಪಕ್ಕದಲ್ಲೇ ಭಾವಿಗಳನ್ನು ತೋಡಿಸಿ ಪಂಪುಸೆಟ್ಟುಗಳನ್ನು ಖಾಯಾಮ್ಮಾಗಿ ಹಾಕುವುದಕ್ಕೆ ಅವಕಾಶವಿರುವ ಕಡೆ ಹಾಕಿ ಅದರ ಮೂಲಕ ಜನಕ್ಕಾಗುವ ತೊಂದರೆಗಳನ್ನು ತಪ್ಪಿಸಲು ಸಾಧ್ಯವಾಗುವಂತಹ ಅವಕಾಶವನ್ನು ಮಾಡಬೇಕು.

ನಮ್ಮ ತಾಲ್ಲೂಕಿನಲ್ಲಿ 8-10 ಕೆಲಸಗಳು ಹತ್ತು ವರ್ಷಕ್ಕೆ ಮುಂಚೆಯೇ ಆಗಬೇಕಾಗಿತ್ತು. ಇದಕ್ಕೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಆರು ಏಳು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಪೂರ್ತಿಯಾಗದ್ದನ್ನು ಸರಕಾರಕ್ಕೆ ಒತ್ತಾಯ ಮಾಡಿ ಸರಕಾರದಿಂದ ಸುಮಾರು ಒಂದೂವರೆ ಲಕ್ಷದಷ್ಟು ಸಹಾಯ ಪಡೆದು, 900 ಎಕರೆಯಷ್ಟು ಭೂಮಿ ತರಿಯಾಗಲು ಅವಕಾಶ ಮಾಡಿದ್ದಕ್ಕೋಸ್ಕರ ಪಿ.ಡಬ್ಲ್ಯು.ಡಿ. ಯವರನ್ನು ಅಭಿನಂದಿಸಬೇಕಾಗಿದೆ. ನಮ್ಮ ತಾಲ್ಲೂಕು ಹಾಗೂ ನಾಗಮಂಗಲ ತಾಲ್ಲೂಕು ಇವೆರಡೂ ಜಂಟೀ ತಾಲ್ಲೂಕುಗಳು. ನಮಗೆ ನಾಲೆ ಬಂದಿದ್ದರೂ ನಮ್ಮ ತಾಲ್ಲೂಕಿನಲ್ಲಿ ಸುಮಾರು 330 ಹಳ್ಳಿಗಳಿದ್ದರೂ ಅವುಗಳಲ್ಲಿ 40 ಗ್ರಾಮಗಳಿಗೆ ಮಾತ್ರ ತರಿಯಾಗುವ ಸೌಕರ್ಯ ಸಿಕ್ಕಿ ಇನ್ನುಳಿದ 290 ಗ್ರಾಮಗಳು ಖುಷ್ಕಿ ಏರಿಯಾಕ್ಕೆ ಸೇರಿದವಾಗಿದೆ. ಎಲ್ಲರೂ ಅಭಾವಕ್ಕೊಳಗಾದ ಪ್ರದೇಶಗಳು. ದೊಡ್ಡದಾಗಿ ಹೇಮಾವತಿಯ ಮೂರು ನಾಲಾಗಳು ನಮ್ಮ ಭಾಗಕ್ಕೆ ಬಂದಿವೆ, ಇನ್ನೂ ಅಭಾವ ಇದೆಯೇ ಎನ್ನುವ ಭಾವನೆ ಇದೆ. ಬರೀ ನಲವತ್ತು ಗ್ರಾಮಗಳಿಗೆ ಮಾತ್ರ ನಾಲಾಗಳ ಸೌಕರ್ಯವಿದೆ. 290 ಗ್ರಾಮಗಳಿಗೆ ಸಾಗುವಳಿಗೆ ನೀರೇ ಸಿಗದಂತಾಗಿದೆ. ಅದಕ್ಕಾಗಿ ನಾನು ನಮ್ಮ ಅರಣ್ಯ ಮಂತ್ರಿಗಳಿಗೆ ಒಂದು ವಿನಂತಿ ಮಾಡಿದ್ದೆ ಅದು ಪಾಂಡವಪುರ, ಕೃಷ್ಣರಾಜಪೇಟೆ ಮತ್ತು ನಾಗಮಂಗಲ, ಈ ಮೂರು ಕಡೆಗಳಲ್ಲಿಯೂ ಆದಷ್ಟು ಕಾಡುಗಳನ್ನು ಚೆನ್ನಾಗಿ ಬೆಳೆಸಲು ಪ್ರಯತ್ನ ಮಾಡಿದರೆ ಮಳೆ ಬೀಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಬಿಳ್ಳಿಬೆಟ್ಟದ

ಬಳಿ ಸುಮಾರು ಏಳು ಸಾವಿರ ಎಕರೆಯಷ್ಟು ಭೂಮಿ ಕಾಡು ಬೆಳೆಸಲು ಸಿಗುತ್ತದೆ. ಅಲ್ಲದೆ ಪೋಲು ಕೋಟೆ ಕಾಡು 30 ಸಾವಿರ ಹಾಗೂ ಇತರ ಕಡೆಗಳಲ್ಲಿ ಎಂದರೆ ಚನ್ನರಾಯಪಟ್ಟಣದ ಭಾಗಗಳಲ್ಲಿ ಕಾಡನ್ನು ಬೆಳೆಸಲು ತಕ್ಕ ಕಾರ್ಯಕ್ರಮವನ್ನು ನಮ್ಮ ಅರಣ್ಯ ಮಂತ್ರಿಗಳು ಇಲ್ಲಿಯವರೆಗೂ ತೆಗೆದು ಕೊಂಡಿಲ್ಲ. ಈಗಲಾದರೂ ಇದನ್ನು ಮನಸ್ಸಿಗೆ ತೆಗೆದುಕೊಂಡು ಜಾಗ್ರತೆ ಬೆಳೆಯತಕ್ಕ ಕಾಡು ಗಳನ್ನು ಬೆಳೆಸಲು ಅವಕಾಶ ಮಾಡಿದ್ದೇ ಆದರೆ ನಮ್ಮ ಭಾಗದ ಮೂರು, ನಾಲ್ಕು ತಾಲ್ಲೂಕುಗಳಿಗೆ ಮಳೆ ಬೀಳುವುದಕ್ಕೆ ಅವಕಾಶವಾಗಿ ಅಭಾವ ನಿವಾರಣೆಗೆ ಪರಿಹಾರವೂ ಸಿಕ್ಕದಂತಾಗುತ್ತದೆ. ಇದರ ಕಡೆಗೆ ಅರಣ್ಯ ಮಂತ್ರಿಗಳು ಜಾಗ್ರತೆ ನಿಗಾ ಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ರಾಮ ದೇವರ ನಾಲಾದ ಕೆಲಸ ಮಂಜೂರಾಗಿ ನಾಲ್ಕೈದು ತಿಂಗಳಾಗಿದೆ ಇದನ್ನು ಬೇಗನೆ ಪ್ರಾರಂಭ ಮಾಡಿದರೆ ಪಿ.ಡಬ್ಲ್ಯು.ಡಿ. ಇಲಾಖೆ ಮೂಲಕ ಇಲ್ಲಿನ ಜನಕ್ಕೂ ಕೆಲಸ ಸಿಕ್ಕಿ ಅನು ಕೂಲವಾಗುತ್ತದೆ. ಹಳ್ಳಿಯ ಜನಕ್ಕೆ ಅನುಕೂಲವಾಗಲು ಬೇಗನೆ ಈ ಕೆಲಸದ ಏರ್ಪಾಡು ಮಾಡ ಬೇಕೆಂದು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಅನೇಕ ದೊಡ್ಡ ಹಳ್ಳಿಗಳು ಇದ್ದು ಅದರಲ್ಲಿ ನೀರು ಅಣೆಯಕಟ್ಟು ಕೆರೆ ಕಟ್ಟುವುದರಿಂದ 18-20 ಸಾವಿರ ಎಕರೆಗಳಷ್ಟು ಭೂಮಿಗೆ ನೀರು ಸಿಗುತ್ತದೆ. ಅಲ್ಲದೆ ಇಲ್ಲಿರತಕ್ಕ ಕೆಲವು ಕೆರೆಗಳನ್ನು ಕಟ್ಟಿ ದಲ್ಲಿ 5,000-6 000 ಯೂನಿಟ್ಟುಗಳಷ್ಟು ನೀರು ಸಿಗುತ್ತದೆ ಎಂದು ಪಿ.ಡಬ್ಲ್ಯು.ಡಿ. ಇಲಾಖೆಯ ವರು ಕೊಟ್ಟಿರುವ ಅಂಕಿ ಅಂಶಗಳನ್ನು ನಾನು ತಿಳಿದುಕೊಂಡಿದ್ದೇನೆ. ಶಾಶ್ವತವಾದ ಕಟ್ಟೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಮಾಡಲು ಮತ್ತು ಇವನ್ನು ಇನ್‌ವೆಸ್ಟಿಗೇಟು ಮಾಡಲು ಅವರಿಗೆ ಜನ ಗಳಿಲ್ಲದೆ ಕಷ್ಟವಾಗುತ್ತದೆ ಎಂದು ಕೇಳಿದ್ದೇನೆ. ಈಗ ಸುಮಾರು 2,500 ಜನ ಡಿಪ್ಲೊಮಾ ಪಾಸು ಮಾಡಿರತಕ್ಕವರು ಕೆಲಸವಿಲ್ಲದೆ ಇದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಇವರೆಲ್ಲರನ್ನು ಟೆಂಪೊರರಿಯಾಗಿ ಆರು ತಿಂಗಳುಗಳ ಕಾಲಕ್ಕೆಂದು ನೇಮಿಸಿಕೊಂಡು ಈ ಕೆಲಸಗಳನ್ನೆಲ್ಲಾ ಇನ್‌ವೆಸ್ಟಿಗೇಟು ಮಾಡುವ ಕೆಲಸಕ್ಕೆಂದು ನೇಮಿಸಿದರೆ ಪರಿಹಾರ ಕೆಲಸಗಳನ್ನು ಬೇಗ ಮಾಡಬಹುದು ಎಂದು ನಾನು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಪಂಪುಸೆಟ್ಟುಗಳನ್ನು ಕೊಡುವಾಗ ಒಂದು ವಿಚಿತ್ರ ಪರಿಸ್ಥಿತಿಯಾಗಿದೆ. ಸರಕಾರದವ ರೇನೋ ಸಾಲಕೊಡುತ್ತಾರೆ. ಆದರೆ ಕಾನೂನು ಇದನ್ನು ತಡೆಹಿಡಿಯುತ್ತಿದೆ, ಇದಕ್ಕೆ ಕೆಲವು ಕಾರಣಗಳನ್ನು ಮಾನ್ಯ ರೆವೆನ್ಯೂ ಮಂತ್ರಿಗಳ ಮುಂದೆ ಹೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ 200 ಜನಕ್ಕೆಂದು ಹೊಸದಾಗಿ ಬಾವಿಗಳನ್ನು ಕೊಡಬೇಕೆಂದು ಅರ್ಜಿಗಳು ಬಂದಿವೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಶೇಕಡಾ ಹತ್ತರಷ್ಟು ಜನ ಮಾತ್ರ ಖಾತೆದಾರರಾಗಿದ್ದಾರೆ. ಉಳಿದ 90 ಜನರೂ ಖಾತೇ ದಾರರಲ್ಲ. ಖಾತೆದಾರರಲ್ಲದವರಿಗೆ ಪಂಪುಸೆಟ್ಟು ಬಾವಿಗಳಿಗೆ ದುಡ್ಡುಗಳನ್ನು ಕೊಡಲಿಕ್ಕಾಗುವು ದಿಲ್ಲ ಎಂದು ಹೇಳುತ್ತಾರೆ. ಶ್ಯಾನುಬೋಗರು, ಶೇಕದಾರರಿಗೆ, ಶೇಕದಾರರು, ತಹಶೀಲುದಾರರಿಗೆ ಬರೆದು ಇದರ ಮೇಲೆ ತಕರಾರುಗಳಿಲ್ಲ. ವಂಶದವರು ಇದರ ಮೇಲೆ ಅವರ ಸ್ಟೇಟುಮೆಂಟಾಗ ಬೇಕು ಎಂದು ಹೇಳಿ ವರ್ಷಗಳಾದರೂ ಒಂದು ಖಾತೆಯನ್ನು ಟ್ರಾನ್ಸ್‌ಫರ್ ಮಾಡಲು ರೆವೆನ್ಯೂ ಇಲಾಖೆಗೆ ಆಗಲಿಲ್ಲ. ಆದ್ದರಿಂದ ಈಗಲಾದರೂ ಕಾನೂನು ಸಡಲಿಸಿ ಗ್ರಾಮಪಂಚಾಯಿತಿಯವರು ಸರಿಯಾದ ನಡವಳಿಕೆಯಲ್ಲಿದ್ದಾನೆ ಎಂಬ ವೋಚರನ್ನು ಕೊಟ್ಟರೆ ಅಂತಹವರಿಗೆ ಖಾತೆಗಳು ಟ್ರಾನ್ಸ್ ಫರು ಆಗದಿದ್ದರೂ ಅವನಿಗೆ ಪಂಪುಸೆಟ್ಟು ಮತ್ತು ಬಾವಿಗಳನ್ನು ಕೊಡುವಂತಹ ಅವಕಾಶವನ್ನು ಮಾಡಬೇಕೆಂದು ಮಾನ್ಯ ರೆವೆನ್ಯೂ ಮಂತ್ರಿಗಳನ್ನು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಕೆರೆಗಳಲ್ಲಿ ಹೂಳು ಮತ್ತು ಸಿಲ್ಟ್ ತೆಗೆಯಬೇಕು ಎಂದು ಪಿ.ಡಬ್ಲ್ಯು.ಡಿ. ಇಲಾಖೆಯವರು ಮಾಡ ಬೇಕೆಂದು ನಾನು ಕೇಳಿದಾಗ ಅವರು ಒಂದು ಎಕರೆಯ ನೀರು ನಿಲ್ಲಿಸಲು ಸುಮಾರು ನಾಲ್ಕು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ಸರಕಾರಕ್ಕೆ ನನ್ನ ಅಭಿಪ್ರಾಯವೊಂದನ್ನು ಕೊಡುತ್ತೇನೆ. ಒಂದು ಕೆರೆ ಸುಮಾರು 600-700 ಎಕರೆಗಳಷ್ಟು ಒಳ ಆಯವಿದ್ದರೆ ಅದರೊಳಗೆ ಸುಮಾರು 300-400 ಎಕರೆಗಳ ಪ್ರದೇಶದಲ್ಲಿ ಮಾತ್ರ ನೀರು ನಿಂತಿದ್ದರೆ ಉಳಿದ ಇನ್ನೂರು ಎಕರೆ ಪ್ರದೇಶದಲ್ಲಿ ತುಂಬಾ ಮರಳು ತುಂಬಿತರುತ್ತದೆ. ಆ ಪ್ರದೇಶಗಳನ್ನು ನೀರು ನಿಂತಿರುವ ಭಾಗದಿಂದ ಮಣ್ಣನ್ನು ತೆಗೆಸಿ ಮರಳು ತುಂಬದ ಜಾಗಕ್ಕೆ ಹಾಕಿ ಆ ಜಮೀನನು ಹರಾಜು ಮಾಡಿ ಅದರ ಉತ್ಪತ್ತಿಯಿಂದ ಹೆಚ್ಚು ನೀರನ್ನು ನಿಲ್ಲುವಂತೆ ಮಾಡಿ ಉತ್ಪತ್ತಿ ಮಾಡ ಬಹುದು. ಇದನ್ನು ಸರಕಾರದವರು ಪರಿಶೀಲನೆ ಮಾಡಬೇಕೆಂದು ಈ ಸಮಯದಲ್ಲಿ ನಾನು ಅಭಿಪ್ರಾಯ ಪಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಎನ್. ಯಿ. ಎಸ್. ಸ್ಕೀಮಿನಿಂದ ಪಿಕ್‌ಅಪ್‌ಗಳನ್ನು ತೆಗೆದುಕೊಂಡಿದ್ದಾರೆ. ಎನ್. ಇ. ಎಸ್ ಕೋಟ ಮುಗಿದುಹೋಗಿದೆಯೆಂದು 14 ಇನ್‌ಕಂಪ್ಲೀಟ್ ಪಿಕ್‌ಅಪ್ ಇವೆ. 3 ಲಕ್ಷ ರೂಪಾಯಿವರೆಗೂ ಕೊಟ್ಟಿದ್ದರು. ಮಿಕ್ಕ ಹಣ ಕೊಟ್ಟಿಲ್ಲ, ಕೆಲಸ ಅಪೂರ್ಣವಾಗಿದೆ. ಹೀಗಾದರೆ ಇದುವರೆಗೆ ಖರ್ಚುಮಾಡಿದ ದುಡ್ಡಿನ ಗತಿ ಏನು ? ಸರ್ಕಾರಕ್ಕೆ ಇದರಿಂದ ಏನಾದರೂ ರಿಟರ್ನ್

(ಶ್ರೀ ಎಚ್. ನಂಜೇಗೌಡ)

ಬರುತ್ತದೆಯೆ ? ಈ ಇನ್‌ಕಂಪ್ಲೀಟ್ ಆಗಿರುವ ಕೆಲಸವನ್ನು ಮುಗಿಸುವುದಕ್ಕೆ ಪ್ಲಾನಿಂಗ್ ಮಿನಿಸ್ಟರ್ ಕೂಡಲೆ ಕ್ರಮ ತೆಗೆದುಕೊಳ್ಳಬೇಕು.

5–30 P.M.

ಕೆ. ಆರ್. ಎಸ್ ನಿಂದ ಮುಳುಗಡೆಯಾದ ಪ್ರದೇಶಗಳ ಜನ ನಮ್ಮ ತಾಲ್ಲೂಕಿನಲ್ಲಿ ಬಹಳ ಜನ ಇದ್ದು, ಅವರು ಬಹಳ ನೊಂದಿಹೋಗಿದ್ದಾರೆ. ಅವರು ಬಹಳ ಫಲವತ್ತಾದ ಭೂಮಿ ಮುಳುಗಡೆಯಾಗಿ ಹೋಗಿದೆ. ಅವರಿಗೆ ದಿಣ್ಣೆಬೋರೆ ಮೇಲೆ ಜಾಗ ಮಾಡಿಕೊಟ್ಟಿದ್ದು, ಅವರು ಬಹಳ ಕಷ್ಟದಿಂದ ವಾಸಮಾಡುತ್ತಿದ್ದಾರೆ ಹುರುಳಿ ಸಹಿತ ಬೆಳೆಯುದಂಥ ಪ್ರದೇಶದಲ್ಲಿ ಅವರಿದ್ದಾರೆ. ಅವರಿಗೋಸ್ಕರ ಸರಕಾರದವರೇ ಪಂಪ್‌ಸೆಟ್ಟನ್ನು ಹಾಕಿ, ಅವರಿಂದ ವಾಟರ್‌ರೇಟ್, ಕಂಟ್ರಿಬ್ಯೂಷನ್ ವಸೂಲಮಾಡಿಕೊಳ್ಳುವ ಏರ್ಪಾಡು ಮಾಡಬೇಕು. ಕೋ-ಆಪರೇಟೀವ್ ಬೇಸಿಸ್ ಮೇಲೆ ಅವರನ್ನು ಸೆಟಲ್ ಮಾಡಬೇಕೆಂಬ ಅಭಿಪ್ರಾಯವಿದೆ. ಅದು ಅಷ್ಟು ಸರಿಯಾಗಿಲ್ಲ. ರೈತರಲ್ಲಿ ಒಗ್ಗಟ್ಟನ್ನು ಸಾಧಿಸಿ ಅದರಿಂದ ಫಲ ಪಡೆಯುವುದಕ್ಕೆ ಇನ್ನೂ ಕಾಲ ಬಂದಿಲ್ಲ. ಅವರಲ್ಲಿ ಇನ್ನೂ ಒಗಟ್ಟು ಬರಲಿಲ್ಲ. ಆದ್ದರಿಂದ ಈ ರೈತರ ಮೇಲೆ ಒಂದು ಕಂಟ್ರೋಲ್ ಇಟ್ಟುಕೊಂಡು, ಅವರಿಂದ ಕಂದಾಯ, ವಾಟರ್ ಕಂಟ್ರಿಬ್ಯೂಷನ್, ಎಲೆಕ್ಟ್ರಿಕ್ ಚಾರ್ಜ್ ವಸೂಲು ಮಾಡಿಕೊಂಡು. ಅವರಿಗೆ ಸಹಾಯ ಮಾಡಿಕೊಡಬೇಕೆಂದು ಕೇಳಿಕೊಂಡು, ನನ್ನ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair].

ಶ್ರೀ ಎಸ್. ಎಮ್. ಗುರೆಡ್ಡಿ (ಮುದ್ದೆಬಿಹಾಳ್).—ಮಾನ್ಯ ಸಭಾಪತಿಗಳೆ, ನಮ್ಮ ಶ್ರೀಮಾನ್ ಹುಚ್ಚಮಾಸ್ತಿಗೌಡರು ತಂದಿರತಕ್ಕಂಥ ಅಭಾವಪರಿಸ್ಥಿತಿ ನಿವಾರಣೆ ಪ್ರಸ್ತಾವನೆ ಕುರಿತು ಈಗಾಗಲೇ ಕೆಲವು ಸದಸ್ಯರು ಸರಿಯಾಗಿ ಮಾತನಾಡಿದ್ದಾರೆ. ಆದರೆ ಈ ಅಭಾವ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ಕಡೆ ಪ್ರತಿವರ್ಷವು ಇದ್ದೇ ಇರುತ್ತದೆ ಅಂತ ಹೇಳಬಹುದು. ಮೇಲಿಂದಮೇಲೆ ತುತ್ತಾಗುವಂಥ ಜಿಲ್ಲೆಗಳೆಂದರೆ, ನಮ್ಮ ರಾಜ್ಯದಲ್ಲಿ ಕೋಲಾರ, ಚಿತ್ರದುರ್ಗ, ಬಿಜಾಪುರ ಮತ್ತು ಧಾರವಾಡದ ರಾಣೇಬೆನ್ನೂರು ರೋಣ ಭಾಗ. ಇವು ಮೂರು ವರ್ಷಕ್ಕೆ ಎರಡು ಸಲ ಬರಗಾಲಕ್ಕೆ ತುತ್ತಾಗುತ್ತಾ ಇರುತ್ತವೆ. ನಮ್ಮ ಹಿಂದೂಸ್ಥಾನದಲ್ಲಿ 100ಕ್ಕೆ 80 ಜನ ಒಕ್ಕಲುತನವನ್ನು ಅವಲಂಬಿಸಿ ಕೊಂಡಿರುವುದರಿಂದ ರೈತರ ಪರಿಸ್ಥಿತಿಯನ್ನೂ ಮತ್ತು ಈ ಅಭಾವದಿಂದ ಆದ ಪರಿಸ್ಥಿತಿಯನ್ನೂ ಪರಿಣಾಮಗಳನ್ನೂ ರೈತರೇ ಎದುರಿಸಬೇಕೆ ವಿನ ಶ್ರೀಮಂತರು ಎದುರಿಸುತ್ತ ಇಲ್ಲ. ಕೆಲವೊಂದು ಮಂದಿ ಈ ಬಗ್ಗೆ ಕೊಟ್ಟ ಅಭಿಪ್ರಾಯವನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿಯನ್ನು ಎದುರಿಸುವಂಥಾವರು ಹಳ್ಳಿಗಾಡಿನ ಜನಗಳು. ಈ ಹಳ್ಳಿಯ ಅಭಿವೃದ್ಧಿ ಕಡೆ ನಾವು ಈಗಾಗಲೇ ಎರಡು ಯೋಜನೆಗಳಲ್ಲಿ ಹಣ ಖರ್ಚು ಮಾಡಿಕೊಂಡು ಹೋಗಿದ್ದೇವೆ. ಆದರೆ ಪ್ಲಾನಿಂಗ್ ಕಮಿಷನ್ನಿನಲ್ಲಿ ಹಳ್ಳಿಯವರ ರೆಪ್ರೆಸೆಂಟೇಷನ್ ಇಲ್ಲದೆ ಇರುವುದರಿಂದ, ಈ ಎರಡು ಪ್ಲಾನುಗಳಿಗೂ ಖರ್ಚುಮಾಡಿದ್ದೇವೆ ಎಂಬ ಹಣ ರೈತರ ಕಣ್ಣಿಗೆ ಮಣ್ಣು ಎರಚಿದಂತೆ. ಪಟ್ಟಣದಲ್ಲಿ ಒಬ್ಬ ಕೂಲಿಗಾರ ಇವತ್ತು ಹೆಚ್ಚು ಧಾರಣೆಯಾಗಿ ಇದ್ದರೆ ಪುಷ್ಕರ ಹೊಡಿ ಕಡಿಮೆ ಬೆಲೆಗೆ ವಸ್ತ್ರಗಳನ್ನು ಕೊಡುವಹಾಗೆ ಮಾಡುತ್ತಾನೆ, ಇಲ್ಲ ಹೆಚ್ಚು ಕೂಲಿ ತೆಗೆದುಕೊಳ್ಳುತಾನೆ. ಆದರೆ ರೈತ ಹತ್ತಾರು ಗಂಟೆಗಳ ಕಾಲ ಹಳ್ಳಿಗಳಲ್ಲಿ ದುಡಿದರೂ, ಅವನಿಗೆ ಸರಿಯಾದ ಪ್ರತಿಫಲ ದೊರಕುತ್ತಾ ಇಲ್ಲ. ಅವನು ಬೆಳೆಯುವ ಪೈರು ಮಿಡಿತೆ, ಕ್ರಿಮಿಕೀಟಗಳು, ಮುಂತಾದವುಗಳ ಹಾವಳಿಗೆ ತುತ್ತಾಗುತ್ತಿರುತ್ತವೆ; ಅವನ ದನಕರುಗಳಿಂದಲೂ ನಷ್ಟವಿದೆ. ಹೀಗಾಗಿ ಅವನ ಪರಿಸ್ಥಿತಿ ಚಿಂತಾಜನಕವಾಗಿದೆ.

ನನಗೆ ಈ ಕ್ಷಾಮದ ಪರಿಸ್ಥಿತಿ ಅನುಭವ ಬಿಜಾಪುರ ಜಿಲ್ಲೆಯಿಂದ ಬಂದವನಾದ ನನಗೆ ಸಾಕಷ್ಟು ಅನುಭವವಿದೆ; ಅದು ಉಳಿದವರಿಗೆ ಅಷ್ಟು ಇರಲಿಕ್ಕಿಲ್ಲ. ನನ್ನ ಭಾವನೆ ಅಲ್ಲಿ ಮೂರು ವರ್ಷಕ್ಕೆ 2 ವರ್ಷ ಇದ್ದೇಇರುತ್ತದೆ. ಅದರಂತೆ ಕೆಲವೊಂದು ಭಾಗಕ್ಕೆ, ಒಕ್ಕಲುತನಕ್ಕೆ ಮುಖ್ಯವಾಗಿ ಬೇಕಾದಂಥ ಸರಿಯಾದ ಒಂದು ಭೂಮಿ, ನೀರು ಮತ್ತು ಪಂಪು ಸೆಟ್ಟು—ಈ ಮೂರನ್ನೂ ಸರಿಯಗಿ ರೈತನಿಗೆ ಒದಗಿಸಿಕೊಡಬೇಕೆಂಬ ಸದುದ್ದೇಶದಿಂದ, ನಮ್ಮ ಸರಕಾರದವರು ಸಾಕಷ್ಟು ಸಹಾಯವನ್ನು ರೈತನಿಗೆ ಕೊಡಲಿಕ್ಕೆ ಹತ್ತಿದ್ದಾರೆ. ನೀರಾವರಿ ಸಲುವಾಗಿ ಎಷ್ಟೋ ಕೆರೆ, ಭಾವಿಗಳನ್ನು ತೋಡಿಸಿದ್ದಾರೆ. ಆದರೆ ಕೆಲವು ಜನ ಹೇಳಿದರು, ನಮ್ಮಲ್ಲಿ ಒಂದೆರಡು ಪಂಪುಸೆಟ್ಟುಗಳನ್ನೂ ಒದಗಿಸಿಲ್ಲ ಎಂದು. ಈ ಸಂದರ್ಭದಲ್ಲಿ ನಾವು ಹಿಂದೂಸ್ಥಾನದಲ್ಲಿ ನಮ್ಮ ಜನರ ಪರ್ಚೇಸಿಂಗ್ ಪವರ್ ಎಷ್ಟಿದೆ ಅನ್ನುವುದನ್ನು ಗಣನೆಗೆ ತೆಗೆದುಕೊಂಡರೆ, ನಮ್ಮ ಪರಿಸ್ಥಿತಿಯನ್ನು ತಿಳಿದುಕೊಂಡರೆ, ನಮ್ಮ

ರೈತರು ಹಿಂದಿದ್ದಾರೆಂದು ಗೊತ್ತಾಗುತ್ತದೆ. ಆದ್ದರಿಂದ ಈ ಅಭಾವ ಪರಿಸ್ಥಿತಿಯನ್ನು ಎದುರಿಸುವಾಗ ನಾನು ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತಿಳಿಯಬಯಸುತ್ತೇನೆ. ಈ ಅಭಾವಸ್ಥಿತಿಯನ್ನೆದುರಿಸಲು ನಮ್ಮ ಮುಂಬೈ ಕರ್ನಾಟಕದಲ್ಲಿ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದಾರೆ. ಆ ಕೆಲಸವನ್ನು ತೆಗೆದುಕೊಳ್ಳುವಾಗ ಆ ರೋಡು ರೈತರಿಗೆ ಉಪಯೋಗವಾಗುತ್ತದೆಯೆ ಅನ್ನುವುದನ್ನು ನೋಡಲಿಲ್ಲ. ಸ್ಕೇರ್ಸಿಟಿಏರಿಯ, ಉದ್ಯೋಗವಕಾಶವನ್ನು ಒದಗಿಸಬೇಕು ಎಂಬ ಒಂದೆ ಉದ್ದೇಶದಿಂದ ಕಾಮಗಾರಿಗಳನ್ನು ತೆಗೆದುಕೊಂಡರೆ ಉಪಯೋಗವಾಗುವುದಿಲ್ಲ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ತೆಗೆದುಕೊಳ್ಳಬೇಕು. ನಮ್ಮ ಅಜ್ಜಂದಿರು ಹೇಳುತ್ತಾ ಇದ್ದರು; ಒಂದು ಕಾಲದಲ್ಲಿ ದೋಗಿಬರ ಅಂತ ಬ ದಿತ್ತಂತೆ. ಅವಾಗ ಒಂದು ಸೇರು ಜೋಳ ಕೊಟ್ಟುಬಿಟ್ಟು ದಿನವೆಲ್ಲಾ ದೊಡ್ಡ ವಡ್ಡುಗಳನ್ನು ಹಾಕಿಸುತ್ತಿದ್ದರು ಕೆಲಸದ ಮೇಲೆ ದುಡಿಸುತ್ತಿದ್ದರಂತೆ. ಅದೇರೀತಿ ಕ್ಷಾಮ ಪರಿಹಾರ ಕೆಲಸಗಳಿಗೆ ಜನಗಳನ್ನು ನೇಮಿಸಿಕೊಂಡಾಗ ನಮ್ಮ ಸರಕಾರ ಸಹ ಮಾಡುತ್ತಾ ಇದೆ, ಸರಿಯಾದ ಕೂಲಿ ಕೊಡುತ್ತಾ ಇಲ್ಲ. ನಮ್ಮ ಬಿಜಾಪುರಜಿಲ್ಲೆಯೊಳಗೆ ಕೆಲವು ಪ್ರದೇಶಗಳಲ್ಲಿ ಬರ ಬಂದಿತ್ತು. ಆವಾಗ ಕೊಟ್ಟಂಥ ವೇಜು ಒರಿಜನಲ್ ರೇಟಿಗಿಂತ ಮೂರನೆ ಎರಡರಷ್ಟು ಕಡಿಮೆ, ಮೂರನೆ ಒಂದರಷ್ಟು ಕೊಟ್ಟರು. ಸ್ಕೇರ್ಸಿಟಿ ಇರುವಾಗ ಜೋಳದ ಅಭಾವವಿರುತ್ತದೆ, ಅದರ ಧಾರಣೆ ಜಾಸ್ತಿ ಇರುತ್ತದೆ; ಧಾರಣೆಗಳು ಹೆಚ್ಚಾಗಿ ಇರುವಾಗ ಕಡಿಮೆ ದರ ಕೊಟ್ಟರೆ ಅವರ ಗತಿ ಏನು ? ಕ್ಷಾಮಪರಿಸ್ಥಿತಿ ಬಂದಾಗ, ಕೆಲಸ ಕೊಟ್ಟಾಗ ದುಡಿಮೆಗೆ ತಕ್ಕಂತೆ ಸರಿಯಾದ ವೇಜಸ್ ಕೊಡಬೇಕು.

ಇನ್ನು ಬಿಜಾಪುರ ಜಿಲ್ಲೆಗೆ ಅನ್ವಯಿಸತಕ್ಕಂಥ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಮೊನ್ನೆ ನವಮೈಸೂರು ಆದಮೇಲೆ ಮಾತ್ರ ನಮ್ಮ ಜಿಲ್ಲೆಗೆ 14 ಟ್ಯಾಂಕುಗಳು ದೊರೆತಿವೆ. ಈಗಿನ ಪರಿಸ್ಥಿಗೆ ಸಾಕಷ್ಟು ಕೊಟ್ಟಿದ್ದಾರೆ ಅಂತಲೇ ಹೇಳುತ್ತೇನೆ. ಆದರೆ ಪಿ. ಡಬ್ಲ್ಯು.ಡಿ. ಮತ್ತು ಅಗ್ರಿಕಲ್ಚರಲ್ ಇಲಾಖೆಯವರೂ ಸ್ವಲ್ಪ ಹೊಂದಿಕೊಂಡು ಹೋಗಿ, ಕೆರೆಗಳನ್ನು ನಿರ್ಮಿಸಬೇಕು. ವ್ಯವಸಾಯದ ಇಲಾಖೆಯವರ ಸಲಹೆಇಲ್ಲದೆ, ಕಾಲುವೆ ಕೆಲಸವನ್ನು, ಕೆರೆಗಳ ಒಡ್ಡು ಕೆಲಸವನ್ನೂ ಕೈಗೊಳ್ಳಲಿಕ್ಕೆ ಸಾಧ್ಯವಿಲ್ಲ. ಕೆಲವೊಂದು ಭಾಗಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಸರಕಾರದವರು ಕೆರೆ ಕಟ್ಟಿದ್ದಾರೆ. ಆದರೆ ರೈತರು ಅದರಿಂದ ನೀರನ್ನು ತೆಗೆದುಕೊಂಡಿಲ್ಲ. ನೀರನ್ನು ಕೆರೆ ಬಲಗಡೆ ಕೊಟ್ಟರೆ ಸಂಪೂರ್ಣವಾಗಿ ಹೀರಿಹೋಗುತ್ತದಂತೆ; ಅದೇ ಬಲದಂಡೆಗೆ ಕೊಟ್ಟಿದ್ದರೆ ಅದರಿಂದ ಉಪಯೋಗವಾಗುತ್ತದೆಂದು ರೈತರು ಹೇಳುತ್ತಾರೆ. ಇಂಥ ಪರಿಸ್ಥಿತಿ ಆಗಬಾರದು. ನಾವು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಒಂದು ಕೆರೆ ನಿರ್ಮಿಸುವಾಗ ಭೂಮಿಯ ಗುಣ ಮೊದಲು ನೋಡಬೇಕು. ಮತ್ತು ಸೈಂಟಿಫಿಕ್ಕಾಗಿ ನೋಡಬೇಕು. ಗ್ಯಾಂಬ್ಲಿಂಗ್ ತರಹ ಒಕ್ಕಲುತನ ಮಾಡಿಕೊಂಡು ಬಂದರೆ, ಅದನ್ನು ಅನುಕರಣ ಮಾಡಿದರೆ ಉಪಯೋಗವಾಗುವುದಿಲ್ಲ. ಒಂದು ಸರಿ ಇಂಥ ಭೂಮಿಗೆ ನೀರು ಕೊಟ್ಟು ಅದು ಉಪಯೋಗವಾಗಲಿಲ್ಲ, ಕೆಟ್ಟುಹೋಯಿತು ಎಂದು ತಿಳಿದಮೇಲೆ ಆಂಟಿ—ಪ್ರಾಪಾಗಾಂಡ ಷುರುವಾಗುತ್ತದೆ—ಆ ಕೆರೆ ನೀರು ತೆಗೆದುಕೊಂಡರೆ ಉಪ್ಪು ಬೀಳುತ್ತದೆ, ಭೂಮಿ ಕೆಡುತ್ತದೆ ಎಂದು. ಆದ್ದರಿಂದ ಸರಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ನೀರು ಹೇಗೆ ಕೊಡಬೇಕು ಎಂಬುದನ್ನು ನಿರ್ಧರಿಸಬೇಕು.

ಈಗಾಗಲೆ ನಮಗೆ ಕೃಷ್ಣ ಮೇಲ್ದಂಡ ಯೋಜನೆ ಬರುತ್ತಾ ಇದೆ; ಕನಸು ನೆನಸಾಗುವ ಕಾಲ ಬರುತ್ತಾ ಇದೆ. ಆದರೆ ಬಿಜಾಪುರ ಜಿಲ್ಲೆಗೆ ಕೇವಲ ಕೆಲವು ತಾಲ್ಲೂಕುಗಳ ಜಮೀನುಗಳಿಗೆ ನೀರು ದೊರಕುತ್ತಾ ಇದೆ. ಗುಲ್ಬರ್ಗ, ರಾಯಚೂರು ಎಲ್ಲಿಗಾದರೂ ದೊರೆಯಲಿ, ಅದಕ್ಕೆ ಆಕ್ಷೇಪಣೆ ಇಲ್ಲ. ಆದರೆ ಬಿಜಾಪುರಕ್ಕೆ ಉಪಯೋಗವಾಗಬೇಕಾದರೆ ಆಲ್ಮಟ್ಟಿ ಹತ್ತಿರ ಅಪ್ಪರ್ ಕೃಷ್ಣ ಯೋಜನೆ ತೆಗೆದುಕೊಳ್ಳಬೇಕು. ಅದನ್ನು ಇನ್ನೊಂದು ಕಡೆಮಾಡಿದರೆ ಬಿಜಾಪುರಕ್ಕೆ ನೀರಾವರಿ ಬೆಳೆಗೆ ಅನುಕೂಲವಾಗುವುದಿಲ್ಲ. ಈಗ ನಾರಾಯಣಪುರದ ಹತ್ತಿರ control dam ಕಟ್ಟಬೇಕೆಂದು ಟೆಂಡರ್ ಕರೆದಿದ್ದಾರೆ. ಹೀಗೆ ಮಾಡಿದರೆ ಬಿಜಾಪುರ ಜಿಲ್ಲೆಗೆ ಒಂದು ಹನಿ ಕೂಡ ನೀರು ಬರುವುದಿಲ್ಲ. ಅದುದರಿಂದ ಆಲಮಟ್ಟಿ ಹತ್ತಿರ ಒಂದು dam ತೀವ್ರ ಮಾಡಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಬಿಜಾಪುರದ ಕೆಲವೊಂದು ಭಾಗಗಳಲ್ಲಿ ನೀರಾವರಿ ಬರುವುದಿಲ್ಲ. ಅಂಥಲ್ಲಿ ಭಾವಿ ತೋಡಿದರೆ ನೀರು ಸರಿಯಾಗಿ ಬೀಳುವ ಕೆಲವು ಊರುಗಳು ಸಿಂದಗಿ, ಇಂಡಗಿ ಮತ್ತು ಇತರ ಕೆಲವು ಕ್ಷೇತ್ರಗಳಲ್ಲಿ ಮೊದಲು ಹಣವನ್ನು ಅಲ್ಲಿಗೆ ಕೊಡುವುದಕ್ಕೆ ಪ್ರಯತ್ನ ಮಾಡಿರಿ. ನೀರನ್ನು ರೈತರು ಅನಾಯಾಸವಾಗಿ ತೆಗೆದುಕೊಳ್ಳುವುದಕ್ಕೆ ಎಲ್ಲಿ ಮುಂದೆ ಬರುತ್ತಾರೆಯೋ ಅಲ್ಲಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಿರಿ.

(ಶ್ರೀ ಎಸ್. ಎಂ. ಗುರೆಡ್ಡಿ)

ಕಾಂಟೂರ್ ಬಂಡಿಂಗ್ ಸಂಬಂಧ ಸ್ವಲ್ಪ ಹೇಳಬೇಕಾಗಿದೆ. ಬಿಜಾಪುರದಲ್ಲಿ ಒಡ್ಡಿನ ಕಾಮಗಾರಿ ಸರಿಯಾಗಿ ನಡೆಯುತ್ತಿದೆ. ಆದರೆ ಒಡ್ಡನ್ನು ಹಾಕುವಾಗ ಕೆಲವೊಂದು ಕುಂದು ಕೊರತೆಗಳು ಕಂಡು ಬಂದಿವೆ. ಒಡ್ಡು ಹಾಕುವುದು ಎಂದರೆ ಸಾಮೂಹಿಕ ಒಕ್ಕಲುತನ. ಒಡ್ಡಿನಲ್ಲಿ ಬಂದೀತೋ ಏನೋ ಎಂದು ಭಾಸವಾಗುತ್ತದೆ. ನೂರು ಎಕರೆ, ಇನ್ನೂರು ಎಕರೆ ತೆಗೆದುಕೊಂಡು ಒಂದು ಪ್ಲಾಟ್ ಮಾಡುತ್ತಿದ್ದಾರೆ. ಅದರಲ್ಲಿ ಒಂದು ಎಕರೆಗೆ ಒಡ್ಡು ಹಾಕಲು 20 ರೂಪಾಯಿ ಲೆಕ್ಕ ಹಾಕಿದ್ದಾರೆ. 10-20 ಎಕರೆ ಇದ್ದವನ ಹೊಲದಲ್ಲಿ ಒಂದೇ ಒಡ್ಡು ಬರುತ್ತದೆ, ಅದೇ ಒಂದು ಎಕರೆಯಲ್ಲಿ ಮೂರು ನಾಲ್ಕು ಒಡ್ಡುಗಳು ಬರುತ್ತವೆ. ಮೂರುನಾಲ್ಕು ಒಡ್ಡಿಗೂ 20 ರೂಪಾಯಿ, ಒಂದೇ ಒಡ್ಡು ಬಂದರೂ 20 ರೂಪಾಯಿ ಈ ರೀತಿ ಇರುತ್ತದೆ. ಇದರಿಂದ ರೈತರಿಗೆ ತುಂಬ ಅನ್ಯಾಯ ಆಗುತ್ತದೆಂದು ನನಗನ್ನಿಸುತ್ತದೆ. ಇದಲ್ಲದೆ ಈ ಒಡ್ಡಿನ ಸಲುವಾಗಿ ಎಕರೆಗೆ 20 ರೂಪಾಯಿ ಕೊಡುವಾಗ ಸಿಬ್ಬಂದಿ ಖರ್ಚು ಏನಿದೆ ಅದನ್ನೂ ರೈತರ ಮೇಲೆ ಹಾಕುತ್ತಿದ್ದಾರೆ. ಇದು ಸರಿಯಲ್ಲ. ಈಗ P.W.D. ಇಲಾಖೆ ಇದೆ. ಇದರ ಸಿಬ್ಬಂದಿ ಖರ್ಚನ್ನು ಯಾರ ಮೇಲೂ ಹಾಕುವುದಿಲ್ಲ. ಒಡ್ಡು ಹಾಕುವಾಗ ಭೂಮಿಯ ಸಾರವನ್ನು ಸಂರಕ್ಷಣೆ ಮಾಡುವುದಕ್ಕೆ ಒಡ್ಡು ಹಾಕುತ್ತಾರೆ. ಇದರಿಂದ ಹೆಚ್ಚು ಉತ್ಪತ್ತಿಯಾಗಿ ರಾಜ್ಯಕ್ಕೆ ಅನುಕೂಲವಾಗುತ್ತದೆ. ಸಿಬ್ಬಂದಿ ಖರ್ಚನ್ನು ರೈತರು ಕೊಡುವಂತಾಗಬಾರದು, ಅದನ್ನು ಸಾಕಷ್ಟು ಕಡಮೆ ಮಾಡಬೇಕು ಮತ್ತು ಯಾರ ಜಮೀನಿನಲ್ಲಿ ಒಡ್ಡು ಹಾಕುತ್ತೀರೋ ಅದಕ್ಕೆ ಸರಿಯಾಗಿ ಚಾರ್ಜ್ ಮಾಡಬೇಕು.

ಬಿಜಾಪುರ, ಸಿಂದಗಿ ಮತ್ತು ಇತರ ತಾಲ್ಲೂಕುಗಳಲ್ಲಿ ನಾಲ್ಕೈದು ಎಕರೆ ಹೊಲವಿದ್ದರೆ, ಅದರಲ್ಲಿ ಬಂತ್ ಹಾಕಲು ಒಂದೆರಡು ನೂರು ರೂಪಾಯಿ ಖರ್ಚು ಬರುತ್ತದೆ. ಆದರೆ ಹೊಲದ ಕಿಮ್ಮತ್ತು ಅಷ್ಟೇ ಆಗುತ್ತದೆ. ಆದಕಾರಣ ಮಣ್ಣನ್ನು ಕಾಪಾಡುವ ದೃಷ್ಟಿಯಿಂದ ಬಂಡ್ ಹಾಕತಕ್ಕ ಮಹತ್ವವಾದ ಕಾರ್ಯವನ್ನು ನಿರ್ವಹಿಸುವಾಗ ರೈತರಿಗೆ ಸಿಬ್ಬಂದಿಯ ಖರ್ಚು ಹಾಕಬಾರದೆಂದು ಕೇಳುತ್ತೇನೆ. ಬಂಡ್ ಹಾಕುವುದಕ್ಕೆ ಕೂಡ ಸಬ್ಸಿಡಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಬುಲ್‌ಡೋಜರ್ ಮತ್ತು ಟ್ರಾಕ್ಟರ್‌ಗಳನ್ನು ಬಿಜಾಪುರ ಜಿಲ್ಲೆ ಮುಂಬೈ ಕರ್ನಾಟಕದಲ್ಲಿದ್ದಾಗ ಸರ್ವೆ ಸಾಧಾರಣವಾಗಿ ಪ್ರತಿಯೊಬ್ಬ ರೈತನೂ ಆನಂದದಿಂದ ತೆಗೆದುಕೊಂಡು ಹೋಗುತ್ತಿದ್ದ. ಇವತ್ತಿನ ದಿವಸ ಬುಲ್‌ಡೋಜರ್, ಟ್ರಾಕ್ಟರ್‌ಗಳನ್ನು ಜನರು ಬೇಡವೆನ್ನುವ ಪರಿಸ್ಥಿತಿ ಬಂದಿದೆ. ರೈತನ ಹೊಲದಲ್ಲಿ ಹೊಡೆಯುತ್ತಿರುವಾಗ ಅದಕ್ಕೇನಾದರೂ ಆದರೆ DAOಗೆ ಬರೆದು, ಬೆಂಗಳೂರಿನಿಂದ ಅದಕ್ಕೆ ಸಂಬಂಧಪಟ್ಟವರು ಬಂದನಂತರ ಅದನ್ನು ಸರಿಮಾಡಿ ಚಾಲು ಮಾಡಬೇಕು. ಮೊದಲು ಡೀಸೆಲ್ ಎಣ್ಣೆ ಬೇಕಾದರೆ ಒಂದು ಜೀಪ್ ಇರುತ್ತಿತ್ತು. ಒಂದು ಟ್ರಕ್ಕಿನಲ್ಲಿ ಎಣ್ಣೆ ಮತ್ತು ಇತರ ಸಾಮಾನುಗಳನ್ನು ತಂದು ಸಪ್ಲೈ ಮಾಡುತ್ತಿದ್ದರು. ಈಗ ರೈತನು ಸಮೀಪದ ಪಟ್ಟಣದಿಂದ ಡೀಸೆಲ್ ಒಯ್ಯಬೇಕು. ಐದು ಹತ್ತು ಮೈಲಿಯಾದರೆ ಒಯ್ಯಬಹುದು. 20-30 ಇರತಕ್ಕ ಪಟ್ಟಣದಿಂದ ರೈತ ಗಾಡಿಯಲ್ಲಿ ಡೀಸೆಲ್ ಒಯ್ಯಬೇಕೆಂದರೆ ಬಹಳ ಕಷ್ಟವಾಗುತ್ತಿದೆ. ಸರ್ಕಾರದವರು ಇದಕ್ಕೆ ಹೆಚ್ಚು ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಮಳೆಯಿಂದ ಬರಗಾಲ ಪರಿಹಾರವಾಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಮಳೆ ಅವಶ್ಯವಾಗಿ ಬೇಕು. ಮಳೆ ಬಂದರೂ ಕೂಡ ರೈತ ತನ್ನ ಬೆಳೆಯನ್ನು ಮಿಡತೆಗಳ ಹಾವಳಿಯಿಂದ ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಅಸಮರ್ಥನಾಗಿದ್ದಾನೆ. ಇಂದಗಿ, ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳ್, ಬಾಗಲಕೋಟೆ, ಹೀಗೆ ಒಂದು trackನಲ್ಲಿ ಮಿಡತೆಗಳ ಹಾವಳಿ ಬಹಳ ಹೆಚ್ಚಾಗಿದೆ. ಹೋದ ಸಲ ನಾವು ಒಂದು ಸೆಮಿನಾರ್ ಮಾಡಿದಾಗ ಅಲ್ಲಿಗೆ ನಾವು ಹೋಗುವಾಗ ಬೆಳೆ ಚೆನ್ನಾಗಿದ್ದುದು ಅಲ್ಲಿಂದ ಹಿಂತಿರುಗುವ ವೇಳೆಗೆ ಅದೆಲ್ಲ ಮಿಡತೆಗಳ ಹಾವಳಿಯಿಂದ ನಷ್ಟವಾಗಿತ್ತು. Deputy Commissioner ಮತ್ತು Assistant Commissioner ಅದಕ್ಕೆ full assessment ಹಾಕಿದ್ದಾರೆ. ಕಾರಣ ಅವರು ನೋಡಿದಾಗ ಬೆಳೆ ಚೆನ್ನಾಗಿತ್ತು. ಆದಕಾರಣ ಮಿಡತೆಗಳ ಹಾವಳಿಯನ್ನು ತಪ್ಪಿಸಬೇಕು. ಹೇಗೆ malaria eradication ಮಾಡುತ್ತಿದ್ದೀರಿ, plague ಬಂದ ಕೂಡಲೇ, ಮಾರಕ ಬಂದ ಕೂಡಲೇ ತಕ್ಷಣ ಸಿಬ್ಬಂದಿಯನ್ನು ಹತೋಟಿ ಕಾರ್ಯ ನಡೆಸುವ ಸಲುವಾಗಿ ವ್ಯವಸ್ಥೆ ಮಾಡುತ್ತಿದ್ದೀರಿ, ಅದೇ ಪ್ರಕಾರ ಮಿಡತೆಗಳ ಮತ್ತು ಕೋರಿ ಹುಳಗಳ ಹಾವಳಿ ಎಲ್ಲಿದೆಯೋ ಅಲ್ಲಿ ಅದರ ನಿವಾರಣೆಗೆ ವ್ಯವಸಾಯ ಇಲಾಖೆಯಲ್ಲಿ ಒಂದು ಪ್ರತ್ಯೇಕವಾದ ಡಿವಿಷನ್ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಎಲ್ಲಿ ಈ ರೀತಿಯ ಹಾವಳಿ ಇದೆ ಎಂದು ವರದಿ ಬರುತ್ತದೆಯೋ ಅಲ್ಲಿಗೆ equipment ಮುಂತಾದುವನ್ನು ತಕ್ಷಣ ತೆಗೆದುಕೊಂಡು ಹೋಗಿ ಕಾರ್ಯ ರೂಪದಲ್ಲಿ ನಿವಾರಣಾ ಕಾರ್ಯವನ್ನು ತರಲಿಕ್ಕೆ ಸಾಧ್ಯವಿದೆ ಎಂದು ತಿಳಿದುಕೊಂಡಿದ್ದೇನೆ.

ಈ ಎಲ್ಲಕ್ಕೂ ಒಕ್ಕಲುತನದ ಮಂತ್ರಿಗಳು ಹೆಚ್ಚು ಗಮನ ಕೊಟ್ಟು ಶಾಶ್ವತವಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ಮುಂದೆ ಈ ಬಗ್ಗೆ ಒಂದು ಕಾಯಿದೆಯೂ ಬರುವದಿದೆ. ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಒಂದು ಮಹತ್ವವಾದ ಹೆಜ್ಜೆಯನ್ನಿಟ್ಟಿದ್ದಾರೆ. ಅದರಲ್ಲಿ 60-70 ಲಕ್ಷ ರೂಪಾಯಿ ಕೊಡುವುದಕ್ಕಿಂತ ನನಗೆ ಅನ್ನಿಸುವಮಟ್ಟಿಗೆ 20-30 ಕೋಟಿ ರೂಪಾಯಿ ಕೊಟ್ಟರೂ ಚಿಂತೆಯಿಲ್ಲ, 8-10 ಕೋಟಿ ರೂಪಾಯಿಗಳನ್ನು ಅವರು ಒದಗಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರಭದ್ರಪ್ಪ ಸಿರೂರು (ಯಲಬುರ್ಗ).—ಮಾನ್ಯ ಸಭಾಪತಿಗಳೇ, ನಮ್ಮ ಸಭೆಯ ಮುಂದೆ ಬಂದಿರುವ ಈ ಪ್ರಸ್ತಾವದ ಬಗ್ಗೆ ನಾನೂ ಕೂಡ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಾನು ರಾಯಚೂರು ಜಿಲ್ಲೆಯಿಂದ ಬಂದವನು. ಆದುದರಿಂದ ರಾಯಚೂರು ಜಿಲ್ಲೆಯ ಮಟ್ಟಿಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ತುಂಗಭದ್ರ ನದಿಯಿಂದ ರಾಯಚೂರು ಜಿಲ್ಲೆಯ ಕೊಪ್ಪಳ, ಮತ್ತು ಇತರ ತಾಲ್ಲೂಕುಗಳಲ್ಲಿ 5,80,000 ಎಕರೆ ನೀರಾವರಿಯಾಗುವದು ಸಾಧ್ಯವಿದೆ. ಆದರೆ ಈಗ ಒಂದು ಲಕ್ಷದಷ್ಟು ಕೂಡ ನೀರಾವರಿಯಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಗಂಗಾವತಿ ತಾಲ್ಲೂಕಿನಲ್ಲಿ ಶಿದ್ದಾಪುರ ಭಾಗದಲ್ಲಿ ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ. ಅದರೊಳಗೆ ಎರಡು ಸಾವಿರ ಎಕರೆ ಕೂಡ ಈಗ ನೀರಾವರಿಯಾಗುತ್ತಿಲ್ಲ. ಅಲ್ಲಿ ಕಾಲುವೆಗಳು ಸರಿಯಾಗಿ ದುರಸ್ತಾಗಿಲ್ಲ. ಆ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಅನೇಕ ಸಲ ರೈತರು ವಿಜ್ಞಾಪನೆ ಮಾಡಿಕೊಂಡಿದ್ದಾರೆ. ಆ ಕಾಲುವೆ ಸಿಂಧನೂರು ತಾಲ್ಲೂಕಿಗೆ ಹೋಗುತ್ತದೆ. ಅಲ್ಲಿ ಯಾವುದೋ ಒಂದು ತರಹ ಕೆರೆ ಭೂಮಿ ಇದ್ದು ನೀರು ಸರಿಯಾಗಿ ಕಾಲುವೆಯಲ್ಲಿ ಬರುತ್ತಿಲ್ಲ. ನೀರಿನ ಕೊರತೆ ಎಲ್ಲಿದೆಯೋ ಅಲ್ಲಿಗೆ ನೀರನ್ನು ಕೊಡುವುದು ಆಗಿಲ್ಲ. ಈ ನೀರಾವರಿ ಯೋಜನೆಯನ್ನು ಸರ್ಕಾರದವರು ಯಾವ ರೀತಿ ಯಾಗಬೇಕೆಂದು ಪ್ರಯತ್ನ ಮಾಡಿದರೋ ಅಷ್ಟು ಯಶಸ್ವಿಯಾಗಿಲ್ಲವೆಂದು ಹೇಳಬೇಕಾಗಿದೆ.

ಇದೂ ಅಲ್ಲದೆ ಕೊಪ್ಪಳ, ಕುಷ್ಟಗಿ, ಎಲಬುರ್ಗ, ಗಂಗಾವತಿ ಇಂಥ ಕೆಲವೊಂದು ತಾಲ್ಲೂಕುಗಳು ಮೊದಲಿನಿಂದಲೂ ಬರಗಾಲಕ್ಕೆ ತುತ್ತಾಗುತ್ತಿವೆ. ಬರಗಾಲದ ನಿವಾರಣೆಗೆ ಕೆಲವೊಂದು ಯೋಜನೆಗಳನ್ನು ಮಾಡುವುದು ಸರಿ ಎಂದು ನನ್ನಗನ್ನಿಸುತ್ತದೆ. ಈಗ ತುಂಗಭದ್ರ ನದಿ ಏನಿದೆ ಅದಕ್ಕೆ ಧಾರವಾಡ ಜಿಲ್ಲೆಯೊಳಗೆ ಅಥವಾ ಶಿವಮೊಗ್ಗ ಜಿಲ್ಲೆಯೊಳಗೆ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಿದರೆ ಅದರಿಂದ ಧಾರವಾಡ ಜಿಲ್ಲೆಯೊಳಗೆ ಮತ್ತು ರಾಯಚೂರು ಜಿಲ್ಲೆಯ ಕೊಪ್ಪಳ, ಎಲಬುರ್ಗ, ಕುಷ್ಟಗಿ ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯವಾಗುತ್ತದೆ. ಮಲಪ್ರಭ ನದಿಗೆ ನವಿಲು ತೀರ್ಥದ ಬಳಿ ಅಣೆಕಟ್ಟನ್ನು ಕಟ್ಟುವುದರಿಂದ ಅದನ್ನು ಇನ್ನಿಷ್ಟು ಎತ್ತರಿಸಿದರೆ ಕುಷ್ಟಗಿ ತಾಲ್ಲೂಕಿಗೆ ನೀರಾವರಿ ಸೌಕರ್ಯ ಆಗಬಹುದು.

ನಮ್ಮ ಜಿಲ್ಲೆಯೊಳಗೆ ಅನೇಕ ಕೆರೆಗಳಿವೆ, ಹಳ್ಳಗಳೂ ಬಹಳ ಇವೆ. ಅವುಗಳಗ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿದರೆ ಅದರಿಂದಲೂ ಹೆಚ್ಚು ನೀರಾವರಿಯಾಗಬಹುದು. ಇದಲ್ಲದೆ ತುಂಗಭದ್ರಾ ಅಣೆಕಟ್ಟಿನಿಂದ ವಿದ್ಯುತ್‌ಚ್ಛಕ್ತಿ ಹುಟ್ಟುತ್ತದೆ. ಆದರೆ ನಮ್ಮ ಅಲ್ಲಿಯ ತಾಲ್ಲೂಕಿಗೆ ಈ ವಿದ್ಯುತ್‌ಚ್ಛಕ್ತಿ ಉಪಯೋಗವಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ನೀರಾವರಿ ಬಾವಿಗಳಿಗೆ ವಿದ್ಯುತ್‌ಚ್ಛಕ್ತಿ ಒದಗಿಸಿಕೊಡಬೇಕೆಂದು ರೈತರು ಅರ್ಜಿ ಸಲ್ಲಿಸಿದ್ದರೂ ಕೂಡ ಪೂರೈಕೆ ಮಾಡಿಲ್ಲ. ಕೊಪ್ಪಳ ಕುಷ್ಟಗಿ, ಯಲಬುರ್ಗಿ ತಾಲ್ಲೂಕು 30–35 ಮೈಲಿ ಸಮೀಪದಲ್ಲಿ ಇದೆ ಅಲ್ಲಿ ವಿದ್ಯುತ್‌ಚ್ಛಕ್ತಿ ಪೂರೈಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಇನ್ನೊಂದು ವಿಷಯ ಸಭೆಯ ಗಮನಕ್ಕೆ ತರುತ್ತೇನೆ. ಗಂಗಾವತಿಯಲ್ಲಿ ಕೆಲವು ಕಡೆ ನೀರು ಕೊಡದೇ ಇದ್ದರೂ ಕೂಡ ಕಂದಾಯ ವತ್ತಾಯದಿಂದ ವಸೂಲ್ಮಾಡುತ್ತಾರೆ. ಆದ್ದರಿಂದ ಇದನ್ನು ಸರಕಾರದ ಗಮನಕ್ಕೆ ತಂದಿದ್ದೇನೆ. ರೈತರಿಗೆ ತೊಂದರೆಯಾಗದ ಹಾಗೆ ಸರಿಯಾಗಿ ಕೆಲಸ ಮಾಡಿಕೊಡಲು ನೀರಾವರಿ ಅಧಿಕಾರಿಗಳಿಗೆ ಸರಕಾರದವರು ತಿಳಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೈತರಿಗೆ ಸಕಾಲದಲ್ಲಿ ಗೊಬ್ಬರ ಬೀಜ ಪೂರೈಕೆ ಮಾಡುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ಬಿತ್ತನೆಯಾದ ನಂತರ ಬೀಜ ಪೂರೈಕೆ ಮಾಡಿದರೆ ಅನುಕೂಲವಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಅನುಕೂಲವಾಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ನಮ್ಮ ಸ್ನೇಹಿತರಾಗಿರ ತಕ್ಕಂಥ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಈ ಸಭೆಯ ಮುಂದೆ ದೇಶದಲ್ಲಿರತಕಂಥಾ ಅಭಾವ ಪರಿಸ್ಥಿತಿಯ ಬಗ್ಗೆ ಈ ನಿರ್ಣಯವನ್ನು ತಂದು ಚರ್ಚೆಗೆ ಅವಕಾಶ ಮಾಡಿಕೊಟ್ಟು ಬಹಳ ಉಪಕಾರ ಮಾಡಿದ್ದಾರೆ.

(ಶ್ರೀ ವಿ. ಮಸಿಯಪ್ಪ)

ಬಹಳ ಉಪಯುಕ್ತವಾದ ವಿಷಯ ಚರ್ಚೆ ಮಾಡುತ್ತಿರುವುದರಿಂದ ಅವರನ್ನು ಮೊದಲು ಅಭಿನಂದಿಸುತ್ತೇನೆ.

ಸಾಧಾರಣವಾಗಿ ನನ್ನ ತಾಲ್ಲೂಕಿಗೆ ಸಂಬಧಪಟ್ಟ ನನ್ನ ಕ್ಷೇತ್ರಕ್ಕೆ ಅನ್ವಯಿಸುವ ಕೆಲವು ವಿಷಯವನ್ನು ಪ್ರಸ್ತಾಪ ಮಾಡಲು ನಾನು ಇಚ್ಛೆಪಡುತ್ತೇನೆ. ಶ್ರೀ ಮಾರ್ಕ ಹುಚ್ಚಮಾಸ್ತಿಗೌಡರು ಅಭಾವ ಪರಿಸ್ಥಿತಿಯ ಶಾಶ್ವತ ನಿವಾರಣೆಗೆ ತಾತ್ಕಾಲಿಕ ಪರಿಹಾರ ಕೊಡುವುದಕ್ಕೆ ಅನೇಕ ಉಪಯುಕ್ತ ಸಲಹೆ ಕೊಟ್ಟಿದ್ದಾರೆ. ನಾನೂ ಸಹ ಒತ್ತಾಯ ಪೂರ್ವಕ ಸರಕಾರದ ಗಮನಕ್ಕೆ ತರಲು ಇಷ್ಟಪಡುವುದು ಏನೆಂದರೆ ನೀರಾವರಿ ಕಾಮಗಾರಿ ತೆಗೆದುಕೊಳ್ಳಲು ಸರಕಾರ ಈಗ ಅನುಸರಿಸುತ್ತಿರುವ ನೀತಿ ಏನಿದೆಯೋ ಅದರಲ್ಲಿ ಮೊದಲು ಸರ್ವೆ ಮಾಡಿಸತಕ್ಕಂಥಾದ್ದು ಅಗತ್ಯವಾಗಿದೆ ಅದು ಮುಖ್ಯವಾಗಿದೆ. ಅನುಕೂಲ ನೋಡಿಕೊಂಡು ಹಣ ಮಂಜೂರು ಮಾಡಬೇಕು. ಇವರಿಂದ ಅಷ್ಟು ಹೆಚ್ಚು ಪರಿಣಾಮವಾಗುವುದಿಲ್ಲ. ಇದರ ಬದಲು ಸಮಗ್ರವಾಗಿ ಸರ್ವೆ ನಡೆಸಿ ಎಲ್ಲಿ ಕೆರೆ ಕಟ್ಟಿ ಕಾಮಗಾರಿ ತೆಗೆದುಕೊಳ್ಳಬೇಕು. ಒಡ್ಡು ಹಾಕಿ ನೀರು ನಿಲ್ಲಿಸಬೇಕು ಸಬ್‌ಸಾಯಿಲ್ ನೀರಿನ ಅನುಕೂಲ ಎಲ್ಲಿ ಇದೆ ಎಂಬುದಕ್ಕೆ ಸಮಗ್ರವಾಗಿ ಪರಿಶೀಲನೆ ನಡೆಸಿ ಅದರ ಆಧಾರದ ಮೇಲೆ ಒಂದು ಕಾರ್ಯಕ್ರಮ ಕೈಕೊಳ್ಳತಕ್ಕಂಥಾದ್ದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳತಕ್ಕಂಥಾದ್ದು ಏನು ಅಂದರೆ ಒಂದು ಯೋಜನೆ ಈಗ ಸೂಕ್ತ ಎಂದು ಕಂಡು ಬಂದಿದ್ದರೆ, ಸರಕಾರ ಅದನ್ನು ಕಾರ್ಯಗತಗೊಳಿಸುವುದನ್ನು ವಿಳಂಬ ಮಾಡುವುದರಿಂದ ನಾಲ್ಕಾರು ವರ್ಷಗಳಾದ ನಂತರ ಅದೇ ಯೋಜನೆ ಸೂಕ್ತವಲ್ಲ, ನಾನ್ ಫೀಜಿಬಲ್ ಖರ್ಚು ಬಹಳವಾಗುತ್ತದೆ ಎಂಬ ಅಭಿಪ್ರಾಯ ಬರುತ್ತದೆ. ಅನೇಕ ಕಾರಣಗಳ ಮೂಲಕ ಹೀಗೆ ಆಗುತ್ತದೆ. ಇದು ಆಗದಂತೆ ಒಂದು ಸಮಗ್ರವಾದ ಯೋಜನೆಯ ಸರ್ವೆ ನಡೆಸಿ ಕಾರ್ಯಕ್ರಮ ಕೈಕೊಳ್ಳತಕ್ಕದ್ದು ಸೂಕ್ತ ಎಂದು ರೆವಿನ್ಯೂ ಸಚಿವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ. ಅನೇಕ ಕಡೆ ಬಂಜರು ಜಮೀನನ್ನು ಸಾಗುವಳಿಗೆ ಬಡ ರೈತರಿಗೆ ಕೊಡಲ್ಪಟ್ಟಿರುತ್ತದೆ. ಅಂಥ ಭೂಮಿಯಲ್ಲಿ ಹೆಚ್ಚಾಗಿ ದ ಡಿದು ನೀರು ನಿಲ್ಲಿಸಿ ಸಾಗುವಳಿ ಮಾಡುತ್ತಾನೆ. ಒಂದು ಯೋಜನೆ ಮಾಡಿದ ಬಳಿಕ ಕೆರೆ ಕಟ್ಟೆ ಹಾಕಲು ಪುನಃ ಅದೇ ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕ ಸಂದರ್ಭ ಬರುತ್ತದೆ. ಅಂಥಲ್ಲಿ ತಯಾರಿಸುವ ಅಣೆಕಟ್ಟು ಮೂಲಕ ಅಲ್ಲಿಯ ಜಮೀನು ಬೇರೆ ಜಾಸ್ತಿಯಾಗಿರುವುದರಿಂದ ಆ ಯೋಜನೆ ಕೈ ಬಿಡತಕ್ಕಂಥ ಪರಿಸ್ಥಿತಿ ಬರುತ್ತದೆ. ಆದುದರಿಂದ ಎಲ್ಲ ಹಳ್ಳಿಗಳಲ್ಲಿ ಗೋಕಟ್ಟೆ ಜಮೀನು ರಿಜರ್ವ್ ಮಾಡಿ ಇಟ್ಟುಕೊಳ್ಳಬೇಕು ಯಾರಿಗೂ ವಿಲೆ ಮಾಡಬಾರದು ಎಂದು ತಿಳಿಸಲು ಇಷ್ಟಪಡುತ್ತೇನೆ.

ಅಭಾವ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯಲು ನೀರು ದೊರೆಯುವುದಿಲ್ಲ. ಒಂದು ದೊಡ್ಡ ನದಿ ಹರಿಯುತ್ತಿದ್ದರೆ ಅದಕ್ಕೆ ಒಂದು ಅಣೆಕಟ್ಟು ಕಟ್ಟಿ ಯೋಜನೆ ಮಾಡಿದರೆ ಸಾವಿರಾರು ಎಕರೆ ಭೂಮಿ ನೀರಾವರಿಯಾಗುತ್ತದೆ. ಮತ್ತು ಶಾಶ್ವತವಾಗಿ ತೊಂದರೆ ಪರಿಹಾರವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಜವನಗೊಂಡ ಎಂಬ ಒಂದು ಯೋಜನೆ ಇದೆ. ಅದನ್ನು ತೆಗೆದುಕೊಳ್ಳಬೇಕು. ಅಲ್ಲಿ ಒಂದೇ ಬಾವಿ ಇರುವುದರಿಂದ ಸುತ್ತು ಮುತ್ತಲಿನ ಹಳ್ಳಿಗಳಲ್ಲಿ ಕುಡಿಯಲು ನೀರು ದೊರೆಯುವುದಿಲ್ಲ. ಕಪಿಲ ಬಾವಿಯಿಂದ ನೀರು ಹೆಚ್ಚಾಗಿ ಸಿಕ್ಕುವುದಿಲ್ಲ. ಈ ಸಂದರ್ಭದಲ್ಲಿ ನಾನು ನೋಡಿಕೊಂಡು ಬಂದಿರುವ ಒಂದು ವಿಷಯ ತಿಳಿಸಲು ಇಷ್ಟಪಡುತ್ತೇನೆ. ಅದನ್ನು ಹೇಳಿದರೆ ತಪ್ಪಾಗಲಾರದು ಎಂದು ನಾನು ಭಾವಿಸಿದ್ದೇನೆ. ನಾನು ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ಕೊಟ್ಟ ಕಾಲದಲ್ಲಿ ಕ್ಯಾಲಿಫೋರ್ನಿಯಾಕ್ಕೆ ಹೋಗಿದ್ದೆ. ಅಲ್ಲಿಯ ಮಳೆ ಹವಾ ಗುಣ ನಮ್ಮ ಇಂಡಿಯಾ ದೇಶದ ವಾತಾವರಣದಂತೆಯೇ ಇದೆ. ಕೆಲವು ಪ್ರದೇಶದಲ್ಲಿ 15 ರಿಂದ 20 ಅಂಗುಲ ಮಳೆ ಬೀಳುತ್ತದೆ. ಇನ್ನು ಕೆಲವು ಪ್ರದೇಶಕ್ಕೆ ಮೂರು ನಾಲ್ಕು ಅಂಗುಲ ಮಳೆಯಾಗುತ್ತಿದೆ. ಅದಲ್ಲದೆ 50 ಅಂಗುಲ ಮಳೆಯಾಗುವ ಪ್ರದೇಶವೂ ಇದೆ. ವ್ಯವಸಾಯವೇ ಅಲ್ಲಿಯ ಜನರ ಪ್ರಭಾವ ಉದ್ಯೋಗವಾಗಿದೆ. ಕೆಲವು ಕಡೆ ಮಳೆ ಕಡಮೆಯಾಗುತ್ತಿದ್ದರೂ ಕೂಡ ಕೆರೆ ಕಟ್ಟೆ ಕಟ್ಟಿ ಅವುಗಳಿಂದ ಯಥೇಚ್ಛವಾಗಿ ನೀರು ತೆಗೆದುಕೊಂಡು ಹಣ್ಣಿನ ತೋಟ, ಹುಲ್ಲುಗಾವಲು, ಕುರಿ, ಹಂದಿ, ಹಸು, ಸಾಕುವುದು ಮಾಂಸ, ಮೊಟ್ಟೆ ಮಾರುವುದು ಮುಂತಾದ ಉದ್ಯೋಗ ಪ್ರಧಾನವಾದುದು ಆಗಿದೆ. ಆದರಿಂದ ಅಲ್ಲಿಯ ವ್ಯವಸಾಯಗಾರನು ಯಥೇಚ್ಛವಾಗಿ ಸಂಪಾದನೆ ಮಾಡಿ ಸುಖದಿಂದ ಜೀವನ ನಡೆಸುತ್ತಿದ್ದಾನೆ. ಅದರಂತೆಯೇ ನಮ್ಮ ಸಂಸ್ಥಾನದಲ್ಲಿಯೂ ಕೂಡ ಎಲ್ಲಿ ಮಳೆ ಕಡಿಮೆಯಾಗುತ್ತಿದೆಯೋ ಅಂಥ ಪ್ರದೇಶದಲ್ಲಿ ಹೆಚ್ಚಾಗಿ ಪಶುಪಾಲನ ಯೋಜನೆ ಒಂದನ್ನು ತಯಾರು ಮಾಡಬೇಕೆಂದು ಈ ಸನ್ನಿವೇಶದಲ್ಲಿ ಮಾನ್ಯ ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಡೈರಿ ಯೋಜನೆ ಮಾಡಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಬ ಗಳೂರಿನಲ್ಲಿ ಒಂದು ಹಾಲಿನ ಯೋಜನೆ ಸರಕಾರ ಮಾಡಿದ್ದಾರೆ. ಈ ಡೈರಿ ಯೋಜನೆಯಿಂದ ಸುತ್ತುಮುತ್ತಲಿನ ಹಳ್ಳಿಗಳಿಗೆ ಬಹಳ ಸಹಾಯವಾಗು

ತ್ತದೆ. ಆದುದರಿಂದ ಬರೀ ಆಹಾರ ಧಾನ್ಯ ಬೆಳೆಯುವ ವ್ಯವಸಾಯ ಮಾಡುವುದಲ್ಲದೆ ಹಾಲು, ಹಣ್ಣು, ಮೊಟ್ಟೆ, ಮೊಸರು, ಬೆಣ್ಣೆ ಮುಂತಾದ ಪುಷ್ಟಿಕರ ಆಹಾರ ವಿದ್ಯಾರ್ಥಿಗಳ ಉತ್ಪಾದನೆ ಹೆಚ್ಚಾಗಿ ಮಾಡುವುದು ಅವಶ್ಯಕವಾಗಿದೆ ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ತಿಳಿಸಲು ನಾನು ಇಷ್ಟಪಡುತ್ತೇನೆ.

ಇನ್ನು ನಮ್ಮ ತಾಲ್ಲೂಕಿನ ಪರಿಸ್ಥಿತಿ ಇಂದು ಯಾವ ರೀತಿ ಇದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸುಮಾರು ಒಂದು ಒಂದೂವರೆ ತಿಂಗಳು ಕೆಳಗೆ ಬಹಳ ಕಷ್ಟದ ಪರಿಸ್ಥಿತಿ ಇದ್ದಿತು. ನಮ್ಮ ಜಿಲ್ಲಾಧಿಕಾರಿಗಳು ನಮ್ಮ ತಾಲ್ಲೂಕಿನ ಎಲ್ಲಾ ಭಾಗದಲ್ಲಿಯೂ ಪ್ರವಾಸ ಮಾಡಿ ಕಠಿಣ ಪರಿಸ್ಥಿತಿ ತಿಳಿದುಕೊಂಡು ಸಹಾಯ ಮಾಡಲು ಯಾವ ಕಾಮಗಾರಿಗಳನ್ನು ಎಲ್ಲೆಲ್ಲಿ ಕೈಕೊಳ್ಳಬೇಕೆಂಬ ಬಗ್ಗೆ ಒಂದು ಪಟ್ಟಿ ಮಾಡಿಕೊಂಡು ಹೋದರು.

Mr. DEPUTY SPEAKER.—The Hon'ble Member may continue to-morrow.

The House will now rise to meet to-morrow at 12–30 P.M.

The House adjourned at Six of the Clock to meet again at Thirty Minutes Past Twelve of the Clock on Tuesday, the 24th September 1963.

WD 1239—GPB—900—10-12-63